"VARTHA JANAPADA" Monthly - April 2019
"ವಾರ್ತಾ ಜನಪದ" ಮಾಸಿಕ – ಏಪ್ರಿಲ್ 2019

Page No. -52
RNI No. KAR/KAN/2017/75029

Regd No.KA/BGGPO/2583/2018-20 Licensed to post without prepayment Licence No, PMG/BG/ WPP-365/2018-20
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26

# AllToPoll



"ಮತದಾನ ಮಾಡಿದರೆ ಹೆಣ್ಣು ತೆರೆಯುವುದು ದೇಶದ ಕಣ್ಣು"

ಲೋಕಸಭಾ ಚುನಾವಣೆ – 2019

ಗುರುವಾರ, 18 ಮತ್ತು ಮಂಗಳವಾರ 23 ಏಪ್ರಿಲ್ 2019 | ಬೆಳಗ್ಗೆ 7 ರಿಂದ ಸಂಜೆ 6 ಗಂಟೆವರೆಗೆ

CALL TOLL FREE 1950

"ಯಾವುದೇ ಮತದಾರ ಮತದಾನದಿಂದ ಹೊರಗುಳಿಯಬಾರದು"

ceokarnataka

downloaded from: www.kpscvaani.com

ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಏಪ್ರಿಲ್ 2019

ಲೋಕಸಭಾ ಚುನಾವಣೆ - 2019

ದೇಶದ ಮಹಾ ಉತ್ಸವ






ಲೋಕಸಭಾ ಚುನಾವಣೆ ಅಂಗವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಹಾತ್ಮಾಗಾಂಧಿ ಮಾಧ್ಯಮ ಕೇಂದ್ರದಲ್ಲಿ ಏರ್ಪಡಿಸಲಾಗಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮುಖ್ಯ ಚುನಾವಣಾಧಿಕಾರಿ ಸಂಜೀವ್ ಕುಮಾರ್ ಅವರು ಮತದಾರರ ಅನುಕೂಲಕ್ಕಾಗಿ ಸಿದ್ಧಪಡಿಸಿರುವ ಆ್ಯಪ್‌ಗಳನ್ನು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಜಂಟಿ ಚುನಾವಣಾಧಿಕಾರಿ ಎ.ವಿ. ಸೂರ್ಯಸೇನ್ ಮತ್ತು ತೋಟಗಾರಿಕಾ ಇಲಾಖೆ ನಿರ್ದೇಶಕರಾದ ಡಾ. ವೆಂಕಟೇಶ್ ಉಪಸ್ಥಿತರಿದ್ದಾರೆ.



ಬೆಂಗಳೂರು ನಗರ ವ್ಯಾಪ್ತಿಯ ಮೂರು ಲೋಕಸಭಾ ಕ್ಷೇತ್ರ ಚುನಾವಣಾಧಿಕಾರಿಯಾದ ಮಂಜುನಾಥ್ ಪ್ರಸಾದ್ ಅವರು ಮತದಾರರಿಗೆ ಮತಯಂತ್ರ ಕುರಿತು ಮಾಹಿತಿ ನೀಡುತ್ತಿರುವುದು.




downloaded from: www.kpscvaani.com

ವಾರ್ತಾ
# ಜನಪದ
ಸಂಪುಟ-02 • ಸಂಚಿಕೆ-7 • ಏಪ್ರಿಲ್ 2019

05 17ನೇ ಲೋಕಸಭಾ ಚುನಾವಣೆ ಪೂರ್ವ ಸಿದ್ಧತೆಗಳು
• ವೆಂಕಟೇಶ್ ಪ್ರಸಾದ್ ಬಿ. ಎಸ್.

11 17ನೇ ಲೋಕಸಭಾ ಚುನಾವಣೆಯ ಸಂಕ್ಷಿಪ್ತ ಮಾಹಿತಿ
• ಉಮೇಶ್ ಕೂಲಿಗೆರೆ

17 ಕರ್ನಾಟಕ ಚುನಾವಣೆ; ಒಂದು ನೋಟ
• ಪರಶೀಸುತ

20 ಪಾರದರ್ಶಕ ಚುನಾವಣೆ ಹಾಗೂ ನಿಷ್ಪಕ್ಷಪಾತ ಮಾಧ್ಯಮ
• ಡಾ. ಪದ್ಮರಾಜ ದಂಡಾವತಿ

24 ಮತದಾನ ಮತ್ತು ಮತದಾರನ ಪ್ರಾಮುಖ್ಯತೆ
• ಮಂಜುನಾಥ್

28 ಚುನಾವಣಾ ಆಯೋಗದ ಕರ್ತವ್ಯಗಳು
• ಭಾರತಿ

30 ಸರ್ಕಾರ ರಚನೆಯ ವಿವಿಧ ವ್ಯವಸ್ಥೆಗಳು
• ಶ್ರೀನಿವಾಸ್

32 ಮತದಾನದಲ್ಲಿ ನೋಟಾದ ಪ್ರಾಮುಖ್ಯತೆ
• ಸವಿತ

34 ಚುನಾವಣಾ ಆಯೋಗದ ಕ್ರಿಯಾಶೀಲತೆಗೆ ಟಿ.ಎನ್. ಶೇಷನ್ ಕೊಡುಗೆ
• ವಿವೇಕ ಮಾಡೆಪ್ಪ ನದಗುಂದಿ

38 ಜನಸ್ನೇಹಿ ಮತಗಟ್ಟೆಗಳ ಸ್ಥಾಪನೆ
• ಹರ್ಷಿತಾ ಶಿವಣ್ಣ

40 ಚುನಾವಣೆ ಮತ್ತು ನೈತಿಕತೆ
• ಶ್ರೀಪುತ್ರ

45 ವಿದ್ಯುನ್ಮಾನ ಮತಯಂತ್ರದ ಬಳಕೆ

46 ಜನತಂತ್ರ ಹಬ್ಬಕ್ಕೆ ಸಿಲಿಕಾನ್ ಸಿಟಿ ಸಜ್ಜು
• ರಾಜಮನ್ಸೂರ್

48 ಸ್ವೀಪ್ : ಬೀದರ್ ಜಿಲ್ಲೆಯಲ್ಲಿ ವಿನೂತನ ಕಾರ್ಯಕ್ರಮ
• ಗವಿಸಿದ್ದಪ್ಪ ಹೊಸಮನಿ



ಪ್ರೀತಿಯ ಓದುಗರೆ, 2019 ರ ಜೂನ್ 3 ರಂದು 16ನೇ ಲೋಕಸಭೆಯ ಅವಧಿ ಪೂರ್ಣಗೊಳ್ಳಲಿರುವ ಹಿನ್ನೆಲೆಯಲ್ಲಿ ಕೇಂದ್ರ ಚುನಾವಣಾ ಆಯೋಗವು 17 ನೇ ಲೋಕಸಭಾ ಚುನಾವಣೆ ನಡೆಸಲು ಸಮಯವನ್ನು ನಿಗದಿ ಮಾಡಿದೆ. ಏಪ್ರಿಲ್ 11, 2019 ರಿಂದ ಮೇ 19 ರವರೆಗೆ ದೇಶದಾದ್ಯಂತ ಒಟ್ಟು ಏಳು ಹಂತಗಳಲ್ಲಿ ಮತದಾನ ಪ್ರಕ್ರಿಯೆ ಜರುಗಲಿದೆ. ನಮ್ಮ ರಾಜ್ಯದಲ್ಲಿ ಏಪ್ರಿಲ್ 18 ಮತ್ತು 23 ರಂದು ಎರಡು ಹಂತಗಳಲ್ಲಿ ಮತದಾನ ನಡೆಯಲಿದ್ದು, ಒಟ್ಟಾರೆ ಮೇ 23 ರಂದು ಫಲಿತಾಂಶ ಪ್ರಕಟವಾಗಲಿದೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಚುನಾವಣಾ ಆಯೋಗ ಮತ್ತು ರಾಜ್ಯ ಮುಖ್ಯ ಚುನಾವಣಾ ಅಧಿಕಾರಿ ಕಚೇರಿಯವರು ಚುನಾವಣಾ ಸಿದ್ಧತೆಯಲ್ಲಿ ತೊಡಗಿದ್ದಾರೆ. ಅಧಿಕ ಸಂಖ್ಯೆಯಲ್ಲಿ ಮತದಾರರು ಮತದಾನ ಮಾಡುವಂತೆ ಪ್ರೇರೇಪಿಸಲು ಹಾಗೂ ಶಾಂತಿಯುತ ಚುನಾವಣೆಯನ್ನು ನಡೆಸಲು ಆಯೋಗ ಸಜ್ಜುಗೊಂಡಿದೆ. ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಛೇರಿ ಹಮ್ಮಿಕೊಳ್ಳುವ ಜನ ಜಾಗೃತಿ ಅಭಿಯಾನಕ್ಕೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಸಹಯೋಗ ನೀಡಲಿದೆ.

2018ರ ಕರ್ನಾಟಕ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ನಮ್ಮ ಇಲಾಖೆಯ ಪ್ರಕಟಣೆಯಾದ ವಾರ್ತಾ ಜನಪದ ಮೇ 2018ರ ಸಂಚಿಕೆಯನ್ನು "ಚುನಾವಣಾ ವಿಶೇಷ ಸಂಚಿಕೆ"ಯಾಗಿ ಹೊರತರಲಾಗಿತ್ತು. ಈಗ ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಓದುಗರಿಗೆ ಲೋಕಸಭಾ ಚುನಾವಣೆ ಪ್ರಕ್ರಿಯೆ ಕುರಿತಂತೆ ಸಮಗ್ರ ಮಾಹಿತಿ ನೀಡಲು ಈ ಬಾರಿಯೂ ಮೇ 2019 ರ ಸಂಚಿಕೆಯನ್ನು ಚುನಾವಣಾ ವಿಶೇಷ ಸಂಚಿಕೆ ಯಾಗಿ ಹೊರತರಲಾಗುತ್ತಿದೆ. ಚುನಾವಣೆ ಪ್ರಕ್ರಿಯೆ ಕುರಿತಂತೆ ಉಪಯುಕ್ತ ಮಾಹಿತಿ ಇರುವ ಈ ಸಂಚಿಕೆಯು ನಿಮಗೆ ಮೆಚ್ಚುಗೆಯಾಗಲಿದೆ ಎಂದು ಭಾವಿಸುತ್ತೇನೆ.

ಮತದಾನ ಪ್ರಕ್ರಿಯೆ ಸುಗಮವಾಗಿ ಮತ್ತು ಶಾಂತಿಯುತವಾಗಿ ಜರುಗಲು ಎಲ್ಲಾ ಭದ್ರತಾ ಕ್ರಮಗಳನ್ನು ಆಯೋಗ ಕೈಗೊಂಡಿದೆ. ದಿವ್ಯಾಂಗ ಮತದಾರರಿಗೆ ಸಾರಿಗೆ, ಗಾಲಿ ಕುರ್ಚಿ, ಭೂತಗನ್ನಡಿ (ಮ್ಯಾಗ್ನಿಫೈಯಿಂಗ್ ಗ್ಲಾಸ್ - Magnifying glass), ಬ್ರೈಲ್ ಲಿಪಿ ನೆರವು, ಸಹಾಯಕರ ವ್ಯವಸ್ಥೆ, ಸಂಜ್ಞಾಭಾಷೆ ವಿವರಣೆಕಾರರ ನೆರವು, ರ್‍ಯಾಂಪ್ ವ್ಯವಸ್ಥೆ ಇತ್ಯಾದಿ ವ್ಯವಸ್ಥೆಗಳನ್ನು ಆಯೋಗ ಮಾಡಿದೆ. ಈ ಹಿನ್ನೆಲೆಯಲ್ಲಿ ದಿವ್ಯಾಂಗರೂ ಸೇರಿ ಎಲ್ಲಾ ಅರ್ಹ ಮತದಾರರು ನಿರ್ಭಯವಾಗಿ ಮತ್ತು ನೆಮ್ಮದಿಯಿಂದ ಮತದಾನ ಮಾಡಬಹುದಾಗಿದೆ.

ಚುನಾವಣೆಗಳು ಪ್ರಜಾಪ್ರಭುತ್ವ ವ್ಯವಸ್ಥೆಯ ಬೆನ್ನೆಲುಬು. ಮತದಾನ ಪ್ರತಿ ಮತದಾರನ ಹಕ್ಕು ಮತ್ತು ಕರ್ತವ್ಯವಾಗಿದೆ. ಇದೊಂದು ಸಾಂವಿಧಾನಿಕ ಮತ್ತು ಸಾಮಾಜಿಕ ಜವಾಬ್ದಾರಿ. ಆದ್ದರಿಂದ ಆಯಾ ಪ್ರದೇಶಗಳ ಎಲ್ಲಾ ಅರ್ಹ ಮತದಾರರು ಏಪ್ರಿಲ್ 18 ಮತ್ತು 23ರಂದು ಮತಗಟ್ಟೆಗಳಿಗೆ ಹೋಗಿ ಮತದಾನ ಮಾಡುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ಮನವಿ ಮಾಡುತ್ತಾ, ಈ ದಿಸೆಯಲ್ಲಿ ಚುನಾವಣಾ ವಿಶೇಷ ಸಂಚಿಕೆಗಳು ತಮ್ಮೆಲ್ಲರಿಗೂ ಪ್ರೇರಣೆ ನೀಡಲಿ ಎಂದು ಆಶಿಸುತ್ತೇನೆ.

ಎನ್. ಭೃಂಗೀಶ್
ಪ್ರಧಾನ ಸಂಪಾದಕರು

ಪ್ರಧಾನ ಸಂಪಾದಕರು
ಎನ್. ಭೃಂಗೀಶ್
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಬಸವರಾಜ ಕಂಬಿ
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಪಿ. ಪೂರ್ಣಿಮಾ

ಪ್ರಕಾಶಕರು
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 01
email : varthajanapada@yahoo.co.in
emagazine : karnatakajanapada.com | www.karnatakainformation.gov.in

ಮುದ್ರಕರು
ಅಭಿಮಾನಿ ಪಬ್ಲಿಕೇಷನ್ಸ್ ಪ್ರೈ. ಲಿ.
ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು – 10

'ಜನಪದ' ಮಾಸಿಕ ಈಗ www.kanaja.inನಲ್ಲಿ ಲಭ್ಯ

ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ-ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ-ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.)

downloaded from: www.kpscvaani.com

LOK SABHA ELECTIONS 2019

Inclusive, Accessible & Ethical Elections
Karnataka

ಮತದಾರರ ಪ್ರತಿಜ್ಞಾ ವಿಧಿ

ಪ್ರಜಾಪ್ರಭುತ್ವದಲ್ಲಿ ದೃಢವಿಶ್ವಾಸವುಳ್ಳ ಭಾರತದ ಪೌರರಾದ ನಾವು, ನಮ್ಮ ದೇಶದ ಪ್ರಜಾಸತ್ತಾತ್ಮಕ ಸಂಪ್ರದಾಯಗಳು ಮತ್ತು ಮುಕ್ತ ನ್ಯಾಯಸಮ್ಮತ ಮತ್ತು ಶಾಂತಿಯುತ ಚುನಾವಣೆಗಳ ಘನತೆಯನ್ನು ಎತ್ತಿಹಿಡಿಯುತ್ತೇವೆಂದು ಮತ್ತು ಪ್ರತಿಯೊಂದು ಚುನಾವಣೆಯಲ್ಲಿ ನಿರ್ಭೀತರಾಗಿ ಮತ್ತು ಧರ್ಮ, ಜನಾಂಗ, ಜಾತಿ, ಮತ ಭಾಷೆ ಅಥವಾ ಯಾವುದೇ ಪ್ರೇರಣೆಗಳ ದಾಕ್ಷಿಣ್ಯಗಳಿಂದ ಪ್ರಭಾವಿತರಾಗದೆ ಮತ ಚಲಾಯಿಸುತ್ತೇವೆಂದು ಈ ಮೂಲಕ ಪ್ರತಿಜ್ಞೆ ಸ್ವೀಕರಿಸುತ್ತೇವೆ.

*Voter's Pledge*

*We, the citizen of India, having abiding faith in Democracy, here by pledge to uphold the democratic traditions of our country and the dignity of free, fair and peaceful elections, and to vote in every elections fearlessly without being influenced by consideration of religion, race, caste, community, language or any inducement.*

**CHIEF ELECTORAL OFFICER, KARNATAKA**
Nirvanachana Nilaya, Sheshadri Road,
Bengaluru 560 001

**ಮುಖ್ಯ ಚುನಾವಣಾಧಿಕಾರಿ, ಕರ್ನಾಟಕ**
ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ,
ಬೆಂಗಳೂರು-560001

080 222 42 042, 080 2222 41 93
1950 (TollFree)

www.ceokarnataka.kar.nic.in
ceokarnataka ceokarnataka ceokarnataka ceokarnataka

downloaded from: www.kpscvaani.com



# 17ನೇ ಲೋಕಸಭಾ ಚುನಾವಣೆ ಪೂರ್ವ ಸಿದ್ಧತೆಗಳು

**ವೆಂಕಟೇಶ ಪ್ರಸಾದ್ ಬಿ.ಎಸ್.**

**ಕ**ರ್ನಾಟಕ ರಾಜ್ಯದ 28 ಲೋಕಸಭಾ ಕ್ಷೇತ್ರಗಳು ಸೇರಿದಂತೆ ರಾಷ್ಟ್ರದ 543 ಸ್ಥಾನಗಳಿಗೆ ಏಪ್ರಿಲ್ 11 ರಿಂದ ಮೇ 19ರವರೆಗೆ ಚುನಾವಣೆ ನಡೆಸಲು ಕೇಂದ್ರ ಚುನಾವಣಾ ಆಯೋಗ ದಿನಾಂಕ ನಿಗದಿಗೊಳಿಸಿದೆ. ಈ 17ನೇ ಲೋಕಸಭೆಗೆ ಒಟ್ಟು ಏಳು ಹಂತಗಳಲ್ಲಿ ಚುನಾವಣೆ ನಡೆಯಲಿದ್ದು, ರಾಜ್ಯದಲ್ಲಿ ಎರಡು ಹಂತಗಳಲ್ಲಿ ನಡೆಯಲಿದೆ. ದಕ್ಷಿಣ ಕರ್ನಾಟಕ ಭಾಗದ 14 ಕ್ಷೇತ್ರಗಳು ಏ.18 ರಂದು ಹಾಗೂ ಉತ್ತರ ಕರ್ನಾಟಕ ಭಾಗದ 14 ಕ್ಷೇತ್ರಗಳು ಏ.23 ರಂದು ಚುನಾವಣೆ ಎದುರಿಸಲಿವೆ. ರಾಷ್ಟ್ರದ ಎಲ್ಲಾ ಕ್ಷೇತ್ರಗಳ ಫಲಿತಾಂಶ ಮೇ 23ರಂದು ಪ್ರಕಟವಾಗಲಿದೆ.

ರಾಜ್ಯದಲ್ಲಿ 5.03 ಕೋಟಿ ಮತದಾರರು ಮತ ಚಲಾವಣೆಗೆ ಅರ್ಹರಾಗಿದ್ದಾರೆ. ಇವರಲ್ಲಿ 2.5 ಕೋಟಿ ಪುರುಷ ಮತದಾರರು, 2.48 ಕೋಟಿ ಮಹಿಳಾ ಮತದಾರರು ಮತ್ತು 4,718 ತೃತೀಯ ಲಿಂಗಿ ಮತದಾರರು ಸೇರಿದ್ದಾರೆ. 2014ರಲ್ಲಿ ನಡೆದ ಹಿಂದಿನ ಚುನಾವಣೆಗೆ ಹೋಲಿಸಿದರೆ ಮತದಾರರ ಸಂಖ್ಯೆಯಲ್ಲಿ 8.25 ಲಕ್ಷದಷ್ಟು ಹೆಚ್ಚಳವಾಗಿದೆ. ಮತ ಚಲಾವಣೆಗೆ ಅನುವು ಮಾಡಿಕೊಡಲು ರಾಜ್ಯದಲ್ಲಿ 58,186 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಇದು ಹಿಂದಿನ ಚುನಾವಣೆಯಲ್ಲಿ ಇದ್ದ 54,265 ಮತಗಟ್ಟೆಗಳಿಗಿಂತ ಈ ಸಲ ಸುಮಾರು 4000 ಮತಗಟ್ಟೆಗಳು ಹೆಚ್ಚಳವಾಗಿದ್ದು, ಶೇ 7ರಷ್ಟು ಹೆಚ್ಚಳವಾಗಿದೆ.

ರಾಷ್ಟ್ರದಲ್ಲಿನ ಒಟ್ಟಾರೆ ಮತದಾರರ ಸಂಖ್ಯೆ 90 ಕೋಟಿ ಇದ್ದು 10.35 ಲಕ್ಷ ಮತಗಟ್ಟೆಗಳಲ್ಲಿ ಮತ ಚಲಾಯಿಸಲಿದ್ದಾರೆ. ಕಳೆದ ಚುನಾವಣೆಯಲ್ಲಿ 81.5 ಕೋಟಿ ಇದ್ದ ಮತದಾರರ ಸಂಖ್ಯೆ ಈಗ ಸುಮಾರು 8.5 ಕೋಟಿಯಷ್ಟು ಅಧಿಕವಾಗಿದೆ. ಅದಕ್ಕೆ ಅನುಗುಣವಾಗಿ



ಒಟ್ಟು ಮತಗಟ್ಟೆಗಳ ಸಂಖ್ಯೆ ಕೂಡ 9.28 ಲಕ್ಷ ಇದ್ದುದು ಈಗ 10.35 ಲಕ್ಷಕ್ಕೆ ಏರಿಕೆಯಾಗಿದೆ. ಇಡೀ ದೇಶದಲ್ಲಿ ಮತದಾರರ ಪಟ್ಟಿಗೆ ಹೆಸರು ನೋಂದಾಯಿಸಿಕೊಂಡ ತೃತೀಯ ಲಿಂಗಿಗಳ ಸಂಖ್ಯೆ 38,325 ಆಗಿದೆ.

ಮತ ಚಲಾವಣೆಗೆ ಅನುವು ಮಾಡಿಕೊಡಲು 39.6 ಲಕ್ಷ ವಿದ್ಯುನ್ಮಾನ ಯಂತ್ರ ಮತ್ತು 17.4 ಲಕ್ಷ ವಿ.ವಿ.ಪ್ಯಾಟ್‌ಗಳನ್ನು ಸಜ್ಜುಗೊಳಿಸಲಾಗಿದೆ. ಚುನಾವಣೆ ಘೋಷಣೆಗೊಂಡ ಮಾರ್ಚ್ 10ರಿಂದಲೇ ಚುನಾವಣಾ ನೀತಿ ಸಂಹಿತೆಯೂ ಜಾರಿಗೆ ಬಂದಿದೆ. ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಗಳ ಮೇಲೆ ಕಣ್ಣಿಡುವ ಪ್ರಕ್ರಿಯೆಯಲ್ಲಿ 330 ಅಧಿಕಾರಿಗಳು, 7475 ಕ್ಷೇತ್ರ ಘಟಕಗಳು (ಫೀಲ್ಡ್ ಯುನಿಟ್‌ಗಳು), 10,489 ಸಿಬ್ಬಂದಿ ನೇರವಾಗಿ ಭಾಗಿಯಾಗಿದ್ದಾರೆ.

ರಾಜ್ಯ ಚುನಾವಣಾಧಿಕಾರಿ ಕಚೇರಿ ವೆಬ್‌ಸೈಟ್‌ನಲ್ಲಿ ಮತದಾರರ ನೋಂದಣಿ ಸ್ಥಗಿತಗೊಳಿಸಲಾಗಿದ್ದು, ಮಾರ್ಚ್ 10ರಿಂದ ರಾಷ್ಟ್ರೀಯ ಪೋರ್ಟಲ್‌ನಲ್ಲಿ ಮಾತ್ರ ಅವಕಾಶ ನೀಡಲಾಗಿದೆ. ಕೇಂದ್ರ ಚುನಾವಣಾ ಆಯೋಗದ ಸೂಚನೆ ಪ್ರಕಾರ, ಕೇಂದ್ರೀಕೃತ ಮತದಾರರ ಪಟ್ಟಿಯ ನಿರ್ವಹಣಾ ವ್ಯವಸ್ಥೆಗೆ ತುರ್ತು ಸ್ಪಂದನಾ ಕಾರ್ಯಪಡೆಯನ್ನು ಮಾಡಲಾಗಿದೆ. ಈಗ ಅರ್ಜಿ ಸಲ್ಲಿಸಲು ಬಯಸುವವರು ರಾಷ್ಟ್ರೀಯ ಪೋರ್ಟಲ್ nsvp.in ಮೂಲಕ ಸಲ್ಲಿಸಬೇಕು.

ಮೊದಲ ಸಲ ಮತ ಹಾಕಲು ಅರ್ಹತೆ ಪಡೆದ ಯುವ ಮತದಾರರ ಪ್ರಮಾಣ ಶೇ 1.66ರಷ್ಟಿದೆ. ಭಾವಚಿತ್ರವಿರುವ ಮತದಾರರ ಪಟ್ಟಿ ಶೇ 99.93ರಷ್ಟು ಸಿದ್ಧವಾಗಿದೆ ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಸಂಜೀವ್ ಕುಮಾರ್ ತಿಳಿಸಿದ್ದಾರೆ.

ಚುನಾವಣಾ ಪ್ರಚಾರ ನಿರ್ವಹಣೆಗೆ ಸಂಬಂಧಿಸಿದ ಸುದ್ದಿಗಳನ್ನು ಪ್ರಸಾರ ಮಾಡುವ ಮತ್ತು ಪ್ರಕಟಿಸುವ ಸುದ್ದಿ ವಾಹಿನಿಗಳು, ಪತ್ರಿಕೆಗಳ ಮೇಲೆ ನಿಗಾ ಇರಿಸಲಾಗುವುದು. ನೀತಿ ಸಂಹಿತೆ ಉಲ್ಲಂಘನೆಯಂತಹ ಪ್ರಕರಣಗಳು ಪತ್ತೆಯಾದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಕೇಂದ್ರದ ಮುಖ್ಯ ಚುನಾವಣಾ ಆಯುಕ್ತ ಸುನಿಲ್ ಅರೋರಾ ಅವರು ತಿಳಿಸಿದ್ದಾರೆ.

**ಮತಗಟ್ಟೆಗಳಲ್ಲಿ ಮೂಲಸೌಲಭ್ಯ**

ಮತದಾರರಿಗೆ ಅನುಕೂಲವಾಗುವಂತೆ ಮತಗಟ್ಟೆಗಳಲ್ಲಿ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಮಾಡಲಾಗುತ್ತಿದೆ. ವಿಶೇಷ ಚೇತನರಿಗೆ ರ‍್ಯಾಂಪ್ ಸೌಲಭ್ಯ ಮಾಡಲಾಗುತ್ತಿದೆ. ಇದೇ ಮೊದಲ ಸಲ ವಿಶೇಷ ಚೇತನರನ್ನು ಮತಗಟ್ಟೆಗೆ ಕರೆದುಕೊಂಡು ಹೋಗಲು ಸಾರಿಗೆ ವ್ಯವಸ್ಥೆ ಕಲ್ಪಿಸಲಾಗುವುದು.

**1950 ಸಹಾಯವಾಣಿ**

ಈ ಚುನಾವಣೆಯ ಸಲುವಾಗಿ ರಾಷ್ಟ್ರದ ಎಲ್ಲಾ ರಾಜ್ಯಗಳು ಮತ್ತು ಜಿಲ್ಲೆಗಳಲ್ಲಿ 1950 ಸಹಾಯವಾಣಿಯನ್ನು ಸಕ್ರಿಯವಾಗಿ ಇರಿಸಲಾಗಿದೆ. ದಿನದ 24 ಗಂಟೆಯೂ ಇದು ಕಾರ್ಯನಿರ್ವಹಿಸುತ್ತದೆ. ಇಲ್ಲಿಗೆ ಕರೆ ಮಾಡಿ ಚುನಾವಣೆಗೆ ಸಂಬಂಧಿಸಿದ ದೂರು ಮತ್ತು ಸಲಹೆಗಳನ್ನು ಕೊಡಬಹುದು. ಆಮಿಷ, ಪ್ರಲೋಭನೆಯಂತಹ ಪ್ರಕರಣಗಳ ಬಗ್ಗೆಯೂ ಇಲ್ಲಿ ಗಮನಕ್ಕೆ ತರಬಹುದು. ಬೇರೆ ಜಿಲ್ಲೆಯ ಸಹಾಯವಾಣಿ ಸಂಪರ್ಕಿಸುವ ಅಗತ್ಯ ಬಿದ್ದರೆ ಆಯಾ ಜಿಲ್ಲೆಯ ಕೋಡ್ ಸೇರಿಸಿ ಈ ಸಂಖ್ಯೆಗೆ ಕರೆ ಮಾಡಬೇಕು.

**ಏಕಗವಾಕ್ಷಿ ವ್ಯವಸ್ಥೆ**

ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಸಭೆ, ರ‍್ಯಾಲಿ, ವಾಹನ, ತಾತ್ಕಾಲಿಕ ಚುನಾವಣಾ ಕಚೇರಿ, ಧ್ವನಿವರ್ಧಕ, ಪ್ರಚಾರ ಸಾಮಗ್ರಿಗಳ ಬಳಕೆಗೆ ಅನುಮತಿ ಪಡೆಯಲು ಅನುಕೂಲವಾಗುವಂತೆ ಏಕಗವಾಕ್ಷಿ ವ್ಯವಸ್ಥೆ ಕಲ್ಪಿಸಲಾಗಿದೆ.

**ವೋಟರ್ ಸ್ಲಿಪ್ ಐಡಿ ಅಲ್ಲ**

ಮತದಾರರ ಪಟ್ಟಿಯಲ್ಲಿರುವ ಮಾಹಿತಿ ನೀಡಲು ಮತದಾರರ ಭಾವಚಿತ್ರ ಇರುವ ವೋಟರ್ ಸ್ಲಿಪ್ ಅನ್ನು ಚುನಾವಣೆಗೆ ಒಂದು ವಾರ ಮೊದಲು ವಿತರಿಸಲಾಗುತ್ತದೆ. ಆದರೆ, ಇದನ್ನು ಗುರುತು ಚೀಟಿಯನ್ನಾಗಿ ಪರಿಗಣಿಸುವುದಿಲ್ಲ. ಕರಡು ಮತದಾರರ ಪಟ್ಟಿ ಪ್ರಕಾರ, ಇದುವರೆಗೆ, 10.62 ಲಕ್ಷ ಎಪಿಕ್ ಕಾರ್ಡ್‌ಗಳನ್ನು ವಿತರಿಸಲಾಗಿದ್ದು, ಬಾಕಿ 3.53 ಲಕ್ಷ ಎಪಿಕ್ ಕಾರ್ಡ್‌ಗಳ ಹಂಚಿಕೆ ಪ್ರಗತಿಯಲ್ಲಿದೆ.

**ತಾರಾ ಪ್ರಚಾರಕರು**

ಅಭ್ಯರ್ಥಿಗಳು ತಾರಾ ಪ್ರಚಾರಕರೊಂದಿಗೆ ವೇದಿಕೆ ಹಂಚಿಕೊಂಡರೆ ಅದನ್ನು ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತರುವುದು ಕಡ್ಡಾಯ. ಇಂತಹ ಕಾರ್ಯಕ್ರಮದ ಅರ್ಧ ವೆಚ್ಚವನ್ನು ಪಕ್ಷದ ಖರ್ಚಿಗೆ ಹಾಗೂ ಉಳಿದರ್ಧ ಖರ್ಚನ್ನು ಅಭ್ಯರ್ಥಿಯ ಖರ್ಚಿಗೆ ಲೆಕ್ಕ ಹಾಕಲಾಗುವುದು.






**ಈ ಚುನಾವಣೆಯ ಸಲುವಾಗಿ ರಾಷ್ಟ್ರದ ಎಲ್ಲಾ ರಾಜ್ಯಗಳು ಮತ್ತು ಜಿಲ್ಲೆಗಳಲ್ಲಿ 1950 ಸಹಾಯವಾಣಿಯನ್ನು ಸಕ್ರಿಯವಾಗಿ ಇರಿಸಲಾಗಿದೆ. ದಿನದ 24 ಗಂಟೆಯೂ ಇದು ಕಾರ್ಯನಿರ್ವಹಿಸುತ್ತದೆ.**

**ಈ ಸಲದ ವಿಶೇಷಗಳು:**

**ಬ್ರೈಲ್ ಸೌಲಭ್ಯ**

ಅಂಧರಿಗಾಗಿ ಬ್ರೈಲ್ ಲಿಪಿಯಲ್ಲಿರುವ ಗುರುತು ಚೀಟಿ ವಿತರಿಸಲು ಆಯೋಗ ನಿರ್ಧರಿಸಿದೆ. ಇದಕ್ಕಾಗಿ ಬ್ರೈಲ್ ಸವಲತ್ತು ಇರುವಂತೆ ಮತಯಂತ್ರಗಳನ್ನು ತಯಾರಿಸಲಾಗಿದೆ.

**ಸಿ–ವಿಜಿಲ್ ಮೊಬೈಲ್ ಆ್ಯಪ್**

ಚುನಾವಣೆ ಸಂಬಂಧಿ ಅಕ್ರಮಗಳ ದೂರು ನೀಡಲು ಆಯೋಗವು ಸಿ–ವಿಜಿಲ್ ಎಂಬ ಮೊಬೈಲ್ ಆ್ಯಪ್ ರೂಪಿಸಿದೆ. ದೂರು ನೀಡಿದ 100 ನಿಮಿಷಗಳ ಒಳಗೆ ವಿಚಕ್ಷಣಾ ದಳದವರು ಸ್ಥಳಕ್ಕೆ ಭೇಟಿ ನೀಡಿ ಕೈಗೊಂಡ ಕ್ರಮದ ಬಗ್ಗೆ ಆಯೋಗಕ್ಕೆ ವರದಿ ನೀಡಲಿದ್ದಾರೆ. ಇದಕ್ಕಾಗಿ ವಿಚಕ್ಷಣಾ ದಳದ ಎಲ್ಲಾ ವಾಹನಗಳಿಗೆ ಜಿಪಿಎಸ್ ವ್ಯವಸ್ಥೆ ಅಳವಡಿಸಲಾಗಿದೆ. ದೂರು ಬಂದ ತಕ್ಷಣ ಅತ್ಯಂತ ಸಮೀಪವಿರುವ ತಂಡಕ್ಕೆ ಮಾಹಿತಿ ರವಾನೆಯಾಗುತ್ತದೆ. ದೂರು ಸಲ್ಲಿಕೆಯಾದ 15 ನಿಮಿಷಗಳ ಒಳಗೆ ಅವರು ಸ್ಥಳ ತಲುಪಲಿದ್ದಾರೆ. ಇದನ್ನು ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ದೂರಿಗೆ ಪೂರಕವಾದ ವಿಡಿಯೊ ಮತ್ತು ಛಾಯಾಚಿತ್ರಗಳನ್ನು ಸಹ ಇದರ ಮೂಲಕ ಲಗತ್ತಿಸಬಹುದು (ಅಪ್ ಲೋಡ್ ಮಾಡಬಹುದು).

'ಸಿ–ವಿಜಿಲ್' ಆ್ಯಪ್‌ಗೆ ಇದುವರೆಗೆ 186 ದೂರುಗಳು ಬಂದಿವೆ. ಇವುಗಳಲ್ಲಿ 111 ಸುಳ್ಳು ದೂರುಗಳಾಗಿದ್ದರೆ 45 ದೂರುಗಳನ್ನು ವಿಲೇವಾರಿ ಮಾಡಲಾಗಿದೆ. 30 ಪ್ರಕರಣಗಳ ತನಿಖೆ ಪ್ರಗತಿಯಲ್ಲಿದೆ. ಮೊಬೈಲ್ ಆ್ಯಪ್ ಮೂಲಕ ಸುಳ್ಳು ದೂರು ನೀಡಿದವರ ವಿರುದ್ಧವೂ ಕ್ರಮ ತೆಗೆದುಕೊಳ್ಳಲಾಗುವುದು ಎಂದು ರಾಜ್ಯ ಚುನಾವಣಾಧಿಕಾರಿ ಸಂಜೀವ್ ಕುಮಾರ್ ಎಚ್ಚರಿಕೆ ನೀಡಿದ್ದಾರೆ.





downloaded from: www.kpscvaani.com

### ಕ್ರಿಮಿನಲ್ ಹಿನ್ನೆಲೆ– ಜಾಹೀರಾತು ಕಡ್ಡಾಯ

ಲೋಕಸಭಾ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ಕ್ರಿಮಿನಲ್ ಹಿನ್ನೆಲೆ ಹೊಂದಿದ್ದರೆ ಆ ಬಗ್ಗೆ ಪತ್ರಿಕೆ ಮತ್ತು ಟಿ.ವಿ. ಮಾಧ್ಯಮಗಳಲ್ಲಿ ಕನಿಷ್ಠ ಮೂರು ಸಲ ಜಾಹೀರಾತು ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ. ಕೆಲವು ತಿಂಗಳುಗಳ ಹಿಂದೆ ನಡೆದ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಮೊದಲ ಬಾರಿಗೆ ಈ ನೀತಿ ಜಾರಿಗೊಳಿಸಲಾಗಿತ್ತು. ಇದನ್ನು ಈಗ ಇದೇ ಮೊದಲ ಸಲ ದೇಶದಾದ್ಯಂತ ಜಾರಿಗೊಳಿಸಲಾಗುತ್ತಿದೆ.

### ಸಾಮಾಜಿಕ ಜಾಲತಾಣಗಳ ಮೇಲೂ ನಿಗಾ

ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಪ್ರಚಾರಕ್ಕಾಗಿ ಫೇಸ್‌ಬುಕ್, ವಾಟ್ಸ್‌ಆ್ಯಪ್, ಟ್ವಿಟರ್, ಇನ್‌ಸ್ಟಾಗ್ರ್ಯಾಂ, ಗೂಗಲ್, ಯುಟ್ಯೂಬ್ ಮತ್ತಿತರ ಸಾಮಾಜಿಕ ಜಾಲತಾಣ ಬಳಸಿಕೊಳ್ಳುವುದಕ್ಕೆ ಕೂಡಾ ಚುನಾವಣಾ ಆಯೋಗ ನಿಬಂಧನೆಗಳನ್ನು ವಿಧಿಸಿದೆ.

ಚುನಾವಣಾ ಪ್ರಚಾರಕ್ಕಾಗಿ ಸಾಮಾಜಿಕ ಜಾಲತಾಣ ಬಳಸಿಕೊಳ್ಳಲು ಉದ್ದೇಶಿಸುವ ಅಭ್ಯರ್ಥಿಗಳು ಮತ್ತು ಪಕ್ಷಗಳು ಮುಂಚಿತವಾಗಿಯೇ ಆಯೋಗದ ಅನುಮತಿ ಪಡೆಯಬೇಕು ಎಂದು ನಿರ್ದೇಶಿಸಲಾಗಿದೆ. ಈ ಮೂಲಕ ನಡೆಯುವ ಪ್ರಚಾರ ವೆಚ್ಚವನ್ನು ಅಭ್ಯರ್ಥಿ ಮತ್ತು ಪಕ್ಷಗಳ ಚುನಾವಣಾ ವೆಚ್ಚಕ್ಕೆ ಸೇರಿಸಲಾಗುತ್ತದೆ. ಸಾಮಾಜಿಕ ಜಾಲತಾಣಗಳ ಸಹಾಯದೊಂದಿಗೆ ಮಾಡುವ ಪ್ರಚಾರವೂ ಮಾದರಿ ನೀತಿ ಸಂಹಿತೆಯಡಿ ಬರಲಿದೆ.

ರಾಜಕೀಯ ಪಕ್ಷಗಳು ಸಾಮಾಜಿಕ ಜಾಲತಾಣದ ಮೂಲಕ ಜಾಹೀರಾತು ನೀಡಬೇಕೆಂದರೆ ಆಯೋಗದ ಮೀಡಿಯಾ ಸರ್ಟಿಫಿಕೇಟ್ ಅಂಡ್ ಮಾನಿಟರಿಂಗ್ ಕಮಿಟಿಯ (ಎಂಸಿಎಂಸಿ) ಮೂಲಕ ಪ್ರಚಾರಪೂರ್ವ ಪ್ರಮಾಣಪತ್ರ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ.

ಪ್ರತಿ ಅಭ್ಯರ್ಥಿಯು ನಾಮಪತ್ರ ಸಲ್ಲಿಸುವಾಗ ತಮ್ಮ ಹೆಸರಿನಲ್ಲಿರುವ ಸಾಮಾಜಿಕ ಜಾಲತಾಣ ಖಾತೆಗಳ ಮಾಹಿತಿ ನೀಡುವಂತೆ ಸೂಚಿಸಲಾಗಿದೆ. ಸಾಮಾಜಿಕ ಜಾಲತಾಣಗಳ ನಕಲಿ ಖಾತೆಗಳ ಮೂಲಕ ಅಪಪ್ರಚಾರ ನಡೆಯಬಹುದಾದ್ದರಿಂದ ಅಭ್ಯರ್ಥಿಗಳಿಗೆ ತಮ್ಮ ಸಾಮಾಜಿಕ ಜಾಲತಾಣಗಳ ಖಾತೆ ಮಾಹಿತಿ ಸಲ್ಲಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಸೂಚಿತ ಮಾರ್ಗಸೂಚಿಯ ಉಲ್ಲಂಘನೆಯು ನಾಮಪತ್ರ ತಿರಸ್ಕಾರಕ್ಕೆ ಕಾರಣವಾಗಲಿದೆ.

ಚುನಾವಣಾ ಮಾರ್ಗಸೂಚಿಗಳನ್ನು ಪಾಲಿಸುವಂತೆ ಸಾಮಾಜಿಕ ಜಾಲತಾಣಗಳನ್ನು ನಿರ್ವಹಿಸುವ ಸಂಸ್ಥೆಗಳಿಗೆ ಕೂಡ ಆದೇಶಿಸಲಾಗಿದೆ. ಸಾಮಾಜಿಕ ಜಾಲತಾಣಗಳ ಬಗ್ಗೆ ಆಕ್ಷೇಪವಿದ್ದರೆ ಅವುಗಳ ಸ್ವೀಕಾರಕ್ಕೆ ಕೂಡ ಘಟಕ ತೆರೆಯಲಾಗುತ್ತದೆ. ಸಾಮಾಜಿಕ ಮಾಧ್ಯಮಗಳ ಜಾಹೀರಾತುಗಳನ್ನು ಜನಪ್ರತಿನಿಧಿ ಕಾಯ್ದೆಯ 126 (1)ನೇ ಪರಿಚ್ಛೇದದ ಅಡಿ ತರಲಾಗಿದೆ.

ಮತದಾನಕ್ಕೆ 48 ಗಂಟೆ ಮೊದಲು ಸಾಮಾಜಿಕ ಜಾಲತಾಣಗಳ ಮೂಲಕ ನಡೆಯುವ ಪ್ರಚಾರ ನಿಷೇಧಿಸುವ ಬಗ್ಗೆಯೂ ಅವಲೋಕಿಸಲಾಗುತ್ತಿದೆ.

### ಪ್ರತಿ ಮನೆಗೂ ಮತ ಮಾರ್ಗದರ್ಶಿ

ಈ ಸಲ ಮತದಾರ ಮಾರ್ಗದರ್ಶಿಯನ್ನು ಪ್ರತಿ ಮನೆಗೂ ಕೊಡಲಾಗುತ್ತದೆ. ಇದರಲ್ಲಿ, ಚುನಾವಣಾ ದಿನಾಂಕ, ಸಮಯ, ಬೂತ್ ಮಟ್ಟದ ಅಧಿಕಾರಿಗಳ ಮಾಹಿತಿ, ಪ್ರಮುಖ ವೆಬ್‌ಸೈಟ್‌ಗಳು, ಸಹಾಯವಾಣಿ ಸಂಖ್ಯೆ, ಮತಗಟ್ಟೆಯಲ್ಲಿ ಗುರುತಿಗೆ ನೀಡಬೇಕಾದ ದಾಖಲೆ, ಮತದಾರರು ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂಬ ಬಗ್ಗೆ ಇಂಗ್ಲಿಷ್ ಹಾಗೂ ಪ್ರಾದೇಶಿಕ ಭಾಷೆಯಲ್ಲಿ ಕೊಡಲಾಗಿರುತ್ತದೆ. ಅಂಧರಿಗಾಗಿ ಬ್ರೈಲ್ ಲಿಪಿಯಲ್ಲಿ ಮತದಾರರ ಚೀಟಿ ಒದಗಿಸಲಾಗುವುದು.

### ಜಿಪಿಎಸ್ ಮೂಲಕ ಇವಿಎಂ ಮೇಲೆ ನಿಗಾ

ಚುನಾವಣೆಗಾಗಿ ಬಳಸಲಾಗುವ ವಿದ್ಯುನ್ಮಾನ ಮತಯಂತ್ರಗಳು (ಇವಿಎಂ) ಮತ್ತು ವಿ.ವಿ.ಪ್ಯಾಟ್‌ಗಳ ಮೇಲೆ ನಿಗಾ ಇಡುವ ಸಲುವಾಗಿ ಆಯೋಗವು ಜಿಪಿಎಸ್ ತಂತ್ರಜ್ಞಾನ ಬಳಸಿಕೊಳ್ಳಲಿದೆ. ಚುನಾವಣೆಯಲ್ಲಿ ಬಳಕೆಯಾಗುವ ಎಲ್ಲಾ ಇವಿಎಂ ಮತ್ತು ವಿ.ವಿ.ಪ್ಯಾಟ್‌ಗಳ ಚಲನೆಯ ಮೇಲೆ ಆರಂಭದಿಂದ ಅಂತ್ಯದವರೆಗೂ ನಿಗಾ ಇಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಇದಕ್ಕಾಗಿ ಇವಿಎಂ ಮತ್ತು ವಿ.ವಿ.ಪ್ಯಾಟ್ ಸಾಗಿಸುವ ವಾಹನಗಳಿಗೆ ಜಿಪಿಎಸ್ ಅಳವಡಿಕೆ ಕಡ್ಡಾಯಗೊಳಿಸಲಾಗಿದೆ.

### ಮತಯಂತ್ರದ ಮೇಲೆ ಅಭ್ಯರ್ಥಿ ಫೋಟೋ

ವಿದ್ಯುನ್ಮಾನ ಮತಯಂತ್ರ ಹಾಗೂ ಅಂಚೆ ಮತ ಚಲಾವಣೆ ಪೇಪರ್‌ನಲ್ಲಿ ಆಯಾ ಕ್ಷೇತ್ರಗಳ ಅಖಾಡದಲ್ಲಿರುವ ಅಭ್ಯರ್ಥಿಗಳ ಫೋಟೋಗಳನ್ನು ಹಾಗೂ ಸಂಬಂಧಿಸಿದ ಚಿಹ್ನೆಯನ್ನು ಹಾಕಲಾಗುತ್ತದೆ. ಕ್ಷೇತ್ರವೊಂದರಲ್ಲಿ ಒಂದೇ ಹೆಸರಿನ ಅಭ್ಯರ್ಥಿಗಳು ಬೇರೆ ಬೇರೆ ಪಕ್ಷಗಳಿಂದ ಸ್ಪರ್ಧೆಯಲ್ಲಿದ್ದರೆ ಮತದಾರರಿಗೆ ತಮ್ಮ ಆಯ್ಕೆಯ ಅಭ್ಯರ್ಥಿ ಯಾರು ಎಂಬುದನ್ನು ಖಚಿತಪಡಿಸಿಕೊಳ್ಳಲು ಇದರಿಂದ ಸಾಧ್ಯವಾಗುತ್ತದೆ.

### ಧ್ವನಿವರ್ಧಕಗಳ ಮೇಲೆ ನಿರ್ಬಂಧ

ರಾಜಕೀಯ ಪಕ್ಷಗಳು, ಚುನಾವಣಾ ಅಭ್ಯರ್ಥಿಗಳು ಮತ್ತು ಪಕ್ಷಗಳ ಏಜೆಂಟರು ಧ್ವನಿವರ್ಧಕ ಬಳಸುವುದಕ್ಕೆ ಆಯೋಗವು ಕೆಲವು ನಿರ್ಬಂಧಗಳನ್ನು ಹೇರಿದೆ. ವಿದ್ಯಾರ್ಥಿಗಳು, ಕಾಯಿಲೆ ಪೀಡಿತರು ಮತ್ತು ಹಿರಿಯ ನಾಗರಿಕರಿಗೆ ಕಿರಿಕಿರಿಯಾಗುವುದನ್ನು ತಪ್ಪಿಸಲು ಶಾಲಾ–ಕಾಲೇಜುಗಳು, ಆಸ್ಪತ್ರೆಗಳು ಮತ್ತು ಹಿರಿಯ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಇರುವ ಸ್ಥಳಗಳಲ್ಲಿ ಧ್ವನಿವರ್ಧಕ ಬಳಕೆಗೆ ಕಡಿವಾಣ ಹಾಕಲಾಗಿದೆ.

### ಪಟ್ಟಿಯಲ್ಲಿ ಹೆಸರಿದೆಯೇ? ತಿಳಿಯಲು

ಮತದಾರರು '1950' ಸಂಖ್ಯೆಗೆ ಸಂದೇಶ ಕಳುಹಿಸುವ ಮೂಲಕ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇದೆಯೇ ಅಥವಾ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳಬಹುದು. ಇದು ಉಚಿತ ಸಂದೇಶ ವಿನಿಮಯ ವ್ಯವಸ್ಥೆಯಾಗಿದೆ.

## ರಾಜ್ಯದ ಮುಖ್ಯ ಚುನಾವಣಾಧಿಕಾರಿ ಸಂಜೀವ್ ಕುಮಾರ್ ಸಂದರ್ಶನ



ರಾಜ್ಯದ ಮುಖ್ಯ ಚುನಾವಣಾಧಿಕಾರಿಯಾಗಿ (ಸಿಇಒ) ಕಾರ್ಯ ನಿರ್ವಹಿಸುತ್ತಿರುವ ಸಂಜೀವ್ ಕುಮಾರ್ ಅವರು ಕಳೆದ ಕೆಲವಾರು ತಿಂಗಳುಗಳಿಂದಲೇ ಚುನಾವಣಾ ಪೂರ್ವಸಿದ್ಧತಾ ಕಾರ್ಯದ ಮೇಲ್ವಿಚಾರಣೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಕುರಿತು ಅವರು ಮಾಧ್ಯಮ ಸಂದರ್ಶನದಲ್ಲಿ ಹಂಚಿಕೊಂಡ ಮಾತುಗಳು ಹೀಗಿವೆ:

**ಪ್ರಶ್ನೆ: ಈ ಚುನಾವಣೆಗಾಗಿ ಪೂರ್ವಸಿದ್ಧತಾ ಕೆಲಸ ಯಾವಾಗ ಆರಂಭವಾಯಿತು?**

ಮುಖ್ಯ ಚುನಾವಣಾಧಿಕಾರಿಗಳು: ಈ ಕೆಲಸ ಏನಿಲ್ಲವೆಂದರೂ 9 ತಿಂಗಳು ಮುಂಚಿತವಾಗಿಯೇ ಶುರುವಾಗಿದೆ, ಚುನಾವಣೆ ಘೋಷಣೆಯಾದ ನಂತರ ತೀವ್ರವಾಗುತ್ತದೆ. 5.03 ಕೋಟಿ ಮತದಾರರ ಪಟ್ಟಿ ಸಿದ್ಧಪಡಿಸುವುದೇ ಮುಖ್ಯ ಸವಾಲು. ಇದು ಮೇಲ್ನೋಟಕ್ಕೆ ಸರಳ ಎನ್ನಿಸಿದರೂ ಬಲು ಪ್ರಯಾಸದ ಕೆಲಸವಾಗಿದೆ. ರಾಜ್ಯದಲ್ಲಿ ಬೆಂಗಳೂರಿನಲ್ಲಿ ಮಾತ್ರ ಚುನಾವಣಾ ಆಯೋಗದ ಕಚೇರಿ ಇದೆ. ರಾಜ್ಯ ಸರ್ಕಾರ ಮತ್ತು ಅದರ ಅಧೀನ ಸಂಸ್ಥೆಗಳನ್ನು ಅವಲಂಬಿಸಿ ನಾವು ಕೆಲಸ ಮಾಡಬೇಕಾಗುತ್ತದೆ. ಬೆಂಗಳೂರು ನಗರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಮತದಾರರ ನೋಂದಣಿ ಕಾರ್ಯದಲ್ಲಿ ನಮ್ಮ ಸಹಭಾಗಿಯಾಗಿದೆ.

**ಪ್ರಶ್ನೆ: ಮತದಾರರ ಪಟ್ಟಿಯ ಪರಿಷ್ಕರಣೆ ಎಷ್ಟು ಅವಧಿಗೊಮ್ಮೆ ನಡೆಯುತ್ತದೆ?**

ಮುಖ್ಯ ಚುನಾವಣಾಧಿಕಾರಿಗಳು: ಇದು ಆಗಾಗ ನಿಯಮಿತವಾಗಿ ನಡೆಯುವ ಕೆಲಸ. ಕಳೆದ ವರ್ಷ ಅಕ್ಟೋಬರ್‌ನಲ್ಲಿ ಇದರ ಸಂಕ್ಷಿಪ್ತ ಪರಿಷ್ಕರಣೆ ನಡೆಯಿತು. ಆದರೆ, ಜನರಿಗೆ ಇದರ ಬಗ್ಗೆ ಅಷ್ಟಾಗಿ ಗೊತ್ತಿಲ್ಲ. ಒಂದು ಸಲ ತಮ್ಮ ಹೆಸರು ಮತದಾರರ ಪಟ್ಟಿಗೆ ಸೇರಿ, ಎಪಿಕ್ ಕಾರ್ಡ್ ಬಂದು ಬಿಟ್ಟರೆ ಅದು ಕಾಯಂ ಎಂಬ ತಪ್ಪು ನಂಬಿಕೆ ಅವರಲ್ಲಿದೆ. ಜನರು ಚುನಾವಣೆಗೆ ಕೆಲವಾರು ತಿಂಗಳ ಮುಂಚೆಯೇ ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

**ಪ್ರಶ್ನೆ: ಮತಗಟ್ಟೆ ವ್ಯಾಪ್ತಿಯಲ್ಲಿ ಇಲ್ಲದ ಮತದಾರರನ್ನು ಪಟ್ಟಿಯಿಂದ ಕೈಬಿಡುವ ಕಾರ್ಯ ಹೇಗೆ ನಡೆಯುತ್ತದೆ?**

ಮುಖ್ಯ ಚುನಾವಣಾಧಿಕಾರಿಗಳು: ನಾವು ಯಾರದ್ದೇ ಹೆಸರನ್ನು ಮತದಾರರ ಪಟ್ಟಿಯಿಂದ ಏಕಾಏಕಿ ತೆಗೆದು ಹಾಕುವುದಿಲ್ಲ ಅಥವಾ ಸಾಮೂಹಿಕವಾಗಿ ಹೆಸರುಗಳನ್ನು ಒಮ್ಮೆಗೇ ತೆಗೆದು ಹಾಕುವುದಿಲ್ಲ. ಕಳೆದ ಅಕ್ಟೋಬರ್‌ನಲ್ಲಿ ನಡೆದ ಪರಿಷ್ಕರಣೆ ವೇಳೆ ಬೂತ್ ಮಟ್ಟದ ಅಧಿಕಾರಿಗಳು ತಮಗೆ ನಿಗದಿಯಾದ ಪ್ರದೇಶದಲ್ಲಿ ಮನೆಮನೆಗೂ ಹೋಗಿ ಕದ ತಟ್ಟಿ ಪರಿಶೀಲನೆ ನಡೆಸಿದ್ದರು. ಕುಟುಂಬ ಸದಸ್ಯರ ಜೊತೆ ಚರ್ಚಿಸಿದ ನಂತರವೇ ಆ ವ್ಯಾಪ್ತಿಯಲ್ಲಿ ವಾಸವಿಲ್ಲದವರ ಅಥವಾ ಆದಾಗಲೇ ಮೃತರಾಗಿರುವವರ ಹೆಸರು ತೆಗೆಯಲಾಗುತ್ತದೆ. ಇದಕ್ಕಾಗಿ ನಮೂನೆ–7ರಲ್ಲಿ ಕುಟುಂಬ ಸದಸ್ಯರ ಸಹಿಯನ್ನೂ ಹಾಕಿಸಿಕೊಳ್ಳಲಾಗಿರುತ್ತದೆ.

**ಪ್ರಶ್ನೆ: ಈ ಪ್ರಕ್ರಿಯೆಯಲ್ಲಿ ಎದುರಾಗುವ ಸವಾಲುಗಳೇನು?**

ಮುಖ್ಯ ಚುನಾವಣಾಧಿಕಾರಿಗಳು: ನಿಗದಿತ ಕಾಲಮಿತಿಯೊಳಗೆ ದೊಡ್ಡ ಮಟ್ಟದ ಸಿದ್ಧತೆ ಮಾಡಬೇಕಾಗುವುದರಿಂದ ಚುನಾವಣೆ ಕೆಲಸ ಎಂದರೆ ಸವಾಲಿನಿಂದ ಕೂಡಿದ್ದೇ. ಕರ್ನಾಟಕ ರಾಜ್ಯವನ್ನೇ ತೆಗೆದುಕೊಂಡರೆ, ಇಲ್ಲಿ, 58 ಸಾವಿರಕ್ಕೂ ಹೆಚ್ಚು ಮತಗಟ್ಟೆಗಳಲ್ಲಿ 5.03 ಕೋಟಿ ಜನರ ಮತ ಚಲಾವಣೆಗೆ ವ್ಯವಸ್ಥೆ ಮಾಡಬೇಕು. ಮೂರು ಲಕ್ಷಕ್ಕೂ ಹೆಚ್ಚು ನೌಕರರು ಮತ್ತು ಒಂದು ಲಕ್ಷ ಪೊಲೀಸ್ ಸಿಬ್ಬಂದಿ ಇದರಲ್ಲಿ ಭಾಗಿಯಾಗುತ್ತಾರೆ. ಇಷ್ಟೊಂದು ಜನರಿಗೆ ನಿಯಮಗಳು ಮತ್ತು ನಿಬಂಧನೆಗಳ ಬಗ್ಗೆ ಅರಿವು ಮೂಡಿಸಲು ಸೂಕ್ತ ತರಬೇತಿ ಕೊಡಬೇಕಾಗುತ್ತದೆ. ಜೊತೆಗೆ ಚುನಾವಣೆ ಸುಗಮವಾಗಿ ನಡೆಯುವುದನ್ನು ಖಾತ್ರಿಗೊಳಿಸಲು ಎಲ್ಲವನ್ನೂ ಸಮರ್ಪಕವಾಗಿ ವ್ಯವಸ್ಥೆ ಮಾಡಬೇಕಾಗುತ್ತದೆ.

**ಪ್ರಶ್ನೆ: ಮತದಾರರಿಗೆ ನಿಮ್ಮ ಸಂದೇಶ ಏನು?**

ಮುಖ್ಯ ಚುನಾವಣಾಧಿಕಾರಿಗಳು: 18 ವರ್ಷವಾದ ಎಲ್ಲರಿಗೂ ಮತ ಚಲಾವಣೆಯ ಹಕ್ಕು ಇದೆ. ಈ ವಯೋಮಿತಿ ದಾಟಿದ ಎಲ್ಲರೂ ಮತದಾರರ ಪಟ್ಟಿಗೆ ತಮ್ಮ ಹೆಸರು ನೋಂದಾಯಿಸಬೇಕು. ಯಾವುದೇ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಮತ ಚಲಾವಣೆ ಹಕ್ಕಿಗೆ ತುಂಬಾ ಪಾವಿತ್ರ್ಯ ಇದೆ. ಯಾವುದೇ ವ್ಯಕ್ತಿ ಮತ ಹಾಕುವುದಿಲ್ಲ ಎಂದರೆ ಆತ/ಆಕೆ ಸಾಂವಿಧಾನಿಕ ಕರ್ತವ್ಯ ನಿರ್ವಹಿಸುತ್ತಿಲ್ಲ ಎಂದೇ ಅರ್ಥ.





downloaded from: www.kpscvaani.com




downloaded from: www.kpscvaani.com



# ಹದಿನೇಳನೆ ಲೋಕಸಭಾ ಚುನಾವಣೆಯ ಸಂಕ್ಷಿಪ್ತ ಮಾಹಿತಿ

ಉಮೇಶ್ ಕೂಲಿಗೆರೆ

ಹದಿನಾರನೇ ಲೋಕಸಭೆಯ ಅವಧಿ 2019ರ ಜೂನ್ 3ರ ದಿನಕ್ಕೆ ಮುಕ್ತಾಯಗೊಳ್ಳಲಿದೆ. ಅಷ್ಟರೊಳಗೆ ಹೊಸ ಲೋಕಸಭೆಯ ಪ್ರತಿಷ್ಠಾಪನೆಗಾಗಿ ಲೋಕಸಭೆ ಚುನಾವಣೆ ನಡೆಯಬೇಕಿದೆ. ಪ್ರಜಾತಂತ್ರ ಭಾರತದಲ್ಲಿ ಅಗ್ರಗಣ್ಯ ಸಾಂವಿಧಾನಿಕ ಸ್ವಾಯತ್ತ ಸ್ಥಾನಮಾನ ಹೊಂದಿರುವ ಭಾರತದ ಚುನಾವಣಾ ಆಯೋಗ ಜನಪ್ರಾತಿನಿಧ್ಯ ಕಾಯ್ದೆ1951ರ ಸೆಕ್ಷನ್ 14ರಡಿ ತನಗೆ ಪ್ರದತ್ತವಾದ ಅಧಿಕಾರ ಚಲಾಯಿಸಿ, ಹದಿನೇಳನೇಯ ಲೋಕಸಭೆಗೆ ಚುನಾವಣೆ ನಡೆಸಲು ಮಾರ್ಚ್ 10ರಂದು ಸಂಜೆ 5 ಗಂಟೆಗೆ ದಿನಾಂಕವನ್ನು ಕೇಂದ್ರ ಚುನಾವಣಾ ಆಯೋಗದ ಆಯುಕ್ತರಾದ ಸುನಿಲ್ ಅರೋರ ಅವರು ಪ್ರಕಟಿಸಿದರು.

ವಿಶ್ವದಲ್ಲೇ ಶ್ರೇಷ್ಠ ಸಂವಿಧಾನ ಮತ್ತು ಉತ್ಕೃಷ್ಟ ಪ್ರಜಾಪ್ರಭುತ್ವ ಹೊಂದಿರುವ ಕೀರ್ತಿಗೆ ಪಾತ್ರವಾಗಿರುವ ಭಾರತದ 543 ಲೋಕಸಭಾ ಕ್ಷೇತ್ರಗಳಿಗೆ ಒಟ್ಟು ಏಳು ಹಂತಗಳಲ್ಲಿ ಚುನಾವಣೆ ನಡೆಯುತ್ತಿದೆ. ಮಾರ್ಚ್ 11 ರಿಂದ ಆರಂಭಗೊಳ್ಳುವ ಮತದಾನ ಪ್ರಕ್ರಿಯೆ ಮೇ 19ಕ್ಕೆ ಮುಕ್ತಾಯಗೊಳ್ಳಲಿದೆ.

ಆಂಧ್ರ, ಅರುಣಾಚಲ ಪ್ರದೇಶ, ಗೋವಾ, ಗುಜರಾತ್, ಹರ್‍ಯಾಣ, ಹಿಮಾಚಲ ಪ್ರದೇಶ, ಕೇರಳ, ನಾಗಾಲ್ಯಾಂಡ್, ಮಿಜೋರಾಂ, ಪಂಜಾಬ್, ಸಿಕ್ಕಿಂ, ಕೇರಳ, ತಮಿಳುನಾಡು, ಉತ್ತರಾಖಂಡ್, ಅಂಡೋಮಾನ್ ನಿಕೋಬಾರ್, ದಾದರ್‌ಅಂಡ್ ಹವೇಲಿ, ಡಿಯುಡಾಮನ್, ಲಕ್ಷದ್ವೀಪ, ದೆಹಲಿ, ಪಾಂಡಿಚೇರಿ ಮತ್ತು ಚಂಡಿಗಢ ರಾಜ್ಯಗಳಲ್ಲಿ ಒಂದೇ ಹಂತದಲ್ಲಿ ಮತದಾನ ನಡೆಯಲಿದೆ.

ಕರ್ನಾಟಕ, ಮಣಿಪುರ, ರಾಜಸ್ಥಾನ್, ತ್ರಿಪುರ ರಾಜ್ಯಗಳಲ್ಲಿ 2 ಹಂತದಲ್ಲಿ, ಅಸ್ಸಾಂ ಮತ್ತು ಛತ್ತೀಸ್‌ಗಢದಲ್ಲಿ 3 ಹಂತದಲ್ಲಿ, ಜಾರ್ಖಂಡ್, ಮಧ್ಯಪ್ರದೇಶ, ಮಹಾರಾಷ್ಟ್ರ, ಒಡಿಸ್ಸಾ ರಾಜ್ಯಗಳಲ್ಲಿ 4 ಹಂತಗಳಲ್ಲಿ, ಜಮ್ಮು ಕಾಶ್ಮೀರ ರಾಜ್ಯದಲ್ಲಿ 5 ಹಂತಗಳಲ್ಲಿ, ಬಿಹಾರ್, ಉತ್ತರ ಪ್ರದೇಶ್ ಮತ್ತು ಪಶ್ಚಿಮ ಬಂಗಾಳದಲ್ಲಿ 7 ಹಂತದಲ್ಲಿ ಲೋಕಸಭೆಗೆ ಚುನಾವಣೆ ನಡೆಯಲಿದೆ. ಚುನಾವಣೆ ನಂತರ ದೇಶಾದ್ಯಂತ ಏಕಕಾಲಕ್ಕೆ ಮೇ 23ರಂದು ಮತ ಎಣಿಕೆ ನಡೆದು ಅದೇ ದಿನ ಫಲಿತಾಂಶ ಪ್ರಕಟಗೊಳ್ಳಲಿದೆ.

ಈ ಬಾರಿಯ ಚುನಾವಣೆ ಹಲವು ವಿಶೇಷತೆಗಳಿಗೆ ಗಮನ ಸೆಳೆದಿದೆ. ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ತಮ್ಮ ಕ್ರಿಮಿನಲ್ ಮೊಕದ್ದಮೆಗಳ ಬಗ್ಗೆ ಜಾಹಿರಾತು ನೀಡಬೇಕಿದೆ. ಅಭ್ಯರ್ಥಿಗಳು ಪಾನ್ ಸಂಖ್ಯೆ ಹಾಗೂ ಸಾಮಾಜಿಕ ಜಾಲತಾಣಗಳ ಖಾತೆಗಳ ಮಾಹಿತಿಯನ್ನು ನಾಮಪತ್ರದಲ್ಲಿ ಕಡ್ಡಾಯವಾಗಿ ನಮೂದಿಸಬೇಕಿದೆ.

ಒಂದೇ ಹೆಸರಿನ ಹಲವಾರು ಅಭ್ಯರ್ಥಿಗಳು ಸ್ಪರ್ಧೆ ಮಾಡುವುದರಿಂದ ಉಂಟಾಗುವ ಗೊಂದಲಗಳನ್ನು ಬಗೆಹರಿಸಲು ಈ ಬಾರಿ ಮತಯಂತ್ರ ಹಾಗೂ ಅಂಚೆ ಮತಪತ್ರದಲ್ಲಿ ಅಭ್ಯರ್ಥಿಗಳ ಹೆಸರಿನ ಜೊತೆ ಅಭ್ಯರ್ಥಿಗಳ ಭಾವಚಿತ್ರವನ್ನು ಹಾಕಲಾಗಿದೆ. ಹಾಗಾಗಿ ಅನಕ್ಷರಸ್ಥ ಮತದಾರರು ಗೊಂದಲಕ್ಕೆ ಒಳಗಾಗದೆ ಅಭ್ಯರ್ಥಿಯ ಭಾವಚಿತ್ರವನ್ನು ನೋಡಿ ಮತ ಹಾಕಬಹುದಾಗಿದೆ.

ಚುನಾವಣೆಗೆ ಹಲವು ತಿಂಗಳುಗಳಿಂದ ಸಾಕಷ್ಟು ಪೂರ್ವ ತಯಾರಿ ನಡೆಸಿದ ಕೇಂದ್ರ ಚುನಾವಣಾ ಆಯೋಗ ದೇಶದಲ್ಲಿರುವ ಒಟ್ಟು 36 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆಡಳಿತಾತ್ಮಕ ಮುಖ್ಯಸ್ಥರ ಜೊತೆ ಸಮಾಲೋಚನೆ ನಡೆಸಿದ್ದಾರೆ. ಜನವರಿ 21, 22, 23ರಂದು ಎಲ್ಲಾ ರಾಜ್ಯಗಳ ಮುಖ್ಯಕಾರ್ಯದರ್ಶಿಗಳು, ಪೊಲೀಸ್ ಮಹಾ ನಿರ್ದೇಶಕರು, ಗೃಹ ಇಲಾಖೆ ಕಾರ್ಯದರ್ಶಿಗಳು, ಮುಖ್ಯಚುನಾವಣಾಧಿಕಾರಿಗಳು ಮತ್ತು ಪೊಲೀಸ್ ನೋಡೆಲ್ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿದೆ. ಎಲ್ಲಾ ರಾಜ್ಯಗಳ ಕಾನೂನು ಸುವ್ಯವಸ್ಥೆ, ಚುನಾವಣೆ ನಡೆಸಲು ಸಮರ್ಪಕವಾಗಿರುವುದನ್ನು ಆಯೋಗ ಖಚಿತ ಪಡಿಸಿಕೊಂಡಿದೆ. ಆಯಾ ರಾಜ್ಯಗಳ ಹವಾಮಾನ, ಹಬ್ಬಗಳು, ಸಾಂಪ್ರದಾಯಿಕ ಆಚರಣೆಗಳು, ಕೃಷಿ ಚಟುವಟಿಕೆಗಳು, ಪರೀಕ್ಷೆಗಳ ಮಾಹಿತಿ ಪಡೆದು ಅದಕ್ಕನುಗುಣವಾಗಿ ಮತದಾನದ ದಿನಾಂಕ ನಿಗದಿ ಮಾಡಲಾಗಿದೆ.

ಎಲ್ಲಾ ರಾಜಕೀಯ ಪಕ್ಷಗಳ ಜೊತೆಯೂ ಸಮಾಲೋಚನೆ ನಡೆಸಲಾಗಿದೆ. ಹವಾಮಾನದ ಕುರಿತು ಚರ್ಚೆ ನಡೆಸಲಾಗಿದೆ.

ಕಾನೂನು ಸುವ್ಯವಸ್ಥೆ, ರಕ್ಷಣೆ, ಶಾಂತಿಯುತ ಹಾಗೂ ನಿಷ್ಪಕ್ಷಪಾತ ಚುನಾವಣೆಗಾಗಿ ಎಲ್ಲಾ ರಾಜ್ಯಗಳಿಗೂ ಅಗತ್ಯದಷ್ಟು ಕೇಂದ್ರ ಸಶಸ್ತ್ರ ಮೀಸಲು ಪಡೆಗಳನ್ನು ನಿಯೋಜನೆ ಮಾಡಲಾಗುತ್ತಿದೆ.

**ಕ್ಷೇತ್ರ ಪುನರ್‌ವಿಂಗಡಣೆ**

ಚುನಾವಣಾ ಆಯೋಗ 2008ರ ಕ್ಷೇತ್ರ ವಿಂಗಡಣೆ ಆಧಾರದ ಮೇಲೆ ಚುನಾವಣೆಯನ್ನು ನಡೆಸುತ್ತಿದೆ. ಹಾಗಾಗಿ ಆಂಧ್ರ ಪ್ರದೇಶ ಮತ್ತು ತೆಲಂಗಾಣ ರಾಜ್ಯಗಳನ್ನು ಹೊರತು ಪಡಿಸಿ, ಉಳಿದೆಲ್ಲಾ ರಾಜ್ಯಗಳಲ್ಲಿ 2009ರ ಚುನಾವಣೆಯಲ್ಲಿದ್ದ ಕ್ಷೇತ್ರಗಳು ಮತ್ತು ಮೀಸಲು ಕ್ಷೇತ್ರಗಳು ಯಥಾವತ್ತು ಮುಂದುವರೆಯುತ್ತವೆ.

ಹೊಸದಾಗಿ ವಿಭಜನೆಗೊಂಡ ಆಂಧ್ರ ಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ಪೈಕಿ ಆಂಧ್ರ ಪ್ರದೇಶದಲ್ಲಿ ಲೋಕಸಭೆಗೆ 25 ಸಾಮಾನ್ಯ ಕ್ಷೇತ್ರಗಳು, 4 ಪರಿಶಿಷ್ಟ ಜಾತಿ, ಒಂದು ಪರಿಶಿಷ್ಟ ಮೀಸಲು ಕ್ಷೇತ್ರಗಳಿರುತ್ತವೆ. ವಿಧಾನಸಭೆಗೆ 175 ಸಾಮಾನ್ಯ, 29 ಎಸ್‌ಸಿ ಮೀಸಲು, 7 ಎಸ್‌ಟಿ ಮೀಸಲು ಕ್ಷೇತ್ರಗಳಿರಲಿವೆ. ತೆಲಂಗಾಣ ರಾಜ್ಯದಲ್ಲಿ ಲೋಕಸಭೆಗೆ 17 ಸಾಮಾನ್ಯ, 3 ಎಸ್ ಸಿ ಮೀಸಲು, 2 ಎಸ್ ಟಿ ಮೀಸಲು ಕ್ಷೇತ್ರಗಳಿವೆ. ವಿಧಾನಸಭೆಗೆ 119 ಸಾಮಾನ್ಯ, 19 ಎಸ್‌ಸಿ, 12 ಎಸ್‌ಟಿ ಮೀಸಲು ಕ್ಷೇತ್ರಗಳಿವೆ. ಈ ಎರಡು ರಾಜ್ಯಗಳನ್ನು ಹೊರತು ಪಡಿಸಿ ಉಳಿದೆಡೆ 2008ರ ಕ್ಷೇತ್ರ ಪುನರ್ ವಿಂಗಡಣೆ ಆಧಾರದ ಮೇಲೆಯೇ ಚುನಾವಣೆ ನಡೆಯುತ್ತಿದೆ.

**ಮತದಾರರು**

2014 ಲೋಕಸಭೆ ಚುನಾವಣೆಯಲ್ಲಿ 81.45 ಕೋಟಿ ಮತದಾರರಿದ್ದರು. 2019ರ ಲೋಕಸಭೆ ಚುನಾವಣೆಗೆ 8.4 ಕೋಟಿ ಮತದಾರರ ಸಂಖ್ಯೆ ಹೆಚ್ಚಾಗಿದ್ದು, ಈವರೆಗಿನ ಮಾಹಿತಿಯಂತೆ ಸುಮಾರು 90 ಕೋಟಿ ಮತದಾರರು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದಾರೆ.

2019ರ ಜನವರಿ 1ಕ್ಕೆ 18 ವರ್ಷ ತುಂಬುವ ಎಲ್ಲರಿಗೂ ಮತದಾನ ಮಾಡುವ ಹಕ್ಕಿದ್ದು, ಈ ಬಾರಿ 18 ರಿಂದ 19 ವರ್ಷದ ಒಂದುವರೆ ಕೋಟಿ ಯುವ ಮತದಾರರು ಹೊಸದಾಗಿ ನೋಂದಣಿಯಾಗಿದ್ದಾರೆ. ಹೊಸ ಮತದಾರರು ಒಟ್ಟು ಮತದಾರರ ಪ್ರಮಾಣದಲ್ಲಿ ಶೇ.1.66ರಷ್ಟು ಪಾಲು ಪಡೆದಿದ್ದಾರೆ. ಹಾಗೇಯೇ ಕಾಯ್ದೆಗೆ ತಿದ್ದುಪಡಿ ತಂದು ತೃತೀಯ ಲಿಂಗಿಗಳ ಸೇರ್ಪಡೆಗೂ 2012ರಲ್ಲಿ ಅವಕಾಶ ಕಲ್ಪಿಸಲಾಗಿದ್ದು, 38,325 ಮಂದಿ ತೃತೀಯ ಲಿಂಗಿಗಳು ಈ ಬಾರಿ ಹೆಸರು ನೋಂದಾಯಿಸಿಕೊಂಡಿದ್ದಾರೆ. 71,735 ಅನಿವಾಸಿ ಭಾರತೀಯರು ಮತ್ತು 16,77,386 ಮಂದಿ ಸೇವಾ ನಿರತ ಸಿಬ್ಬಂದಿಗಳು ಮತ ಚಲಾಯಿಸಬಹುದಾಗಿದೆ.

**ಮತದಾರರ ಪಟ್ಟಿ**

ಸಂವಿಧಾನದ ಪರಿಚ್ಛೇಧ 370 ಹಾಗೂ ಉಪ ಕಲಮುಗಳಡಿ ವಿಶೇಷ ಸ್ಥಾನ ಮಾನ ಹೊಂದಿರುವ ಜಮ್ಮು ಕಾಶ್ಮೀರ, ಅಸ್ಸಾಂ, ನಾಗಲ್ಯಾಂಡ್, ಹೊರತು ಪಡಿಸಿ ದೇಶದ ಬಹುತೇಕ ರಾಜ್ಯಗಳಲ್ಲಿ ಶೇ.99.72ರಷ್ಟು ಭಾವಚಿತ್ರ ಇರುವ ಮತದಾರರ ಪಟ್ಟಿ ಸಿದ್ಧಪಡಿಸಲಾಗಿದೆ. ಶೇ.99.36ರಷ್ಟು ಭಾವಚಿತ್ರ ಇರುವ ಮತದಾರರ ಗುರುತಿನ ಚೀಟಿಯನ್ನು ಹಂಚಿಕೆ ಮಾಡಲಾಗಿದೆ. 24 ರಾಜ್ಯಗಳು ಪೂರ್ಣ ಪ್ರಮಾಣದಲ್ಲಿ ಭಾವಚಿತ್ರ ಇರುವ ಮತದಾರರ ಪಟ್ಟಿಯನ್ನು ತಯಾರು ಮಾಡಿವೆ.

ಮತದಾರರ ಪಟ್ಟಿಯಲ್ಲಿ ಹೆಸರು ಇರುವುದನ್ನು ಪರಿಶೀಲನೆ ಮಾಡಲು ವೋಟರ್ ವೆರಿಫಿಕೇಷನ್ ಅಂಡ್ ಇನ್‌ಫರ್ಮೇಷನ್ ಪ್ರೊಗ್ರಾಮ್ (ವಿವಿಐಪಿ)ಯನ್ನು ಜಾರಿಗೊಳಿಸಲಾಗಿದ್ದು, ದೇಶಾದ್ಯಂತ ಮತದಾರರು 1950 ಟೋಲ್ ಫ್ರೀ ದೂರವಾಣಿ ಸಂಖ್ಯೆಯನ್ನು ಬಳಸಿ ತಮ್ಮ ಹೆಸರನ್ನು ಪರಿಶೀಲಿಸಿಕೊಳ್ಳಬಹುದಾಗಿದೆ.

ಒಂದು ವೇಳೆ ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದೆ ಇದ್ದರೆ ಕೂಡಲೇ ಫಾರಂ ನಂಬರ್ 6ರಡಿ ಅರ್ಜಿ ಸಲ್ಲಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಚುನಾವಣಾ ಆಯೋಗ ಶಾಂತಿಯುತ ಚುನಾವಣೆ ನಡೆಸಲು ನೀಡುವಷ್ಟೇ ಒತ್ತನ್ನು ಮತದಾರರ ಸೇರ್ಪಡೆಗೂ ನೀಡುತ್ತಿದ್ದು, ಪ್ರತಿನಿತ್ಯ ಇದರ ಉಸ್ತುವಾರಿ ನೋಡಿಕೊಳ್ಳುತ್ತಿದೆ. ಜಿಲ್ಲಾ ಮಟ್ಟದ ಚುನಾವಣಾಧಿಕಾರಿಯ ಗಮನಕ್ಕೆ ತರದೆ ಕೆಳ ಹಂತದ ಚುನಾವಣಾಧಿಕಾರಿಗಳು ಯಾರ ಹೆಸರನ್ನು ಕೈ ಬಿಡಬಾರದು ಎಂಬ ಕಟ್ಟು ನಿಟ್ಟಿನ ಆದೇಶ ಹೊರಡಿಸಲಾಗಿದೆ. ಗೈರುಹಾಜರಾಗಿರುವವರು, ವಾಸವಿದ್ದ ಸ್ಥಳದಿಂದ ಬೇರೆಡೆಗೆ ಸ್ಥಳಾಂತರಗೊಂಡವರು ಮತ್ತು ಮೃತಪಟ್ಟವರ (ಎಎಸ್‌ಡಿ) ಪಟ್ಟಿಯನ್ನು ಬೂತ್ ಮಟ್ಟದ ಚುನಾವಣಾಧಿಕಾರಿ ತಯಾರು ಮಾಡಿ ಮತಗಟ್ಟೆ ಅಧಿಕಾರಿಗಳಿಗೆ ನೀಡಬೇಕಿದೆ. ಒಂದು ವೇಳೆ ಎಎಸ್‌ಡಿ ಪಟ್ಟಿಯಲ್ಲಿರುವವರು ಮತದಾನದ ದಿನ ಆಗಮಿಸಿ ತಮ್ಮ ಗುರುತಿನ ಸೂಕ್ತ ದಾಖಲೆಗಳನ್ನು ಪ್ರದರ್ಶಿಸಿದರೆ ಅವರಿಗೆ ಮತದಾನ ಮಾಡಲು ಅವಕಾಶ ನೀಡಬೇಕಿದೆ. ಎಎಸ್‌ಡಿ ಪಟ್ಟಿಯನ್ನು ತಯಾರು ಮಾಡುವ ಮುನ್ನಾ, ಕರಾರುವಕ್ಕಾದ ವಿಚಾರಣೆ ನಡೆಸಬೇಕು, ಮತದಾನಕ್ಕೆ ಅವಕಾಶ ನೀಡುವಾಗಲೂ ಎರೆಡೆರಡು ಬಾರಿ ಪರಿಶೀಲನೆ ನಡೆಸಬೇಕು ಎಂದು ಸೂಚಿಸಲಾಗಿದೆ.

ಮತದಾರರ ಗುರುತಿನ ಚೀಟಿ ಇದ್ದಾಕ್ಷಣ ಮತದಾನ ಮಾಡುವ ಹಕ್ಕು ಇದೆ ಎಂದು ಭಾವಿಸಬೇಕಿಲ್ಲ. ಮತದಾರರ ಪಟ್ಟಿಯಲ್ಲಿ ಹೆಸರು ಇರುವುದು ಕಡ್ಡಾಯವಾಗಿದೆ. ಮತದಾನಕ್ಕೆ ಕನಿಷ್ಠ ಐದು ದಿನಗಳ ಮೊದಲು ಪ್ರತಿಯೊಬ್ಬರ ಮನೆ ಬಾಗಿಲಿಗೂ ಮತದಾರರ ಚೀಟಿಯನ್ನು ತಲುಪಿಸಲಾಗುತ್ತದೆ. ವಿಲೇವಾರಿಯಾಗದೆ ಬಾಕಿ ಉಳಿದ ಮತದಾರರ ಚೀಟಿಯನ್ನು ಜಪ್ತಿ ಮಾಡಿ ಜಿಲ್ಲಾ ಚುನಾವಣಾಧಿಕಾರಿಗಳು ತಮ್ಮ ವಶದಲ್ಲಿಟ್ಟುಕೊಳ್ಳುತ್ತಾರೆ. ಇದೇ ಮೊದಲ ಬಾರಿಗೆ ಆಯೋಗ ಪ್ರತಿ ಮನೆಗೂ ಮತದಾರರ ಮಾರ್ಗದರ್ಶಿಯನ್ನು ಹಂಚಿಕೆ ಮಾಡುತ್ತಿದೆ. ಅದರಲ್ಲಿ ಮತದಾನ ನಡೆಯುವ ದಿನಾಂಕ, ಸಮಯ, ಬೂತ್ ಮಟ್ಟದ ಚುನಾವಣಾಧಿಕಾರಿಯ ಸಂಪರ್ಕ ಸಂಖ್ಯೆ, ಗುರುತು ಪತ್ತೆಗಾಗಿ ಬಳಸಬಹುದಾದ ದಾಖಲೆಗಳು, ಮತಗಟ್ಟೆಯಲ್ಲಿ ಏನು ಮಾಡಬೇಕು, ಏನು ಮಾಡಬಾರದು ಎಂಬ ಸಮಗ್ರ ಮಾಹಿತಿಯನ್ನು ಅದರಲ್ಲಿ ನೀಡಲಾಗಿರುತ್ತದೆ. ದೃಷ್ಟಿ ಚೇತನ ಮತದಾರರಿಗೆ ಬ್ರೈಲ್ ಲಿಪಿ ಮತದಾರರ ಚೀಟಿಯನ್ನು ನೀಡಲಾಗುತ್ತಿದೆ.

**ಮತಗಟ್ಟೆಗಳು**

ಕಳೆದ ಚುನಾವಣೆಗಿಂತಲೂ ಈ ಬಾರಿ ಶೇ.10.1ರಷ್ಟು ಮತಗಟ್ಟೆಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. 2014ರ ಚುನಾವಣೆಯಲ್ಲಿ 9,28,000 ಮತಗಟ್ಟೆಗಳನ್ನು ಸ್ಥಾಪಿಸಲಾಗಿತ್ತು. ಈ ಚುನಾವಣೆಯಲ್ಲಿ 10,35,918 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಎಲ್ಲಾ ಮತಗಟ್ಟೆಗಳು ಕನಿಷ್ಠ ಮೂಲ ಸೌಲಭ್ಯಗಳನ್ನು ಹೊಂದಿರಲೇಬೇಕು ಎಂಬ ಆದೇಶ





ಹೊರಡಿಸಲಾಗಿದೆ. ಶುದ್ಧ ಕುಡಿಯುವ ನೀರು, ಶೌಚಾಲಯ, ಮಲಗುವ ವ್ಯವಸ್ಥೆ, ವಿಕಲಚೇತನರಿಗಾಗಿ ರ್‍ಯಾಂಪ್ ಮತ್ತು ಮತಚಲಾವಣೆ ಮಾಡಲು ಗುಣಮಟ್ಟದ ಕಂಪಾರ್ಟ್‌ಮೆಂಟ್ ಕಲ್ಪಿಸುವಂತೆ ರಾಜ್ಯ ಮುಖ್ಯ ಚುನಾವಣಾಧಿಕಾರಿಗಳಿಗೆ ಸೂಚಿಸಲಾಗಿದೆ.

**ಮತಯಂತ್ರಗಳು**

ಈ ಬಾರಿ ದೇಶಾದ್ಯಂತ ಎಲ್ಲಾ ಕಡೆಗಳಲ್ಲೂ ವೋಟರ್ ವೆರಿಫೈಯಬಲ್ ಪೇಪರ್ ಆಡಿಟ್ ಟ್ರಯಲ್ (ವಿವಿಪ್ಯಾಟ್) ಬಳಸಲಾಗುತ್ತಿದೆ. ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳಿಗಾಗಿ 10.35 ಲಕ್ಷ ಮತಗಟ್ಟೆಗಳನ್ನು ಸ್ಥಾಪಿಸಲಾಗುತ್ತಿದ್ದು, ಅವುಗಳಲ್ಲಿ 23.3 ಲಕ್ಷ ಮತಯಂತ್ರಗಳು, 16.35 ಲಕ್ಷ ನಿಯಂತ್ರಣ ಘಟಕಗಳನ್ನು ಬಳಸಲಾಗುತ್ತಿದೆ. 17.4 ಲಕ್ಷ ವಿವಿ ಪ್ಯಾಟ್‌ಗಳನ್ನು ಮತಯಂತ್ರಗಳಿಗೆ ಅಳವಡಿಸಲಾಗಿದೆ. ಎಲ್ಲಾ ಮತಯಂತ್ರಗಳನ್ನು ಮೊದಲ ಹಂತದ ಪರಿಶೀಲನೆ ನಡೆಸಿ ಸಜ್ಜುಗೊಳಿಸಲಾಗಿದೆ. ಮತದಾನದ ದಿನ ಮಾಕ್ ಪೋಲ್ ಮಾಡಿ ಮತದಾನಕ್ಕೆ ಅವಕಾಶ ನೀಡುವಂತೆ ಚುನಾವಣಾಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆ. ಮತದಾನದ ಬಳಿಕ ವಿವಿಪ್ಯಾಟ್‌ನ ಪೇಪರ್ ಸ್ಲಿಪ್‌ನ್ನು ಕಡ್ಡಾಯವಾಗಿ ಸಂಗ್ರಹಿಸಿಟ್ಟುಕೊಳ್ಳಲು ಸೂಚನೆ ನೀಡಲಾಗಿದೆ. ಮತ ಎಣಿಕೆಯ ವೇಳೆ ಅದನ್ನು ಪ್ರಮುಖವಾಗಿ ಪರಿಗಣಿಸಲಾಗುತ್ತದೆ.

ಮತಯಂತ್ರಗಳಲ್ಲಿ ಮತ್ತು ಮತ ಪತ್ರಗಳಲ್ಲಿ ನನ್ ಆಫ್ ದಿ ಎಬೋ (ನೋಟಾ) ಅವಕಾಶವನ್ನು ಕಲ್ಪಿಸಲಾಗಿದೆ. ಕಣದಲ್ಲಿರುವ ಯಾವ ಅಭ್ಯರ್ಥಿಗಳಿಗೂ ಮತ ಹಾಕಲು ಇಚ್ಛೆ ಇಲ್ಲದಿದ್ದಲ್ಲಿ ಮತದಾರರು ನೋಟಾ ಚಲಾಯಿಸಬಹುದಾಗಿದೆ.

ಒಂದೆ ಹೆಸರಿನ ಹಲವರು ಸ್ಪರ್ಧೆಯಲ್ಲಿದ್ದಾಗ ಉಂಟಾಗುತ್ತಿದ್ದ ಗೊಂದಲವನ್ನು ನಿವಾರಿಸಲು ಮತಯಂತ್ರ ಮತ್ತು ಮತಪತ್ರದಲ್ಲಿ ಅಭ್ಯರ್ಥಿಗಳ ಭಾವಚಿತ್ರವನ್ನು ಅಳವಡಿಸಲಾಗುತ್ತಿದೆ. ಚುನಾವಣಾ ಅಕ್ರಮಗಳಿಗೆ ಅವಕಾಶವಾಗದಂತೆ ಮತಯಂತ್ರಗಳನ್ನು ಸಾಗಾಣಿಕೆ ಮಾಡುವ ವಾಹನಗಳಿಗೆ ಸೂಕ್ತ ಭದ್ರತೆಯೊಂದಿಗೆ ಜಿಪಿಎಸ್‌ನ್ನು ಅಳವಡಿಸಲಾಗುತ್ತಿದೆ.

**ರಾಜಕೀಯ ಪಕ್ಷಗಳು**

ಭಾರತ ಬಹುಪಕ್ಷಗಳ ರಾಜಕೀಯ ಪದ್ಧತಿಯನ್ನು ಹೊಂದಿದ್ದು ಚುನಾವಣೆಯಲ್ಲಿ ರಾಜಕೀಯ ಪಕ್ಷಗಳ ಪಾತ್ರ ಪ್ರಮುಖವಾಗಿದೆ. ಈ ವರ್ಷ ಚುನಾವಣೆಯಲ್ಲಿ ಸ್ಪರ್ಧಿಸಲು 2354 ಪಕ್ಷಗಳು ಆಯೋಗದಲ್ಲಿ ನೋಂದಣಿ ಮಾಡಿಕೊಂಡಿವೆ. 2014ರ ಚುನಾವಣೆಯಲ್ಲಿ 1709 ಪಕ್ಷಗಳು ನೋಂದಣಿ ಮಾಡಿಕೊಂಡಿದ್ದವು, ಅವುಗಳಲ್ಲಿ 464 ಪಕ್ಷಗಳು ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದವು. ಈ ರಾಜಕೀಯ ಪಕ್ಷಗಳ ಪೈಕಿ ಏಳು ರಾಷ್ಟ್ರೀಯ ಪಕ್ಷಗಳಿಗೆ ಈಗಾಗಲೇ ಚಿಹ್ನೆ ಹಂಚಲಾಗಿದೆ. 52 ರಾಜ್ಯ ಮಟ್ಟದ ಪಕ್ಷಗಳಿಗೂ ಚಿಹ್ನೆ ನೀಡಲಾಗಿದೆ. ಉಳಿದಂತೆ 151 ಚಿಹ್ನೆಗಳನ್ನು 291 ರಾಜಕೀಯ ಪಕ್ಷಗಳಿಗಾಗಿ ಕಾಯ್ದಿರಿಸಲಾಗಿದೆ ಎಂದು ಆಯೋಗ ತಿಳಿಸಿದೆ.

**ಕ್ರಿಮಿನಲ್ ಹಿನ್ನೆಲೆಯನ್ನು ಪ್ರಚಾರ ಮಾಡಬೇಕು:**

ಕೇಂದ್ರ ಸರ್ಕಾರದ ಕಾನೂನು ಇಲಾಖೆ 2019ರ ಫೆಬ್ರವರಿ 29ರಂದು ಸುತ್ತೋಲೆಯೊಂದನ್ನು ಹೊರಡಿಸಿದ್ದು, ಅದರಲ್ಲಿ ಫಾರಂ 26ನ್ನು ಮಾರ್ಪಾಡು ಮಾಡಲಾಗಿದೆ. ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ಫಾರಂ ನಂಬರ್ 26 ರಲ್ಲಿರುವ ಎಲ್ಲಾ ಕಾಲಂಗಳನ್ನು ಭರ್ತಿ ಮಾಡಬೇಕು. ಇಲ್ಲವಾದರೆ ನಾಮಪತ್ರವನ್ನು ತಿರಸ್ಕರಿಸುವ ಅಧಿಕಾರವನ್ನು ಚುನಾವಣಾಧಿಕಾರಿಗಳಿಗೆ ಆಯೋಗ ನೀಡಿದೆ. ಪ್ರಮಾಣ ಪತ್ರಗಳ ಜೊತೆ ಫಾರಂ ನಂಬರ್ 26 ರಲ್ಲಿ ಕೇಳಿರುವಂತೆ ಕ್ರಿಮಿನಲ್ ಕೇಸುಗಳು, ಸ್ಥಿರ ಮತ್ತು ಚರಾಸ್ತಿಗಳ ಮಾಹಿತಿ, ವಿದೇಶಿ ಹೂಡಿಕೆ, ಪತ್ನಿ ಹಾಗೂ ಇತರ ಅವಲಂಬಿತ ಸಂಬಂಧಿಕರ ಹೆಸರಿನಲ್ಲಿರುವ ಆಸ್ತಿಗಳು. ವಿದ್ಯಾಭ್ಯಾಸದ ವಿವರ, ಆದಾಯ ತೆರಿಗೆ ಮಾಹಿತಿ, ಪ್ಯಾನ್ ಸಂಖ್ಯೆ, ಸಾಮಾಜಿಕ ಜಾಲತಾಣಗಳ ಖಾತೆ ಸೇರಿದಂತೆ ಸಮಗ್ರ ವಿವರಗಳನ್ನು ನೀಡಬೇಕಿದೆ.

ಅಭ್ಯರ್ಥಿಗಳು ಸಲ್ಲಿಸಿದ್ದ ದಾಖಲೆಗಳು ಮತ್ತು ಮಾಹಿತಿಗಳನ್ನು ಆಯೋಗ ತಕ್ಷಣವೇ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಿದೆ, ಮೊಬೈಲ್ ಆ್ಯಪ್‌ನಲ್ಲೂ ಈ ಮಾಹಿತಿಗಳು ಲಭ್ಯವಾಗುತ್ತವೆ. ಕ್ಷೇತ್ರದ ಮತದಾರರು ಅವುಗಳನ್ನು ಪರಿಶೀಲನೆ ನಡೆಸಿ ಒಂದು ವೇಳೆ ಅಭ್ಯರ್ಥಿ ತಪ್ಪು ಮಾಹಿತಿ ಕೊಟ್ಟಿದ್ದರೆ, ಅಪೂರ್ಣವಾದ ಮಾಹಿತಿ ನೀಡಿದ್ದರೆ ಸಂಬಂಧಿಸಿದ ಕ್ಷೇತ್ರ ಚುನಾವಣಾಧಿಕಾರಿಯವರಿಗೆ ಲಿಖಿತ ಪ್ರಮಾಣ ಪತ್ರದಲ್ಲಿ ಮಾಹಿತಿ ನೀಡಬಹುದಾಗಿದೆ.

ಪರಿಶುದ್ಧ ಪ್ರಜಾಪ್ರಭುತ್ವಕ್ಕಾಗಿ ಸುಪ್ರೀಂಕೋರ್ಟ್ ಆದೇಶದ ಅನುಸಾರವಾಗಿ ಆಯೋಗ ಮಹತ್ವದ ಕ್ರಮವೊಂದನ್ನು ತೆಗೆದುಕೊಂಡಿದೆ. ಅಭ್ಯರ್ಥಿಗಳು ಕ್ರಿಮಿನಲ್ ಪ್ರಕರಣದಲ್ಲಿ ಆರೋಪಿಯಾಗಿದ್ದರೆ ಆ ಬಗ್ಗೆ ಚುನಾವಣಾ ಪ್ರಚಾರದ ವೇಳೆ ಪತ್ರಿಕೆ ಮತ್ತು ಮಾಧ್ಯಮಗಳಲ್ಲಿ ಜಾಹಿರಾತು ನೀಡಬೇಕಿದೆ. ಆಯಾ ಪಕ್ಷಗಳು ತಮ್ಮ ಅಭ್ಯರ್ಥಿಯ ಕ್ರಿಮಿನಲ್ ಹಿನ್ನೆಲೆಯ ಬಗ್ಗೆ ಪತ್ರಿಕೆ ಮತ್ತು ಟಿವಿಗಳಲ್ಲಿ ಮೂರು ಬಾರಿ ಜಾಹಿರಾತು ನೀಡಬೇಕಿದೆ.

**ಮಾದರಿ ನೀತಿ ಸಂಹಿತೆ**

ಚುನಾವಣಾ ಪ್ರಚಾರದ ವೇಳೆ ಸಾರ್ವಜನಿಕರಿಗೆ ಕಿರಿಕಿರಿಯಾಗದಂತೆ ಎಚ್ಚರಿಕೆ ವಹಿಸಲು ಆಯೋಗ ಕ್ರಮ ಕೈಗೊಂಡಿದೆ. ಬೆಳಗ್ಗೆ 6 ರಿಂದ ರಾತ್ರಿ 10 ಗಂಟೆವರೆಗೆ ಮಾತ್ರ ಧ್ವನಿವರ್ಧಕ ಬಳಸಬೇಕು. ಶಾಲಾ ಕಾಲೇಜು, ಆಸ್ಪತ್ರೆಗಳ ಮುಂದೆ ಧ್ವನಿವರ್ಧಕಗಳನ್ನು ಬಳಸುವಂತಿಲ್ಲ ಎಂಬ ಸೂಚನೆ ನೀಡಲಾಗಿದೆ. ಪ್ರಚಾರದ ವೇಳೆ ಪರಿಸರ ಸ್ನೇಹಿ ಸಾಮಗ್ರಿಗಳನ್ನು ಬಳಸಬೇಕಿದೆ. ಪ್ಲಾಸ್ಟಿಕ್ ಹಾಗೂ ಇತರೆ ಪರಿಸರ ಹಾನಿ ಮಾಡುವ ಸಾಮಗ್ರಿಗಳಿಗೆ ಕಡಿವಾಣ ಹಾಕಲಾಗಿದೆ.

ಮತದಾರರ ಮಾಹಿತಿಗಾಗಿ 1950 ಹೆಲ್ಪ್ ಲೈನ್ ಕೂಡ ಸ್ಥಾಪಿಸಲಾಗಿದೆ. ಇದರಲ್ಲಿ ಸಾರ್ವಜನಿಕರು ಚುನಾವಣೆ ಅಕ್ರಮಗಳ



downloaded from: www.kpscvaani.com

ಕುರಿತಂತೆ ದೂರುಗಳನ್ನು ಕೊಡಬಹುದಾಗಿದೆ. ಚುನಾವಣಾ ಅಕ್ರಮಗಳ ತಡೆಗಾಗಿ ಕಟ್ಟುನಿಟ್ಟಿನ ನೀತಿ ಸಂಹಿತೆಯನ್ನು ಜಾರಿಗೆ ತರಲಾಗಿದೆ. ಶಾಂತಿಯುತ ಮತ್ತು ನಿಷ್ಪಕ್ಷಪಾತ ಚುನಾವಣೆಗಾಗಿ ವೀಕ್ಷಕರನ್ನು ನೇಮಿಸಲಾಗಿದೆ. ಅವರ ಜೊತೆಗೆ ಖರ್ಚು ವೆಚ್ಚ ನಿಗಾವಹಿಸುವ ವೀಕ್ಷಕರು, ಪೊಲೀಸ್ ವೀಕ್ಷಕರು, ಮೈಕ್ರೋ ಅಬ್ಸರ್ವರ್ಸ್ ನೇಮಿಸಲಾಗಿದೆ. ಅಭ್ಯರ್ಥಿಗಳಿಗೆ ಅಗತ್ಯ ಪರವಾನಗಿ ಪಡೆದುಕೊಳ್ಳಲು ಅನುಕೂಲವಾಗುವಂತೆ ಏಕಗವಾಕ್ಷಿ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

ಚುನಾವಣೆಯ ಪೂರ್ವದ 24 ಗಂಟೆಗಳಲ್ಲಿ ಹಣ ಹಂಚಿಕೆ ಹಾಗೂ ಇತರ ವಸ್ತುಗಳನ್ನು ನೀಡಿ ಮತದಾರರ ಮನವೊಲಿಸುವ ಪ್ರಯತ್ನ ತಡೆಯಲು ಪೋಲ್ ಡೇ ಮಾನಿಟರಿಂಗ್ ವ್ಯವಸ್ಥೆಯನ್ನು ರೂಪಿಸಲಾಗಿದೆ. ಚುನಾವಣಾ ಖರ್ಚು ವೆಚ್ಚಗಳ ಮೇಲೆ ಹದ್ದಿನ ಕಣ್ಣಿಡಲಾಗಿದೆ. ಲೋಕಸಭೆಯ ಪ್ರತಿ ಅಭ್ಯರ್ಥಿಯೂ 70 ಲಕ್ಷ ರೂ.ಗಳವರೆಗೆ ಖರ್ಚು ಮಾಡಲು ಅವಕಾಶವಿದೆ. ಅರುಣಾಚಲ ಪ್ರದೇಶ, ಗೋವಾ, ಸಿಕ್ಕಿಂ, ದಿಲ್ಲಿ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಅಭ್ಯರ್ಥಿಗಳಿಗೆ 54 ಲಕ್ಷ ರೂ.ಗಳ ಮಿತಿ ನಿಗದಿ ಪಡಿಸಲಾಗಿದೆ.

ಆಂಧ್ರ ಪ್ರದೇಶ, ಒಡಿಸ್ಸಾ ವಿಧಾನಸಭೆ ಚುನಾವಣೆ ಚುನಾವಣಾ ಅಭ್ಯರ್ಥಿಗಳು 28 ಲಕ್ಷ ರೂ.ಗಳವರೆಗೆ ಖರ್ಚು ಮಾಡಲು ಅವಕಾಶವಿದೆ. 10 ಸಾವಿರಕ್ಕಿಂತ ಹೆಚ್ಚಿನ ಖರ್ಚು ಮಾಡಬೇಕಾದ ಸಂದರ್ಭದಲ್ಲಿ ನಗದು ವ್ಯವಹಾರ ಮಾಡದೆ ಚೆಕ್ ಅಥವಾ ಆನ್‌ಲೈನ್ ಪೇಮೆಂಟ್‌ಮೂಲಕ ಹಣ ಪಾವತಿಸಬೇಕಿದೆ. ಚುನಾವಣೆ ಮುಗಿದ ಎರಡುವರೆ ತಿಂಗಳ ಒಳಗಾಗಿ ತಾವು ಚುನಾವಣೆಗೆ ಮಾಡಿದ ಖರ್ಚುಗಳ ಸಂಪೂರ್ಣ ವಿವರಗಳ ದಾಖಲೆಗಳನ್ನು ಆಯೋಗಕ್ಕೆ ಸಲ್ಲಿಸಬೇಕಿದೆ.

**ಮತದಾರರ ಗುರುತಿನ ಚೀಟಿಗೆ ಪರ್ಯಾಯವಾಗಿ ಬಳಕೆ ಮಾಡಬಹುದಾದ ದಾಖಲೆಗಳು:**

- ಪಾಸ್‌ಪೋರ್ಟ್,
- ಡ್ರೈವಿಂಗ್ ಲೈಸೆನ್ಸ್,
- ಔದ್ಯೋಗಿಕ ಗುರುತಿನ ಚೀಟಿ,
- ಪೋಸ್ಟ್ ಆಫೀಸ್ ಅಥವಾ ಬ್ಯಾಂಕ್‌ಗಳು ನೀಡಿರುವ ಪಾಸ್‌ಬುಕ್,
- ಪ್ಯಾನ್ ಕಾರ್ಡ್
- ಆರ್‌ಜಿಐ ಅಥವಾ ಎನ್‌ಪಿಆರ್ ಮೂಲಕ ನೀಡಲಾಗಿರುವ ಸ್ಮಾರ್ಟ್ ಕಾರ್ಡ್,
- ಉದ್ಯೋಗ ಖಾತ್ರಿ ಗುರುತಿನ ಪತ್ರ,
- ಕಾರ್ಮಿಕ ಇಲಾಖೆಯಿಂದ ನೀಡಲಾಗಿರುವ ವಿಮಾಕಾರ್ಡ್‌ಗಳು,
- ಫೋಟೋ ಸಹಿತದ ಪಿಂಚಣಿ ಕಾರ್ಡ್,
- ಶಾಸಕರು, ಸಂಸದರು ನೀಡಿರುವ ಅಧಿಕೃತ ಗುರುತಿನ ಚೀಟಿ,

**ತಂತ್ರಜ್ಞಾನದ ಬಳಕೆ**

ಚುನಾವಣೆ ಕರ್ತವ್ಯದಲ್ಲಿ ದಕ್ಷತೆ ಹೆಚ್ಚಿಸಲು ಮಾಹಿತಿ ತಂತ್ರಜ್ಞಾನವನ್ನು ಆಯೋಗ ಹೆಚ್ಚಾಗಿ ಬಳಸಿಕೊಳ್ಳುತ್ತಿದೆ. ಚುನಾವಣಾ ಅಕ್ರಮಗಳನ್ನು ತಡೆಯಲು ಸಿವಿಜಿಲ್ ಆ್ಯಪ್, ವೋಟರ್ ಹೆಲ್ಪ್‌ಲೈನ್ ಮೊಬೈಲ್ ಆ್ಯಪ್, ವಿಕಲಚೇತನರಿಗಾಗಿ ಪಿಡಬ್ಲ್ಯು ಆ್ಯಪ್, ಅಭ್ಯರ್ಥಿಗಳಿಗಾಗಿ ಸುವಿಧ ಕ್ಯಾಂಡಿಡೇಟ್ ಆ್ಯಪ್, ಸಾರ್ವಜನಿಕರ ಸಲಹೆ ಸೂಚನೆ ಸ್ವೀಕರಿಸಲು ಸಮಾಧಾನ ವೆಬ್‌ಸೈಟ್, ವೋಟರ್ ಹೆಲ್ಪ್ ಲೈನ್ ಸೆಂಟರ್, ಚುನಾವಣಾಧಿಕಾರಿಗಳಿಗಾಗಿ ವೀಕ್ಷಕರ ಆ್ಯಪ್, ಸುವಿಧ ಆ್ಯಪ್, ವಾಹನಗಳಿಗೆ ಅನುಮತಿ ನೀಡಲು ಸುಗಮ ಆ್ಯಪ್, ಮತಯಂತ್ರಗಳ ಸಾಗಾಣಿಕೆ ಮೇಲೆ ನಿಗಾ ಇಡಲು ಇವಿಎಂ ಮ್ಯಾನೇಜ್‌ಮೆಂಟ್ ಸಿಸ್ಟಮ್, ಚುನಾವಣಾ ನಿಗಾವಣೆಗಾಗಿ ಡ್ಯಾಶ್‌ಬೋರ್ಡ್, ಚುನಾವಣಾ ಕರ್ತವ್ಯ ನಿರತ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗಾಗಿ ಇಟಿಪಿಬಿಎಸ್ ಸೇವೆಯನ್ನು ಆಯೋಗ ಮಾಹಿತಿ ತಂತ್ರಜ್ಞಾನ ಬಳಸಿಕೊಂಡು ನೀಡುತ್ತಿದೆ.

ಚುನಾವಣಾ ಅಕ್ರಮಗಳನ್ನು ಸಾರ್ವಜನಿಕರು ನೇರವಾಗಿ ತಕ್ಷಣವೇ ಚುನಾವಣಾ ಆಯೋಗದ ಗಮಕ್ಕೆ ತರುವ ನಿಟ್ಟಿನಲ್ಲಿ ರೂಪಿಸಲಾಗಿರುವ ಸಿವಿಜಿಲ್ ಮೊಬೈಲ್ ಅಪ್ಲಿಕೇಷನ್ ಈ ಬಾರಿ ದೊಡ್ಡ ಸಂಚಲನ ಮೂಡಿಸುವ ನಿರೀಕ್ಷೆ ಹುಟ್ಟಿಸಿದೆ.

ಕಳೆದ ಬಾರಿ ವಿಧಾನಸಭೆ ಚುನಾವಣೆಯಲ್ಲಿ ಬೆಂಗಳೂರಿನ ಬಿಬಿಎಂಪಿ ವ್ಯಾಪ್ತಿಯ ಕ್ಷೇತ್ರಗಳ ಈ ಮೊಬೈಲ್ ಆ್ಯಪ್‌ನ್ನು ಪ್ರಾಯೋಗಿಕವಾಗಿ ಬಳಸಲಾಗಿತ್ತು. ಲೋಕಸಭೆ ಚುನಾವಣೆಗೆ ಅದನ್ನು ದೇಶಾದ್ಯಂತ ಅನುಷ್ಠಾನಕ್ಕೆ ತರಲಾಗುತ್ತಿದೆ. ಮೊದಲ ಹಂತದ ಚುನಾವಣೆಗೆ ನಾಮಪತ್ರ ಸಲ್ಲಿಕೆ ಆರಂಭಗೊಳ್ಳುವ ದಿನವಾದ ಮಾರ್ಚ್ 18 ರಿಂದ ಆ್ಯಪ್ ಸಾರ್ವಜನಿಕರ ಬಳಕೆಗೆ ಲಭ್ಯವಾಗಲಿದೆ.

ಚುನಾವಣೆ ವೇಳೆ ಹಣ, ಸೀರೆ, ಕುಕ್ಕರ್, ಬಟ್ಟೆಗಳು ಸೇರಿದಂತೆ ಯಾವುದೇ ರೀತಿಯ ವಸ್ತುಗಳನ್ನು ಮತದಾರರಿಗೆ ಹಂಚಿಕೆ ಮಾಡಿದರೆ ಅಥವಾ ಫ್ಲೆಕ್ಸ್, ಬ್ಯಾನರ್‌ಗಳನ್ನು ಅನಧಿಕೃತವಾಗಿ ಅಳವಡಿಸುವುದು, ಇನ್ನೊಬ್ಬರ ಪ್ರಚಾರಕ್ಕೆ ಅಡ್ಡಿಪಡಿಸುವುದು, ವೈಷಮ್ಯದ ಹೇಳಿಕೆಗಳು, ಅಪಪ್ರಚಾರ, ವದಂತಿಗಳನ್ನು ಹರಡುವುದು ಸೇರಿದಂತೆ ಯಾವುದೇ ರೀತಿಯ ಚುನಾವಣಾ ಅಕ್ರಮಗಳು ಅಥವಾ ನೀತಿ ಸಂಹಿತೆ ಉಲ್ಲಂಘನೆ ನಡೆದರೂ ಸಿವಿಜಿಲ್ ಮೊಬೈಲ್ ಅಪ್ಲಿಕೇಷನ್‌ನಲ್ಲಿ ಫೋಟೋ, ವಿಡಿಯೋ ತೆಗೆದು ತಕ್ಷಣ ದೂರು ನೀಡಬಹುದಾಗಿದೆ ಈ ಅಪ್ಲಿಕೆಷನ್‌ನಲ್ಲಿ ತೆಗೆದ ಫೋಟೋ, ವಿಡಿಯೋಗಳು ನೇರವಾಗಿ ಜಿಲ್ಲಾ ಚುನಾವಣಾಧಿಕಾರಿಗಳ ಉಸ್ತುವಾರಿಯಲ್ಲಿರುವ ಕಂಟ್ರೋಲ್ ರೂಂಗೆ ರವಾನೆಯಾಗುತ್ತದೆ. ಘಟನೆ ನಡೆಯುವ ಜಾಗದಲ್ಲಿ ನಿಂತು ಫೋಟೋ ಅಥವಾ ವಿಡಿಯೋ ತೆಗೆಯುವುದರಿಂದ ಆ ಫೋಟೋದಲ್ಲಿ ಜಿಯೋ ಟ್ಯಾಗ್‌ನ ಲೋಕೆಷನ್ ಮತ್ತು ಸಮಯ, ದಿನಾಂಕದ ವಿವರಗಳು ಬ್ಯಾಕ್ ಎಂಡ್‌ನಲ್ಲಿ ರವಾನೆಯಾಗುತ್ತವೆ. ದಿನದ 24 ಗಂಟೆ ಕೆಲಸ ಮಾಡುವ ಕಂಟ್ರೋಲ್ ರೂಂನ ಸಿಬ್ಬಂದಿಗಳು ಪರಿಶೀಲನೆ ನಡೆಸಿ, ಘಟನೆ ನಡೆದ ಸ್ಥಳದ ಸಮೀಪದಲ್ಲಿರುವ ವಿಚಕ್ಷಣ ದಳಕ್ಕೆ ಮಾಹಿತಿ ರವಾನಿಸುತ್ತಾರೆ.

ಆಯೋಗ ನಿಯೋಜಿಸಿರುವ ದಳದ ಸಿಬ್ಬಂದಿಗಳು 15 ನಿಮಿಷದಲ್ಲಿ ಸ್ಥಳಕ್ಕೆ ತಲುಪುತ್ತಾರೆ. ದೂರು ಅಥವಾ ಮಾಹಿತಿಯ

| ಹಂತಗಳು | | | | | | |
|---|---|---|---|---|---|---|
| ವಿವರ | 1 | 2 | 3 | 4 | 5 | 6 |
| ನಾಮಪತ್ರ ಸಲ್ಲಿಕೆ ಆರಂಭ | ಮಾ.18 | ಮಾ.19 | ಮಾ.28 | ಏ.2 | ಏ.10 | ಏ.16 |
| ನಾಮಪತ್ರ ಸಲ್ಲಿಕೆ ಕೊನೆದಿನ | ಮಾ.25 | ಮಾ.26 | ಏ.4 | ಏ.9 | ಏ.18 | ಏ.23 |
| ನಾಮಪತ್ರ ಪರಿಶೀಲನೆ | ಮಾ.26 | ಮಾ.27 | ಏ.5 | ಏ.10 | ಏ.20 | ಏ.24 |
| ವಾಪಸ್‌ಗೆ ಕೊನೆ ದಿನ | ಮಾ.28 | ಮಾ.29 | ಏ.8 | ಏ.12 | ಏ.22 | ಏ.26 |
| ಮತದಾನದ ದಿನಾಂಕ | ಏ.11 | ಏ.18 | ಏ.23 | ಏ.29 | ಮೇ 6 | ಮೇ 12 |
| ಮತ ಎಣಿಕೆ ದಿನಾಂಕ | ಮೇ 23 | ಮೇ 23 | ಮೇ 23 | ಮೇ 23 | ಮೇ 23 | ಮೇ 23 |
| ರಾಜ್ಯಗಳ ಸಂಖ್ಯೆ | 20 | 13 | 14 | 9 | 7 | 7 |
| ಕ್ಷೇತ್ರಗಳ ಸಂಖ್ಯೆ | 91 | 97 | 115 | 71 | 51 | 59 |

ಸತ್ಯಾಸತ್ಯತೆಯ ಬಗ್ಗೆ ಪ್ರಾಥಮಿಕ ವಿಚಾರಣೆ ನಡೆಸಿ 30 ನಿಮಿಷದ ಒಳಗೆ ಕಂಟ್ರೋಲ್‌ರೂಂಗೆ ವರದಿ ಮಾಡುತ್ತಾರೆ. ದೂರು ನೀಡಿದ 100 ನಿಮಿಷಗಳೊಳಗಾಗಿ ದೂರುದಾರರಿಗೆ ಚುನಾವಣಾ ಆಯೋಗದ ಕಡೆಯಿಂದ ದೂರಿನ ಮೇಲೆ ತೆಗೆದುಕೊಂಡ ಕ್ರಮಗಳ ಕುರಿತು ಮಾಹಿತಿ ನೀಡಲಾಗುತ್ತದೆ. ದೂರು ನೀಡುವವರು ಬಯಸಿದರೆ ಅವರ ಹೆಸರಿನಲ್ಲಿ ದೂರು ದಾಖಲಾಗುತ್ತದೆ, ಇಲ್ಲವಾದರೆ ಆಯೋಗವೇ ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿ ವಿಚಾರಣೆ ಮುಂದುವರೆಸುತ್ತದೆ. ಆದರೆ ದೂರುದಾರರು ಕಳುಹಿಸಿರುವ ಫೋಟೋ ಮತ್ತು ವಿಡಿಯೋಗಳನ್ನು ವಿಚಾರಣೆ ವೇಳೆ ಸಾಕ್ಷ್ಯಗಳನ್ನಾಗಿ ಪರಿಗಣಿಸಲಾಗುತ್ತದೆ.

ಸುವಿಧಾ ಅಪ್ಲಿಕೇಷನ್‌ನನ್ನು ಕೂಡ ಚುನಾವಣಾ ಆಯೋಗ ಬಳಸುತ್ತಿದ್ದು, ಅಭ್ಯರ್ಥಿಗಳು ಸಲ್ಲಿಸುವ ಯಾವುದೇ ಅಫಿಡವಿಟ್ ಮತ್ತು ದಾಖಲೆಗಳನ್ನು ತಕ್ಷಣವೇ ಈ ಅಪ್ಲಿಕೇಷನ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ. ಅದನ್ನು ಕ್ಷೇತ್ರದ ಜನರು ಪರಿಶೀಲನೆ ನಡೆಸಿ ಅಭ್ಯರ್ಥಿ ಸಲ್ಲಿಸಿರುವ ಮಾಹಿತಿ ತಪ್ಪು ಎಂದು ಕಂಡು ಬಂದರೆ ಕೂಡಲೇ ಸ್ಥಳೀಯ ಚುನಾವಣಾಧಿಕಾರಿಗೆ ಕೌಂಟರ್ ಅಫಿಡವಿಟ್‌ನ್ನು ಸಲ್ಲಿಸಿ ಸ್ಪಷ್ಟ ಮಾಹಿತಿ ನೀಡಬಹುದಾಗಿದೆ.

ಈ ಬಾರಿಯ ಚುನಾವಣೆಯಲ್ಲಿ ಸಾಮಾಜಿಕ ಜಾಲತಾಣಗಳ ಮೇಲೆ ತೀವ್ರ ನಿಗಾ ವಹಿಸಲಾಗಿದೆ. ಸಾರ್ವಜನಿಕರು ಅಭ್ಯರ್ಥಿಯ ಪರವಾಗಿ ಮಾತನಾಡಲು ಯಾವುದೇ ಆಕ್ಷೇಪಣೆ ಇಲ್ಲ. ಆದರೆ ಅಪಪ್ರಚಾರ ಮಾಡುವುದು, ಅವಹೇಳನ ಮಾಡುವುದು, ಫೇಕ್ ನ್ಯೂಸ್, ಲಾಭಾಂಶಕ್ಕಾಗಿ ಪ್ರಚಾರ ಮಾಡುವುದು ಕಂಡುಬಂದರೆ ಆಯೋಗ ಕ್ರಮ ಜರುಗಿಸಲಿದೆ. ರಾಜಕೀಯ ಪಕ್ಷಗಳ ಖಾತೆಗಳು, ಫ್ಯಾನ್ಸ್ ಕ್ಲಬ್‌ಗಳ ಖಾತೆಗಳ ಮೇಲೆ ತೀವ್ರ ನಿಗಾ ಇಡಲಾಗುತ್ತಿದೆ.

**ವಿಧಾನಸಭೆಗಳಿಗೂ ಚುನಾವಣೆ**

ಲೋಕಸಭೆಯ ಜೊತೆಗೆ ನಾಲ್ಕು ರಾಜ್ಯಗಳ ವಿಧಾನಸಭೆ ಮತ್ತು ಕೆಲ ರಾಜ್ಯಗಳ ವಿಧಾನಸಭೆಗೆ ಉಪಚುನಾವಣೆಗಳನ್ನು ಇದೇ ವೇಳೆ ನಡೆಸಲಾಗುತ್ತಿದೆ. ಆಂಧ್ರ ಪ್ರದೇಶದ ವಿಧಾನಸಭೆಯ ಅವಧಿ ಜೂನ್ 18ಕ್ಕೆ ಅರುಣಾಚಲ ಪ್ರದೇಶ ವಿಧಾನಸಭೆಯ ಅವಧಿ ಜೂನ್ 1ಕ್ಕೆ, ಒಡಿಸಾ ವಿಧಾನಸಭೆಯ ಅವಧಿ ಜೂನ್ 11ಕ್ಕೆ, ಸಿಕ್ಕಿಂನ ಅವಧಿ ಮೇ 27ಕ್ಕೆ ಮುಕ್ತಾಯವಾಗಲಿದೆ. ತಮಿಳುನಾಡಿನ 18, ಗೋವಾ, ಗುಜರಾತ್‌ನ ತಲಾ 3, ಬಿಹಾರ, ಪಶ್ಚಿಮ ಬಂಗಾಳದ ತಲಾ 2, ಉತ್ತರ ಪ್ರದೇಶ, ಮಧ್ಯ ಪ್ರದೇಶ, ಮಹಾರಾಷ್ಟ್ರ, ಮೇಘಾಲಯ, ಮಿಜೋರಾಂ, ನಾಗಲ್ಯಾಂಡ್, ಪುದಚೇರಿಯ ತಲಾ ಒಂದು ಸ್ಥಾನ ಸೇರಿ ಖಾಲಿ ಇರುವ 34 ವಿಧಾನಸಭೆಗಳಿಗೂ ಇದೇ ಸಂದರ್ಭದಲ್ಲಿ ಉಪಚುನಾವಣೆಗಳನ್ನು ನಡೆಸಲಾಗುತ್ತಿದೆ.

**ಕರ್ನಾಟಕ ರಾಜ್ಯದಲ್ಲಿನ ಚುನಾವಣೆ**

ಕರ್ನಾಟಕ ರಾಜ್ಯದಲ್ಲಿರುವ 28 ಲೋಕಸಭಾ ಕ್ಷೇತ್ರಗಳ ಪೈಕಿ 14 ಕ್ಷೇತ್ರಗಳಿಗೆ ಮೊದಲ ಹಂತದಲ್ಲಿ ಏಪ್ರಿಲ್ 18 ರಂದು, ಉಳಿದ 14 ಕ್ಷೇತ್ರಗಳಿಗೆ ಏಪ್ರಿಲ್ 23ರಂದು ಎರಡನೇ ಹಂತದಲ್ಲಿ ಚುನಾವಣೆ ನಡೆಯಲಿದೆ. ಮೊದಲ ಹಂತದ ಚುನಾವಣೆಗೆ ಮಾರ್ಚ್ 19 ರಂದು ಅಧಿಸೂಚನೆ ಹೊರಡಿಸಲಾಗುವುದು. ನಾಮಪತ್ರ ಸಲ್ಲಿಸಲು ಮಾರ್ಚ್ 26 ಕೊನೆಯ ದಿನಾಂಕವಾಗಿದೆ. ಮಾರ್ಚ್ 27 ರಂದು ನಾಮ ಪತ್ರ ಪರಿಶೀಲನೆ, ಮಾರ್ಚ್ 29 ರಂದು ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿರುತ್ತದೆ. ದ್ವಿತೀಯ ಹಂತದ ಅಧಿಸೂಚನೆಯನ್ನು ಮಾರ್ಚ್ 28 ರಂದು ಹೊರಡಿಸಲಾಗುವುದು. ನಾಮಪತ್ರ ಸಲ್ಲಿಕೆಗೆ ಏಪ್ರಿಲ್ 4 ಕೊನೆಯ ದಿನ. ಏಪ್ರಿಲ್ 5 ರಂದು ಪರಿಶೀಲನೆ, ಹಾಗು ಏಪ್ರಿಲ್ 8 ರಂದು ನಾಮಪತ್ರ ಹಿಂಪಡೆಯಲು ಕೊನೆ ದಿನವಾಗಿರುತ್ತದೆ.





downloaded from: www.kpscvaani.com

# AllToPoll




## ನಾವು ನೆರವಾಗುತ್ತೇವೆ; ನಿಮ್ಮ ಸಹಾಯಕ್ಕೆ ನಾವಿದ್ದೇವೆ.

### ಲೋಕಸಭಾ ಚುನಾವಣೆ – 2019

ಗುರುವಾರ, 18 ಮತ್ತು ಮಂಗಳವಾರ 23 ಏಪ್ರಿಲ್ 2019 | ಬೆಳಗ್ಗೆ 7 ರಿಂದ ಸಂಜೆ 6 ಗಂಟೆವರೆಗೆ

CALL TOLL FREE 1950

ceokarnataka

"ಯಾವುದೇ ಮತದಾರ ಮತದಾನದಿಂದ ಹೊರಗುಳಿಯಬಾರದು"

ಮುಖ್ಯ ಚುನಾವಣಾಧಿಕಾರಿ, ಕರ್ನಾಟಕ
ಶೇಷಾದ್ರಿ ರಸ್ತೆ, ಬೆಂಗಳೂರು – 560 001
www.ceokarnataka.kar.nic.in


downloaded from: www.kpscvaani.com



# ಕರ್ನಾಟಕದಲ್ಲಿ ಚುನಾವಣೆ ಒಂದು ನೋಟ

ಕೇಂದ್ರದಲ್ಲಿ ಹೊಸ ಸರ್ಕಾರ ರಚನೆಗೆ ಪೂರಕವಾಗಿ ಇಡೀ ದೇಶದಲ್ಲಿ ಜನತಂತ್ರದ ಹಬ್ಬವೆಂದೆ ಕರೆಯಲ್ಪಡುವ ಚುನಾವಣೆಯ ಕಾವು ಏರ ತೊಡಗಿದೆ. 17ನೇ ಲೋಕಸಭೆ ಚುನಾವಣೆಗೆ ಇಡೀ ದೇಶ ಸಜ್ಜಾಗುತ್ತಿದೆ. ರಾಜಕೀಯ ಪಕ್ಷಗಳು ಹೆಚ್ಚು ಸ್ಥಾನಗಳನ್ನು ಗೆದ್ದು ಅಧಿಕಾರ ಹಿಡಿಯಲು ಕಸರತ್ತು ನಡೆಸಿವೆ. ಈ ಹಿನ್ನೆಲೆಯಲ್ಲಿ ಇಡೀ ದೇಶದ ಹಾಗೂ ರಾಜ್ಯದ ಚುನಾವಣೆಯ ಇಣುಕು ನೋಟ ಇಲ್ಲಿದೆ.

ಆಧುನಿಕ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವ ವ್ಯವಸ್ಥೆಯ ಅಸ್ತವೇ ಚುನಾವಣೆ. ಇಡೀ ವಿಶ್ವದಲ್ಲಿಯೇ ಎಲ್ಲ ದೇಶಗಳಲ್ಲಿ ಚುನಾವಣೆ ನಡೆಯುತ್ತದೆ. ಪುರಾತನ ಅಥೆನ್ಸ್‌ನಲ್ಲಿ ರೂಢಿಯಲ್ಲಿದ್ದ ಮಾದರಿಗಿಂತ ಭಿನ್ನ ಮಾದರಿಯಲ್ಲಿ ಈಗ ವಿಶ್ವದಾದ್ಯಂತ ಚುನಾವಣೆ ನಡೆಯುತ್ತದೆ. ಆ ಮೂಲಕ ನಮ್ಮನ್ನಾಳುವ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ.

ಹಾಗೇ ನೋಡಿದರೆ ಚುನಾವಣೆ ಕೇವಲ ಒಂದು ಔಪಚಾರಿಕ ವ್ಯವಸ್ಥೆ ಮಾತ್ರ ಆಗಿದೆ. ಒಂದು ಸಾಧಾರಣ ಪ್ರಕ್ರಿಯೆಯಲ್ಲಿ ಚುನಾವಣೆಗಳು 17ನೇ ಶತಮಾನದಿಂದಲೂ ನಡೆಯುತ್ತ ಬರುತ್ತಿವೆ. ಪ್ರಾಚೀನ ಗ್ರೀಕ್ ಮತ್ತು ಪ್ರಾಚೀನ ರೋಮ್‌ನಲ್ಲಿ ಹಾಗೂ ಮಧ್ಯಕಾಲೀನ ಯುಗದ ಪೂರ್ತಿ ಹೋಲಿ ರೋಮನ್ ಎಂಪರರ್ ಹಾಗೂ ದಿ ಪೋಪ್ ಅವರಂಥ ಆಳುವವರನ್ನು ಆಯ್ಕೆ ಮಾಡಲು ಚುನಾವಣೆಗಳನ್ನು ನಡೆಸಲಾಗುತ್ತಿತ್ತು. ಉತ್ತರ ಅಮೇರಿಕಾದಲ್ಲಿ ಮತ್ತು ಯುರೋಪಿನಲ್ಲಿ ಪ್ರತಿನಿಧಿ ಸರ್ಕಾರದ ಆಲೋಚನೆ ಆಗುವವರೆಗೂ ಆಧುನಿಕ ಸಾರ್ವಜನಿಕ ಚುನಾವಣೆಗಳು ನಡೆದಿರಲಿಲ್ಲ.

ನಮ್ಮ ದೇಶದಲ್ಲಿ ವಿವಿಧ ಹಂತಗಳಲ್ಲಿ ಚುನಾವಣೆಗಳನ್ನು ನಾವು ಕಾಣುತ್ತೇವೆ. ರಾಷ್ಟ್ರಪತಿ, ಉಪ ರಾಷ್ಟ್ರಪತಿ, ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್, ಪೌರ ಸಂಸ್ಥೆಗಳು, ಪಂಚಾಯತ್ ಸಂಸ್ಥೆಗಳಿಗೆ ಚುನಾವಣೆಗಳು ನಡೆಯುತ್ತವೆ. ಅದರಲ್ಲಿ ಕೆಲವು ಜನರಿಂದ ನೇರವಾಗಿ ಭಾಗಿಯಾಗುವ ಚುನಾವಣೆಗಳಾದರೆ, ಇನ್ನೂ ಕೆಲವು ಕೇವಲ ಜನಪ್ರತಿನಿಧಿಗಳು ಮಾತ್ರ ಮತ ಚಲಾಯಿಸುವ ಚುನಾವಣೆಗಳಾಗಿವೆ. ಅದರ ಜತೆಗೆ ರಾಷ್ಟ್ರಪತಿ, ವಿಧಾನ ಪರಿಷತ್ ಹಾಗೂ ರಾಜ್ಯಸಭೆಗಳ ಚುನಾವಣಾ ಪ್ರಕ್ರಿಯೆಗಳು ಸಾರ್ವತ್ರಿಕ ಚುನಾವಣೆಗಳಿಗಿಂತ ಭಿನ್ನವಾಗಿವೆ. ಇದಲ್ಲದೇ ಸಂಘ ಸಂಸ್ಥೆಗಳಲ್ಲಿಯೂ ಪದಾಧಿಕಾರಿಗಳ ಆಯ್ಕೆಗೆ ಚುನಾವಣೆ ನಡೆಯುವುದನ್ನು ನಾವು ಕಾಣಬಹುದಾಗಿದೆ.

ಭಾರತದಲ್ಲಿ ಸ್ವಾತಂತ್ರ್ಯ ಬಂದ ನಂತರ ಚುನಾವಣೆ ಪ್ರಕ್ರಿಯೆ ಆರಂಭವಾಯಿತು. 1951ರಲ್ಲಿ ಲೋಕಸಭೆಗೆ ಮೊದಲ ಚುನಾವಣೆ ನಡೆಯಿತು. ಆ ನಂತರ ಕೆಲ ಸಂದರ್ಭಗಳನ್ನು ಹೊರತುಪಡಿಸಿ ಪ್ರತಿ ಐದು ವರ್ಷಕ್ಕೊಮ್ಮೆ ಲೋಕಸಭೆ ಹಾಗೂ ವಿಧಾನಸಭೆಗೆ ಚುನಾವಣೆ ನಡೆಯುತ್ತಿದೆ. ಒಂದು ಲೋಕಸಭಾ ಕ್ಷೇತ್ರ ಎಂಟು ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿರುತ್ತದೆ. ಈಗ ಹದಿನೇಳನೇ ಲೋಕಸಭೆಗೆ ಚುನಾವಣೆ ನಡೆಯುತ್ತಿದೆ.

**ಆಯೋಗ:**

ಚುನಾವಣೆ ನಡೆಸುವುದಕ್ಕೆ ನಮ್ಮ ಸಂವಿಧಾನದಲ್ಲಿ ಚುನಾವಣಾ ಆಯೋಗವನ್ನು ರಚನೆ ಮಾಡಲಾಗಿದೆ.

**ಪರಶೀಸುತ**

ಮತದಾರರ ಪಟ್ಟಿ ಸಿದ್ಧಪಡಿಸುವುದರಿಂದ ಹಿಡಿದು, ಚುನಾವಣೆ ನಡೆಸಿ ಗೆದ್ದವರನ್ನು ಘೋಷಣೆ ಮಾಡುವ ತನಕ ಆಯೋಗ ತನ್ನ ಜವಾಬ್ದಾರಿ ನಿರ್ವಹಿಸುತ್ತ ಬರುತ್ತಿದೆ.

ಕಾಲಕಾಲಕ್ಕೆ ಚುನಾವಣಾ ಸುಧಾರಣೆಗಳನ್ನು ಚುನಾವಣಾ ಆಯೋಗ ಮಾಡಿಕೊಂಡು ಬರುತ್ತಿದೆ. ಮೊದಲೆಲ್ಲ ಮತಪತ್ರವನ್ನು ಮುದ್ರಿಸಿ ಚುನಾವಣೆ ನಡೆಸಲಾಗುತ್ತಿತ್ತು. ಆದರೆ ಈಗ ವಿದ್ಯುನ್ಮಾನ ಮತಯಂತ್ರಗಳು ಜಾರಿಗೆ ಬಂದಿವೆ. ಅದೇ ರೀತಿಯಲ್ಲಿ ಕಾನೂನು ಬಿಗಿಗೊಂಡಿದೆ. ಚುನಾವಣೆಯಲ್ಲಿ ನಡೆಯುವ ಅಕ್ರಮಗಳನ್ನು



ತಡೆಯಲು ಕಾನೂನು ರೂಪುಗೊಂಡಿವೆ. ಅಭ್ಯರ್ಥಿಗಳಿಗೂ ವೆಚ್ಚದ ಮಿತಿ ಹಾಕಲಾಗಿದೆ. ಈ ಬಾರಿ ಲೋಕಸಭಾ ಚುನಾವಣೆಗೆ 70 ಲಕ್ಷ ರೂ. ನಿಗದಿ ಮಾಡಲಾಗಿದೆ. ಮಿತಿಮೀರಿ ವೆಚ್ಚ ಮಾಡುವವರ ವಿರುದ್ಧ ಕ್ರಮಕ್ಕೂ ಕಾನೂನಿನಲ್ಲಿ ಅವಕಾಶವಿದೆ. ಆಯೋಗ ಚಾಪೆ ಕೆಳಗೆ ನುಸುಳಿದರೆ, ಅಭ್ಯರ್ಥಿಗಳು ರಂಗೋಲಿ ಕೆಳಗೆ ನುಸುಳುತ್ತಿದ್ದಾರೆ. ಆದರೂ ಒಂದಷ್ಟು ಜನರನ್ನು ಹಿಡಿಯಲಾಗುತ್ತದೆ. ಆದರೆ ಶಿಕ್ಷೆಯ ಪ್ರಮಾಣ ಕಡಿಮೆ. ಮತದಾನದ ದಿನ ಸಮೀಕ್ಷೆಗಳಿಗೆ ಬ್ರೇಕ್ ಹಾಕುವ ವ್ಯವಸ್ಥೆ ಸಹ ಈಗ ಬಂದಿದೆ.

ಚುನಾವಣಾ ವ್ಯವಸ್ಥೆಯನ್ನು ಸುಧಾರಿಸುವುದೆಂದರೆ, ಅದು ಕ್ರಮಬದ್ಧ ಚುನಾವಣೆ ವ್ಯವಸ್ಥೆ ಎಲ್ಲಿ ಇಲ್ಲವೋ ಮತ್ತು ಪ್ರಚಲಿತ ಚುನಾವಣೆ ಎಲ್ಲಿ ಸುಧಾರಿಸಬೇಕೋ ಅಂಥ ಕಡೆಗಳಲ್ಲಿ ಕ್ರಮಬದ್ಧ ಚುನಾವಣಾ ವ್ಯವಸ್ಥೆಯನ್ನು ಅಳವಡಿಸುವುದು. ಸೆಫಾಲಜಿ ಅಂದರೆ ಚುನಾವಣಾ ಫಲಿತಾಂಶಗಳನ್ನು ಮತ್ತು ಅದಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಅಧ್ಯಯನ ಮಾಡುವುದು. ವರ್ಷ ಪೂರ್ತಿ ಒಂದಲ್ಲ ಒಂದು ಚುನಾವಣೆಯನ್ನು ಆಯೋಗ ನಡೆಸುತ್ತಿರುತ್ತದೆ.

ಸ್ವಾತಂತ್ರ್ಯ ಬಂದಾಗಿನಿಂದಲೂ, ಭಾರತದಲ್ಲಿನ ಚುನಾವಣೆಗಳು ಬೆಳವಣಿಗೆಯನ್ನು ದಾಖಲಿಸಿವೆ. ಮತದಾರರ ಸಂಖ್ಯೆಯೂ ಜನಸಂಖ್ಯೆ ಬೆಳೆದಂತೆ ಹೆಚ್ಚಾಗುತ್ತ ಬರುತ್ತಿದೆ. ಈಗ ಮತದಾರರ ಸಂಖ್ಯೆ 90 ಕೋಟಿ ದಾಟಿದೆ. ಅದಕ್ಕೆ ತಕ್ಕಂತೆ ಮತಗಟ್ಟೆ ಹಾಗೂ ಇತರೆ ವ್ಯವಸ್ಥೆಗಳು ಜಾಸ್ತಿಯಾಗುತ್ತಿವೆ.

**ಹಂತಗಳು:**

2004ರ ಸಾರ್ವತ್ರಿಕ ಚುನಾವಣೆಗಳಲ್ಲಿ ನಾಲ್ಕು ಹಂತಗಳಿದ್ದರೆ, 2009ರಲ್ಲಿ ಐದು ಹಂತಗಳಿದ್ದವು. ರಾಜಕೀಯ ಪಕ್ಷಗಳಿಗೆ ಸಂಬಂಧಿಸಿದ 'ಮಾದರಿ ನೀತಿಸಂಹಿತೆ'ಯನ್ನು ಜಾರಿಗೆ ತರುವ ಭಾರತದ ಚುನಾವಣಾ ಆಯೋಗದಿಂದ ಚುನಾವಣೆ ದಿನಾಂಕಗಳು ಪ್ರಕಟಣೆಯಾಗುವುದರಿಂದ ಮೊದಲ್ಗೊಂಡು, ಫಲಿತಾಂಶಗಳ ಪ್ರಕಟಣೆ, ಯಶಸ್ವಿ ಉಮೇದುವಾರರ ಪಟ್ಟಿಯನ್ನು ರಾಜ್ಯ ಅಥವಾ ಕೇಂದ್ರದ ಕಾರ್ಯಕಾರಿ ಮುಖ್ಯಸ್ಥರಿಗೆ ಸಲ್ಲಿಸುವುದರವರೆಗಿನ ಹಲವಾರು ಹಂತದ ಪ್ರಕ್ರಿಯೆಗಳನ್ನು ಇದು ಒಳಗೊಂಡಿರುತ್ತದೆ. 2019ರ ಲೋಕಸಭಾ ಚುನಾವಣೆಯಲ್ಲಿ ಏಳು ಹಂತಗಳಿವೆ. ಬಿಹಾರ, ಉತ್ತರ ಪ್ರದೇಶ ಹಾಗೂ ಪಶ್ಚಿಮ ಬಂಗಾಳದಲ್ಲಿ ಏಳು ಹಂತಗಳಲ್ಲಿ ಚುನಾವಣೆಗಳನ್ನು ನಡೆಸಲಾಗುತ್ತದೆ. ಕರ್ನಾಟಕದಲ್ಲಿ ಎರಡು ಹಂತದಲ್ಲಿ ನಡೆಸಲು ಚುನಾವಣಾ ಆಯೋಗ ಮುಂದಾಗಿದೆ.

**ಎಷ್ಟು ಸದಸ್ಯರು:**

ಜನಪ್ರತಿನಿಧಿಗಳ ಸದನವಾಗಿರುವ ಲೋಕಸಭೆ 545 ಸದಸ್ಯರನ್ನು ಹೊಂದಿದ್ದು, ಅವರಲ್ಲಿ 543 ಸದಸ್ಯರು ಜನರಿಂದ ಆಯ್ಕೆಯಾಗುತ್ತಾರೆ. ಆಂಗ್ಲ-ಭಾರತೀಯ ಸಮುದಾಯವನ್ನು ಪ್ರತಿನಿಧಿಸಲೆಂದು ಇಬ್ಬರು ಸದಸ್ಯರು ನೇಮಿಸಲ್ಪಡುತ್ತಾರೆ.

ರಾಜ್ಯಗಳ ಮಂಡಳಿ ಎಂದು ಕರೆಯುವ ರಾಜ್ಯಸಭೆಯು 245 ಸದಸ್ಯರನ್ನು ಹೊಂದಿದ್ದು, ಅವರ ಪೈಕಿ 233 ಸದಸ್ಯರು ಆರು-ವರ್ಷಗಳ ಒಂದು ಅವಧಿಗೆ ಚುನಾಯಿಸಲ್ಪಡುತ್ತಾರೆ ಹಾಗೂ ಪ್ರತಿ ಎರಡು ವರ್ಷಗಳಿಗೆ ಮೂರನೇ ಒಂದು ಭಾಗದಷ್ಟು ಮಂದಿ ನಿವೃತ್ತಿಹೊಂದುತ್ತಾರೆ.

**ಲೋಕಸಭೆಯ ಅಸ್ತಿತ್ವ**

ಭಾರತದ ಮೊದಲ ಲೋಕಸಭೆಯು 1952ರ ಏಪ್ರಿಲ್‌ನಲ್ಲಿ ಅಸ್ತಿತ್ವಕ್ಕೆ ಬಂದಿತು. ಇದಕ್ಕೆ ಪೂರ್ವಭಾವಿಯಾಗಿ ಮೊದಲ ಸಾರ್ವತ್ರಿಕ ಚುನಾವಣೆಗಳು ಯಶಸ್ವಿಯಾಗಿ 1951ರಲ್ಲಿ ನಡೆಯಿತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವು ತನ್ನ ತೆಕ್ಕೆಯಲ್ಲಿ 245 ಸ್ಥಾನಗಳನ್ನು ತುಂಬಿಸಿಕೊಳ್ಳುವುದರೊಂದಿಗೆ ಅಧಿಕಾರಕ್ಕೆ ಬಂದಿತು.

**ಚುನಾವಣಾ ವೆಚ್ಚ**



ಚುನಾವಣಾ ಆಯೋಗವು ಅಭ್ಯರ್ಥಿ ಖರ್ಚು ಮಾಡಲು ನಿಗದಿ ಮಾಡುವ ವೆಚ್ಚ ಬೇರೆಯಾದರೆ, ಚುನಾವಣೆ ನಡೆಸಲು ಆಯಾ ರಾಜ್ಯ ಸರ್ಕಾರಗಳು ಮಾಡುವ ವೆಚ್ಚ ಪ್ರತ್ಯೇಕವಾಗಿರುತ್ತದೆ. ಈ ಬಾರಿಯ ಚುನಾವಣೆಗೆ ಕರ್ನಾಟಕದಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 1.25 ಕೋಟಿ ರೂ.ಗಳ ಅಗತ್ಯ ಬೀಳಬಹುದೆಂದು ಅಂದಾಜು ಮಾಡಲಾಗಿದೆ. ಅಂದರೆ ಪ್ರತಿ ಲೋಕಸಭಾ ಕ್ಷೇತ್ರಕ್ಕೆ 10 ಕೋಟಿ ರೂ.ಗಳಂತೆ 280 ಕೋಟಿ ರೂ.ಗಳು ಕರ್ನಾಟಕದಲ್ಲಿಯೇ ಅಗತ್ಯವಿದೆ.

**ಕರ್ನಾಟಕದಲ್ಲಿ ಚುನಾವಣೆ:**

ಇದುವರೆವಿಗೂ ಚುನಾವಣಾ ವ್ಯವಸ್ಥೆಯ ಸ್ಥೂಲ ನೋಟ ನೋಡಿದ್ದೇವೆ. ಕರ್ನಾಟಕದಲ್ಲಿ ಚುನಾವಣೆಗೆ ತನ್ನದೇ ಆದ ಸ್ಥಾನವಿದೆ. ದೇಶಕ್ಕೆ ಉಪ ರಾಷ್ಟ್ರಪತಿ ಹಾಗೂ ಪ್ರಧಾನಿಯನ್ನು ಕೊಟ್ಟ ರಾಜ್ಯವಿದು. ಲೋಕಸಭೆಗೆ ಸಭಾಧ್ಯಕ್ಷರು ಹಾಗೂ ಉಪಸಭಾಧ್ಯಕ್ಷರನ್ನು ನೀಡಿದೆ. ರಾಜ್ಯದವರೇ ಆದ ಎಚ್.ಡಿ. ದೇವೇಗೌಡ ಪ್ರಧಾನಿಯಾದರೆ, ಉತ್ತರ ಪ್ರದೇಶದಲ್ಲಿ ಸೋತಿದ್ದ ಇಂದಿರಾಗಾಂಧಿ ರಾಜ್ಯದಿಂದ ಉಪ ಚುನಾವಣೆ ಎದುರಿಸಿ ಗೆಲುವು ಸಾಧಿಸಿದ್ದರು ಎಂಬುದು ವಿಶೇಷ. ಬಿ.ಡಿ. ಜತ್ತಿ ಉಪರಾಷ್ಟ್ರಪತಿ ಆಗಿದ್ದವರು. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ ಸುರಕ್ಷಿತ ಕ್ಷೇತ್ರ ಹುಡುಕಿ ಬಳ್ಳಾರಿಯಲ್ಲಿ ನಿಂತರೆ, ಅವರ ವಿರುದ್ಧ ಬಿಜೆಪಿಯ ಸುಷ್ಮಾ ಸ್ವರಾಜ್ ಸ್ಪರ್ಧಿಸಿ ಪೈಪೋಟಿ ನೀಡಿದ್ದರು. ಬೀದರ್‌ನಲ್ಲಿ ರಾಮಚಂದ್ರ ವೀರಪ್ಪ, ಚಿಕ್ಕೋಡಿಯಲ್ಲಿ ಶಂಕರಾನಂದ, ಬೆಂಗಳೂರು ಉತ್ತರದಲ್ಲಿ ಜಾಫರ್ ಷರೀಫ್ ಅವರಂತಹ ಅನೇಕರು ಏಳೆಂಟು ಬಾರಿ ಗೆದ್ದಿರುವ ಉದಾಹರಣೆಗಳು ರಾಜ್ಯದಲ್ಲಿವೆ.

1951ರಲ್ಲಿ ಮೊದಲ ಬಾರಿಗೆ ಚುನಾವಣೆ ನಡೆಯಿತು. ರಾಜ್ಯದಲ್ಲಿ ಈಗ 28 ಲೋಕಸಭಾ ಕ್ಷೇತ್ರಗಳಿದ್ದರೆ, ಮೊದಲ ಚುನಾವಣೆಯಾದಗ ಇದ್ದ ಕ್ಷೇತ್ರಗಳ ಸಂಖ್ಯೆ 11. ಕಲಬುರಗಿ, ರಾಯಚೂರು ಆಂಧ್ರಪ್ರದೇಶಕ್ಕೆ ಸೇರಿದ್ದರೆ, ಬಳ್ಳಾರಿ, ಮಂಗಳೂರು, ಉಡುಪಿ ಮದ್ರಾಸ್ ಸರ್ಕಾರದ ವ್ಯಾಪ್ತಿಯಲ್ಲಿದ್ದವು. ಕಾರವಾರ, ವಿಜಯಪುರ, ಬಾಗಲಕೋಟೆ, ಬೆಳಗಾವಿ, ಚಿಕ್ಕೋಡಿ ಬಾಂಬೆ ಸರ್ಕಾರದ ವ್ಯಾಪ್ತಿಯಲ್ಲಿದ್ದವು. ಎರಡನೇ ಚುನಾವಣೆಯ ವೇಳೆಗೆ ಅವು ಮೈಸೂರು ಸರ್ಕಾರಕ್ಕೆ ಸೇರಿದವು. 1977ರಿಂದ ಕರ್ನಾಟಕವಾಯಿತು. ಎರಡನೇ ಚುನಾವಣೆಯ ವೇಳೆಗೆ ಲೋಕಸಭಾ ಕ್ಷೇತ್ರಗಳ ಸಂಖ್ಯೆ 26ಕ್ಕೆ, 1967ರ ಚುನಾವಣೆಯ ವೇಳೆಗೆ 27ಕ್ಕೆ ಹಾಗೂ 1977ಕ್ಕೆ 28ಕ್ಕೆ ಏರಿಕೆಯಾಯಿತು.

1951ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ 10 ಸ್ಥಾನ, ಕೆಎಂಪಿಪಿ ಪಕ್ಷ 1 ಸ್ಥಾನ ಗೆದ್ದಿದ್ದವು. 1956ರಲ್ಲಿ ಕಾಂಗ್ರೆಸ್ 23, ಪಿಎಸ್‌ಪಿ, ಎಸ್‌ಸಿಎಫ್ ಹಾಗೂ ಸ್ವತಂತ್ರ ಅಭ್ಯರ್ಥಿ ತಲಾ ಒಂದು ಸ್ಥಾನ ಗೆದ್ದಿದ್ದರು. 1962ರಲ್ಲಿ 26 ಕ್ಷೇತ್ರಗಳ ಪೈಕಿ ಕಾಂಗ್ರೆಸ್ 25 ಹಾಗೂ ಎಲ್‌ಎಸ್‌ಎಸ್ ಒಂದು ಕ್ಷೇತ್ರ ಗೆದ್ದಿದ್ದವು. 1967ರಲ್ಲಿ ಕಾಂಗ್ರೆಸ್ 18, ಸ್ವತಂತ್ರ ಪಕ್ಷ 5, ಪಿಎಸ್‌ಪಿ, ಪಕ್ಷೇತರ ಹಾಗೂ ಎಸ್‌ಎಸ್‌ಪಿ ತಲಾ ಒಂದು ಕ್ಷೇತ್ರ ಗೆದ್ದಿದ್ದರು. 1971ರಲ್ಲಿ 27ಕ್ಕೆ 27 ಕಾಂಗ್ರೆಸ್ ಗೆದ್ದಿತ್ತು. 1977ರಲ್ಲಿ ರಾಜ್ಯದ ಲೋಕಸಭಾ ಕ್ಷೇತ್ರಗಳ ಸಂಖ್ಯೆ 28ಕ್ಕೆ ಏರಿಕೆಯಾಯಿತು. ಆಗ ಕಾಂಗ್ರೆಸ್ 26 ಹಾಗೂ ಜನತಾಪಕ್ಷ 2 ಸ್ಥಾನ ಗೆದ್ದಿತು. 1980ರಲ್ಲಿ ಕಾಂಗ್ರೆಸ್ 26, ಜನತಾಪಕ್ಷ 1, 1984ರಲ್ಲಿ ಕಾಂಗ್ರೆಸ್ 24, ಜನತಾಪಕ್ಷ 4, 1989ರಲ್ಲಿ ಕಾಂಗ್ರೆಸ್ 26, ಜನತಪಕ್ಷ 2, 1991ರಲ್ಲಿ ಕಾಂಗ್ರೆಸ್ 23, ಬಿಜೆಪಿ 4, ಜನತಾ 1, 1996ರಲ್ಲಿ ಜನತಾದಳ 16, ಬಿಜೆಪಿ 6, ಕಾಂಗ್ರೆಸ್ 5, ಕೆಜೆಪಿ 1, 1998ರಲ್ಲಿ ಬಿಜೆಪಿ 13, ಲೋಕಶಕ್ತಿ 3, ಕಾಂಗ್ರೆಸ್ 9, ಜನತಾದಳ 3, 1999ರಲ್ಲಿ ಕಾಂಗ್ರೆಸ್ 18, ಬಿಜೆಪಿ 7, ಜೆಡಿಯು 3, 2004ರಲ್ಲಿ ಬಿಜೆಪಿ 18, ಕಾಂಗ್ರೆಸ್ 8, ಜೆಡಿಎಸ್ 2, 2009ರಲ್ಲಿ ಬಿಜೆಪಿ 19, ಕಾಂಗ್ರೆಸ್ 6, ಜೆಡಿಎಸ್ 3, 2014ರಲ್ಲಿ ಬಿಜೆಪಿ 17, ಕಾಂಗ್ರೆಸ್ 9, ಜೆಡಿಎಸ್ 2 ಸ್ಥಾನ ಗೆದ್ದಿತು. ಆ ನಂತರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಸಂಖ್ಯೆ 10ಕ್ಕೆ ಏರಿಕೆಯಾಯಿತು.

**ಪ್ರಾದೇಶಿಕ ಪಕ್ಷಗಳು:**

ರಾಜ್ಯದಲ್ಲಿ ಅನೇಕ ಪ್ರಾದೇಶಿಕ ಪಕ್ಷಗಳು ಹುಟ್ಟಿ ಅಷ್ಟೇ ವೇಗವಾಗಿ ಸತ್ತು ಹೋಗಿರುವ ಇತಿಹಾಸವೂ ಇವೆ. ಕೆಂಗಲ್ ಹನುಮಂತಯ್ಯ ಅವರಿಂದ ಹಿಡಿದು ದೇವರಾಜ ಅರಸು, ಬಂಗಾರಪ್ಪ, ಯಡಿಯೂರಪ್ಪ ಸೇರಿದಂತೆ ಅನೇಕ ಮುಖಂಡರು ಪ್ರಾದೇಶಿಕ ಪಕ್ಷ ಹುಟ್ಟು ಹಾಕಿದ್ದರು. ಆದರೆ ಯಾವುದೇ ಪ್ರಾದೇಶಿಕ ಪಕ್ಷ ನೆರೆ ರಾಜ್ಯಗಳ ರೀತಿಯಲ್ಲಿ ಕರ್ನಾಟಕದಲ್ಲಿ ಯಶಸ್ಸು ಕಂಡಿಲ್ಲ.

**ಕರ್ನಾಟಕದಲ್ಲಿಯೇ ಶಾಯಿ:**

ಮತದಾನದಲ್ಲಿ ನಕಲಿಯಾಗುವುದನ್ನು ತಡೆಗಟ್ಟಲು ಶಾಯಿಯನ್ನು ಮೈಸೂರಿನಲ್ಲಿರುವ ಬಣ್ಣ ಮತ್ತು ಅರಗು ಕಾರ್ಖಾನೆಯಲ್ಲಿ ತಯಾರಿಸಲಾಗುತ್ತದೆ. ಕೇವಲ ನಮ್ಮ ದೇಶದಲ್ಲಿ ಮಾತ್ರವಲ್ಲದೇ ವಿದೇಶಗಳಿಗೂ ಇಲ್ಲಿಂದ ಸರಬರಾಜು ಮಾಡಲಾಗುತ್ತದೆ. ರಾಜ್ಯದ ಚುನಾವಣಾ ಸುಧಾರಣಾ ವ್ಯವಸ್ಥೆಯಲ್ಲಿ ಮೈಸೂರಿನ ಈ ಶಾಯಿಯ ಪಾತ್ರ ಅತ್ಯಂತ ಮಹತ್ವದ್ದೆನಿಸಿದೆ. ಲಕ್ಷಾಂತರ ಬಾಟಲಿಗಳನ್ನು ಸಾರ್ವತ್ರಿಕ ಚುನಾವಣೆಗೆ ಬಳಸಲಾಗುತ್ತದೆ.

**ರಾಜ್ಯದಲ್ಲಿ 54 ಸಾವಿರ ಬೂತ್:**

ರಾಜ್ಯದಲ್ಲಿ ಚುನಾವಣೆಯನ್ನು ಸುಗಮವಾಗಿ ನಡೆಸುವ ಸಲುವಾಗಿ 54 ಸಾವಿರಕ್ಕೂ ಅಧಿಕ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಪ್ರತಿ ಮತಗಟ್ಟೆಗೆ ನಾಲ್ಕು ಜನ ಸಿಬ್ಬಂದಿ ಇರುತ್ತಾರೆ. ವಿದ್ಯುನ್ಮಾನ ಮತಯಂತ್ರ ಹಾಗೂ ಇತರೆ ವ್ಯವಸ್ಥೆ ಇರುತ್ತದೆ. ಜಿಲ್ಲಾ ಚುನಾವಣಾಧಿಕಾರಿಯಾಗುವ ಜಿಲ್ಲಾಧಿಕಾರಿಯಿಂದ ಹಿಡಿದು ಪ್ರತಿಯೊಬ್ಬರಿಗೂ ತರಬೇತಿ ನೀಡಲಾಗುತ್ತದೆ. ಆದ್ದರಿಂದಲೇ ಚುನಾವಣಾ ಪ್ರಕ್ರಿಯೆ ತುಂಬಾ ದೊಡ್ಡದಿರುತ್ತದೆ.

ಪ್ರಜಾಪ್ರಭುತ್ವ ಯಶಸ್ವಿಯಾಗಬೇಕೆಂದರೆ ಎಲ್ಲರೂ ಕಡ್ಡಾಯವಾಗಿ ಮತದಾನದಲ್ಲಿ ಭಾಗವಹಿಸಬೇಕು. ಕಡ್ಡಾಯ ಮತದಾನದ ಕಾನೂನು ರೂಪುಗೊಂಡಿಲ್ಲ. ಆದರೆ ಯಾವುದೇ ಅಭ್ಯರ್ಥಿಗೆ ಇಷ್ಟವಿಲ್ಲದಿದ್ದರೂ ನೋಟಾಕ್ಕಾದರೂ ಮತ ಹಾಕಬಹುದಾಗಿದೆ. ಮತದನ ಪ್ರತಿಯೊಬ್ಬರ ಕರ್ತವ್ಯವಾಗಬೇಕಾಗಿದೆ.



downloaded from: www.kpscvaani.com




# ಪಾರದರ್ಶಕ ಚುನಾವಣೆ ಹಾಗೂ ನಿಷ್ಪಕ್ಷಪಾತ ಮಾಧ್ಯಮ

ಡಾ. ಪದ್ಮರಾಜ ದಂಡಾವತಿ

**ಮ**ತ್ತೆ ಭಾರತವು ಚುನಾವಣೆಯ ಹೊಸ್ತಿಲಲ್ಲಿ ನಿಂತಿದೆ. ಇದು 17ನೇ ಲೋಕಸಭೆಗೆ ನಡೆಯುವ ಚುನಾವಣೆ. ಚುನಾವಣೆಎನ್ನುವುದು ಪ್ರಜಾಪ್ರಭುತ್ವದ ಜೀವ. ಜೀವ ಏಕೆ ಎಂದರೆ ಚುನಾವಣೆಯ ಮೂಲಕವೇ ಜನರು ತಮ್ಮ ಜನಪ್ರತಿನಿಧಿಯನ್ನು ಆರಿಸುತ್ತಾರೆ. ಆ ಜನಪ್ರತಿನಿಧಿಗಳು ತಾವು ಆಯ್ಕೆಯಾದ ಐದಾರು ವರ್ಷಗಳ ಅವಧಿಯಲ್ಲಿ ಜನರ ಕ್ಷೇಮಾಭ್ಯುದಯದ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸುತ್ತಾರೆ. ಅನೇಕ ಸಾರಿ ಸರ್ಕಾರಗಳು ಜನರ ನಿರೀಕ್ಷೆಗೆ ತಕ್ಕಂತೆ ನಡೆದುಕೊಳ್ಳುತ್ತವೆ. ಕೆಲವು ಸಾರಿ ಈ ನಿರೀಕ್ಷೆಯಲ್ಲಿ ಸೋಲುತ್ತವೆ. ಮತ್ತೆ ಚುನಾವಣೆ ಬರುತ್ತದೆ. ಮತ್ತೆ ಜನರ ಮುಂದೆ ಆಯ್ಕೆ ತೆರೆದುಕೊಳ್ಳುತ್ತದೆ. ಒಂದು ಪಕ್ಷ ಹೋಗಿ ಮತ್ತೊಂದು ಪಕ್ಷದ ಸರ್ಕಾರ ಬರುತ್ತದೆ. ಅಥವಾ ಒಂದು ಪಕ್ಷ ಚೆನ್ನಾಗಿ ಕೆಲಸ ಮಾಡಿದ್ದರೆ ಅದೇ ಮರಳಿ ಅಧಿಕಾರಕ್ಕೆ ಬರುತ್ತದೆ. ಆದರೆ, ಯಾರನ್ನು ಅಧಿಕಾರದ ಗದ್ದುಗೆಯಲ್ಲಿ ಕೂರಿಸಬೇಕು ಎಂಬುದನ್ನು ಜನರು ತೀರ್ಮಾನ ಮಾಡುತ್ತಾರೆ. ಈ ಅರ್ಥದಲ್ಲಿ ಮತದಾರನೇ ನಿಜವಾದ ಪ್ರಭು.

ಚುನಾವಣೆ ಎಂದರೆ ಆಯ್ಕೆ. ಆಯ್ಕೆ ಮಾಡಲು ಜನರು ಮತ ಚಲಾಯಿಸುತ್ತಾರೆ. ಮತ ಎನ್ನುವುದಕ್ಕೆ ವೋಟು ಎನ್ನುವ ಅರ್ಥ ಇರುವ ಹಾಗೆಯೇ ಅಭಿಪ್ರಾಯ ಎನ್ನುವ ಅರ್ಥವೂ ಇದೆ. ಅಂದರೆ ಜನರು ಚುನಾವಣೆಯಲ್ಲಿ ವೋಟು ಚಲಾಯಿಸುವ ಮೂಲಕ ಒಂದು ಪಕ್ಷದ ಬಗೆಗೆ, ಒಬ್ಬ ಅಭ್ಯರ್ಥಿಯ ಬಗೆಗೆ ತಮ್ಮ ಅಭಿಪ್ರಾಯವನ್ನೂ ವ್ಯಕ್ತಪಡಿಸುತ್ತಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯ ವಿಶೇಷ ಎಂದರೆ ಇಲ್ಲಿ ಗುಡಿಸಲುವಾಸಿಗೂ ಒಂದು ಮತ ಇದೆ, ಮಹಲಿನವಾಸಿಗೂ ಒಂದು ಮತ ಇದೆ. ಇದನ್ನೇ ಇನ್ನೊಂದು ರೀತಿ ಹೇಳಬಹುದು. ಗುಡಿಸಲಿನಲ್ಲಿ ವಾಸವಾಗಿರುವ ವ್ಯಕ್ತಿಗೂ ಒಂದೇ ಮತ. ಮಹಲಿನಲ್ಲಿ ವಾಸವಾಗಿರುವ ಶ್ರೀಮಂತನಿಗೂ ಒಂದೇ ಮತ ಇದೆ. ಆದಕ್ಕಾಗಿಯೇ ಮತದಾನ ಎನ್ನುವುದು ಒಂದು ಪವಿತ್ರವಾದ ಕ್ರಿಯೆ ಎಂದು ಹೇಳುವುದು.

ಚುನಾವಣೆ ಬಂತು ಎಂದರೆ ನಮ್ಮ ಬಳಿ ಇರುವ ಆ ಒಂದು ಮತಕ್ಕಾಗಿ ಹಲವಾರು ಮುಗಿ ಬೀಳುತ್ತಾರೆ. ಮತದಾರ ಪ್ರಭುವಿನ ಮನೆಯ ಬಾಗಿಲಿಗೆ ಬರುತ್ತಾರೆ. ಅವನ ಅಥವಾ ಅವಳ ಮನದ ಬಾಗಿಲು ತಟ್ಟುತ್ತಾರೆ. ಹಲವು ಆಮಿಷಗಳನ್ನು ಅವರ ಮುಂದೆ ಒಡ್ಡುತ್ತಾರೆ. ಇದರಲ್ಲಿ ಎರಡು ಬಗೆಯ ಆಮಿಷಗಳು ಇವೆ. ಒಂದು, ಚುನಾವಣೆಯ ಸಮಯದಲ್ಲಿ ಕೊಡುವ ಹಣ, ವಸ್ತುಗಳ ರೂಪದ ಆಮಿಷ. ಇನ್ನೊಂದು, ತಮ್ಮನ್ನು ಆರಿಸಿ ಕಳಿಸಿದರೆ ಮುಂದಿನ ಐದು ವರ್ಷಗಳಲ್ಲಿ ತಾವು ಏನು ಮಾಡುತ್ತೇವೆ ಎಂದು ಪ್ರಣಾಳಿಕೆಯ ಮೂಲಕ ಕೊಡುವ ಆಮಿಷ.

ಮುಂದಿನ ಐದು ವರ್ಷಗಳಲ್ಲಿ ತಮಗೆ ಅಧಿಕಾರ ನಡೆಸಲು ಅವಕಾಶ ಕೊಟ್ಟರೆ ತಾವು ಮತದಾರರಿಗೆ ಏನೆಲ್ಲ ಕೊಡುತ್ತೇವೆ, ಅದು ಕೇವಲ ಅಭಿವೃದ್ಧಿ ಅಥವಾ ಜನ ಕಲ್ಯಾಣ ಕಾರ್ಯಕ್ರಮಗಳು ಮಾತ್ರವಲ್ಲ, ಟೀವಿ, ಫ್ರಿಡ್ಜು, ಲ್ಯಾಪ್‌ಟಾಪು ಹೀಗೆ ಹಲವು ವಸ್ತುಗಳನ್ನು ಕೊಡುತ್ತೇವೆ ಎಂದು ಭರವಸೆ ಕೊಟ್ಟುದನ್ನೂ ನಾವು ಕಂಡಿದ್ದೇವೆ. ಇದನ್ನು ಪ್ರಣಾಳಿಕೆ ಮೂಲಕ ಕೊಟ್ಟ ಭರವಸೆಗಳಲ್ಲಿ ಸೇರಿಸಿದ್ದನ್ನೂ ನಾವು ನೋಡಿದ್ದೇವೆ.

ಮಾಧ್ಯಮದ ಪಾತ್ರ ಬರುವುದು ಇಲ್ಲಿ. ಪ್ರಜಾಪ್ರಭುತ್ವದಲ್ಲಿ ಮಾಧ್ಯಮದ ಪಾತ್ರ ಬಹಳ ದೊಡ್ಡದು. ಜನರು ತಮ್ಮ ಮತದಾನದ ಹಕ್ಕನ್ನು ಚಲಾಯಿಸುವಾಗ ಯಾವುದೇ ಆಮಿಷಕ್ಕೆ ಒಳಗಾಗದೇ ಅದನ್ನು ಚಲಾಯಿಸಬೇಕು. ಹಾಗೂ ಸಂಪೂರ್ಣ ತಿಳುವಳಿಕೆಯಿಂದ ಅವರು ಮತ ಚಲಾಯಿಸಬೇಕು. ಜನರಲ್ಲಿ ಈ ತಿಳುವಳಿಕೆಯನ್ನು ತುಂಬ ಬೇಕಾದುದು ಮಾಧ್ಯಮದ ಕೆಲಸ.

ಮತದಾರ ಹಾಗೂ ಅಭ್ಯರ್ಥಿಯ ನಡುವಣ ಸಂಬಂಧ ಕೇವಲ ಚುನಾವಣೆಯ ದಿನಕ್ಕೆ ಮಾತ್ರ ಸಂಬಂಧಿಸಿದ್ದು ಅಲ್ಲ. ಅದು ಶುದ್ಧ ಪ್ರಜಾಸತ್ತಾತ್ಮಕ ನಿರ್ಣಯವಾಗಿದ್ದರೆ ನಿರಂತರವಾದ ಸಂಬಂಧ. ಆಮಿಷ ಆಧಾರಿತವಾದ ನಿರ್ಣಯವಾದರೆ ಮತದಾನದಿನಕ್ಕೆ ಮಾತ್ರ ಸೀಮಿತವಾದ ಸಂಬಂಧ.

ಮಾಧ್ಯಮಗಳ ಕೆಲಸವೇನು ಎಂದರೆ ಜನರು ಮತದಾನದಲ್ಲಿ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸುವಂತೆ ಮಾಡುವುದು. ಹಾಗೂ ಅರ್ಥ ಪೂರ್ಣವಾಗಿ ಭಾಗವಹಿಸುವಂತೆ ಮಾಡುವುದು. ಅವರಲ್ಲಿ ಮತದಾನದ ಬಗೆಗೆ ಜಾಗೃತಿ ಮೂಡಿಸಲು ಏನೆಲ್ಲ ಸಾಧ್ಯವೋ ಅದನ್ನು ಮಾಡುವುದು. ಮತದಾನ ಪ್ರಕ್ರಿಯೆಯಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಚುನಾವಣಾ ಆಯೋಗವು ಅನೇಕ ಕ್ರಮಗಳನ್ನು ತೆಗೆದುಕೊಳ್ಳುತ್ತ ಇರುತ್ತದೆ. 2018 ರ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಕರ್ನಾಟಕದ ಮುಖ್ಯ ಚುನಾವಣೆ ಅಧಿಕಾರಿಗಳು ಶಾಂತ ಹಾಗೂ ಸಮರ್ಥ ರೀತಿಯಲ್ಲಿ, ಜನರು ಯಾವುದೇ ಭಯ ಅಥವಾ ಭೀತಿಯಿಲ್ಲದೇ ಮತದಾನ ಪ್ರಕ್ರಿಯೆಯಲ್ಲಿ ಪಾಲುಗೊಳ್ಳುವಂತೆ ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದರು.

ಸಾಮಾನ್ಯ ನಾಗರಿಕರು ಮಾತ್ರವಲ್ಲದೇ ಅಂಗವಿಕಲರು, ದೃಷ್ಟಿ ದೋಷವುಳ್ಳವರು, ಶ್ರವಣದೋಷವುಳ್ಳವರು ಕೂಡ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ರಾಜ್ಯ ಚುನಾವಣಾ ಅಧಿಕಾರಿಗಳು ಕ್ರಮ ತೆಗೆದುಕೊಂಡಿದ್ದರು. ಆದಕ್ಕಾಗಿ ಅತ್ಯುತ್ತಮವಾಗಿ ಚುನಾವಣೆ ನಡೆಸಿದ ರಾಜ್ಯ ಎಂದು ಅದಕ್ಕೆ ಪ್ರಶಸ್ತಿಯೂ ಬಂತು. ಈ ಪ್ರಶಸ್ತಿಯನ್ನು ಕಳೆದ ಜನವರಿ 25 ರಂದು ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿಗಳು ದೆಹಲಿಗೆ ಹೋಗಿ ಸ್ವೀಕರಿಸಿದ್ದರು. ಚುನಾವಣಾ ಆಯೋಗ ಕೈಗೊಂಡ ಇಂಥ ಕ್ರಮಗಳನ್ನು ಜನರಿಗೆ ತಲುಪಿಸುವುದು ಮಾಧ್ಯಮಗಳ ಕೆಲಸ. ಆ ಮೂಲಕ ಜನರು ಮತಗಟ್ಟೆಗಳಿಗೆ ಬರಲು ಸಾಧ್ಯವಾಗುತ್ತದೆ. 2018 ರ ವಿಧಾನಸಭೆ ಚುನಾವಣೆಯಲ್ಲಿ ಶೇಕಡ 72 ರಷ್ಟು ಮತದಾನವಾಗಿತ್ತು. ಅದು ಇದುವರೆಗಿನ ಅತಿ ಹೆಚ್ಚು ಮತದಾನ ಎಂಬುದನ್ನು ಇಲ್ಲಿ ಗಮನಿಸಬೇಕು.

ಮಾಧ್ಯಮಗಳು ಪ್ರಜಾಪ್ರಭುತ್ವವನ್ನು ಕಾವಲು ಕಾಯುವ ಸಂಸ್ಥೆಗಳು. ಅವು ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವಂಥ ಸಂಸ್ಥೆಗಳು ಕೂಡ ಆಗಿವೆ. ರಾಜಕೀಯ ಪಕ್ಷಗಳ ಬಗೆಗೆ, ಅವುಗಳ ನಾಯಕರ ಬಗೆಗೆ ಮಾಧ್ಯಮಗಳು ಉದ್ದಕ್ಕೂ ಅಭಿಪ್ರಾಯ ರೂಪಿಸುತ್ತಲೇ ಇರುತ್ತವೆ. ಚುನಾವಣೆಯ ಕಣದಲ್ಲಿ ಇರುವ ಪಕ್ಷಗಳ ಹಾಗೂ ಅಭ್ಯರ್ಥಿಗಳ ಬಗೆಗೆ ಮಾಹಿತಿ ಕೊಡುವುದು ಹಾಗೂ ಕಣದಲ್ಲಿ ಇರುವವರಲ್ಲಿ ಯಾರು ಹಿತವರು ಎಂದು ಹೇಳಬೇಕಾದುದು ಮಾಧ್ಯಮಗಳ ಕೆಲಸ. ಅಭ್ಯರ್ಥಿಗಳು ತಮ್ಮ ನಾಮಪತ್ರ ಸಲ್ಲಿಸಿ ಅವುಗಳ ಪರಿಶೀಲನೆ ಮುಗಿದು ಕಣದಲ್ಲಿ ಯಾರೆಲ್ಲ ಇದ್ದಾರೆ ಎಂದು ಚುನಾವಣಾ ಅಧಿಕಾರಿಗಳು ನಿರ್ಣಯಿಸಿ ಪ್ರಕಟಿಸುತ್ತಿದ್ದಂತೆಯೇ ಆ ಅಭ್ಯರ್ಥಿಯ ಹಿನ್ನೆಲೆ, ಶೈಕ್ಷಣಿಕ ಮಟ್ಟ, ಅವರ ಆಸ್ತಿ ಇತ್ಯಾದಿ ಮಾಹಿತಿಗಳೆಲ್ಲ ಲಭ್ಯವಾಗುತ್ತವೆ. ಅವುಗಳನ್ನು ಪ್ರಕಟಿಸುವ ಮೂಲಕವೇ ಮಾಧ್ಯಮಗಳು ಜನರಿಗೆ ಕಣದಲ್ಲಿ ಯಾರೆಲ್ಲ ಇದ್ದಾರೆ ಅವರ ಹಿನ್ನೆಲೆಯೇನು ಎಂಬ ಮಾಹಿತಿಯನ್ನು ಕೊಡುತ್ತವೆ.

ಚುನಾವಣೆ ನಡೆಯುವ ಅವಧಿಯಲ್ಲಿ ಮಾಧ್ಯಮಗಳಿಗೆ ಒಂದು ರೀತಿ ಸುದ್ದಿಗಳ ಸುಗ್ಗಿಯಕಾಲ. ಚುನಾವಣೆಯ ಕಾಲವೇ ಹಾಗಿರುತ್ತದೆ. ಪರಸ್ಪರ ಎದುರಾಳಿಗಳ ರಕ್ತದ ಒತ್ತಡ ಆಕಾಶಕ್ಕೆ ಏರಿರುತ್ತದೆ. ಪ್ರಚಾರದ ಭರಾಟೆಯ ಧೂಳು ಗಗನಕ್ಕೆ ಮುಟ್ಟಿರುತ್ತದೆ, ಇದರ ನಡುವೆ, ಮತದಾರರಿಗೆ ರಾಜಕೀಯ ಪಕ್ಷಗಳು  ಒಡ್ಡುವ ಆಮಿಷಗಳಿಗೂ ಮಿತಿ ಎನ್ನುವುದು ಇರುವುದಿಲ್ಲ. ವರ್ಷಗಳು ಕಳೆದಂತೆ ಇದರ ಪ್ರಮಾಣ ಹೆಚ್ಚಾಗುತ್ತಿದೆಯೇ ಹೊರತು ಕಡಿಮೆಯಾಗುತ್ತಿಲ್ಲ. 2018 ರ ವಿಧಾನಸಭೆ ಚುನಾವಣೆ ಸಮಯದಲ್ಲಿ ರಾಜ್ಯ ಚುನಾವಣಾ ಆಯೋಗವು ಹಾಗೂ ವಿವಿಧ ಇಲಾಖೆಗಳು ವಶಪಡಿಸಿಕೊಂಡ ನಗದು ಹಣ ನೂರು ಕೋಟಿ ರೂಪಾಯಿಗಳಿಗೂ ಮೀರುವಷ್ಟು ಇತ್ತು. ಸುಮಾರು 40 ಕೋಟಿ ರೂಪಾಯಿ ಮೊತ್ತದ ಮದ್ಯದ ಬಾಟಲುಗಳನ್ನೂ ಆಯೋಗದ ಅಧಿಕಾರಿಗಳು ವಶಪಡಿಸಿಕೊಂಡಿದ್ದರು. 2013 ರ ವಿಧಾನಸಭೆ ಚುನಾವಣೆಗೆ ಹೋಲಿಸಿದರೆ ಈ ಪ್ರಮಾಣವೂ ಅಗಾಧವಾಗಿ ಹೆಚ್ಚಿದೆ ಎಂಬುದನ್ನು ಗಮನಿಸಿದರೆ ಚುನಾವಣಾ ವ್ಯವಸ್ಥೆಯಲ್ಲಿ ಹಣದ ಆಟಾಟೋಪ ಎಷ್ಟು ಹೆಚ್ಚಿದೆ ಎಂಬುದು ತಿಳಿಯುತ್ತದೆ. ಇದು ಲೋಕಸಭೆ ಚುನಾವಣೆಗೂ ಅನ್ವಯಿಸುವ ಮಾತು. ಇದೆಲ್ಲದರ ನಡುವೆ ಅಥವಾ ಇಂಥ ಎಲ್ಲವನ್ನೂ ಮೀರಿ ಜನರು ವಿವೇಕವನ್ನು ಕಳೆದುಕೊಳ್ಳದೇ, ಯಾರ ಕೈಗೋ ತಮ್ಮ ಅಭಿಪ್ರಾಯವನ್ನು, ಆತ್ಮಸಾಕ್ಷಿಯನ್ನು ಒತ್ತೆ ಇಡದೇ ಮತಚಲಾಯಿಸುವಂತೆ ಮಾಡುವುದು ಮಾಧ್ಯಮಗಳ ಕೆಲಸ.






downloaded from: www.kpscvaani.com



**ಎಲ್ಲ ರಾಜಕೀಯ ವ್ಯವಸ್ಥೆಗಳಲ್ಲಿ ಜನರು ನಿರ್ಭಯವಾಗಿ, ಯಾವುದೇ ಆಸೆ ಆಮಿಷಗಳಿಗೆ ಬಲಿಯಾಗದೇ ಪಾಲುಗೊಳ್ಳಬೇಕು ಎಂದು ಬಯಸುವ ಹಾಗೆಯೇ ಜನರಲ್ಲಿ ಅಂಥ ಮನೋಭಾವ ತುಂಬುವ ಕೆಲಸವನ್ನು ಮಾಧ್ಯಮಗಳೂ ಪ್ರಾಮಾಣಿಕವಾಗಿ ಮಾಡಬೇಕಾಗಿದೆ.**

ಈ ಕೆಲಸವನ್ನು ಮಾಧ್ಯಮಗಳು ಬಹಳ ಶ್ರದ್ಧೆ ಹಾಗೂ ನಿಯತ್ತಿನಿಂದಲೇ ಮಾಡುತ್ತವೆ. ಅದರಲ್ಲಿಯೂ ಮತದಾನದ ಹಕ್ಕನ್ನು ಚಲಾಯಿಸುವಂತೆ ಮಾಡಲು ಮಾಧ್ಯಮಗಳು ಚುನಾವಣೆ ಪ್ರಕ್ರಿಯೆ ನಡೆಯುವಷ್ಟು ಕಾಲ ಪ್ರತಿದಿನ ಗಣ್ಯರ, ಜನರ ಮನಸ್ಸಿನ ಮೇಲೆ ಪ್ರಭಾವ ಬೀರುವಂಥ ವ್ಯಕ್ತಿಗಳಿಂದ ಮತದಾನದ ಮಹತ್ವ ತಿಳಿಸುವ ಹೇಳಿಕೆ ಪ್ರಕಟಿಸುತ್ತವೆ. ದೃಶ್ಯಮಾಧ್ಯಮಗಳೂ ಇದೇ ಕೆಲಸ ಮಾಡುತ್ತವೆ.

ಇಷ್ಟೆಲ್ಲ ಮಾಡಿದ ಮೇಲೂ ಗ್ರಾಮೀಣ ಜನರು ಹೆಚ್ಚಿನ ಪ್ರಮಾಣದಲ್ಲಿ ಮತಗಟ್ಟೆಗಳಿಗೆ ಬರುತ್ತಿದ್ದರೆ ಹಾಗೂ ಅವರ ಮತದಾನದ ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದರೆ ನಗರದ ಮತದಾರರ ಮತದಾನ ಪ್ರಮಾಣ ಕಡಿಮೆಯಾಗುತ್ತಲೇ ನಡೆದಿದೆ. ಚುನಾವಣೆ ಸಮಯದಲ್ಲಿ ಸಾಲು ರಜೆಗಳು ಬಂದರಂತೂ ಅವರು ತಮ್ಮ ಕೆಲಸಕ್ಕೂ ರಜೆ ಹಾಕಿ ಹೊರಟು ಬಿಡುತ್ತಾರೆಯೇ ಹೊರತು ಮತಗಟ್ಟೆಗಳಿಗೆ ಬಂದು ಸಾಲಿನಲ್ಲಿ ನಿಂತು ತಮ್ಮ ಮತವನ್ನು ಚಲಾಯಿಸುವುದಿಲ್ಲ. ಪತ್ರಿಕೆಗಳನ್ನು ಓದುವವರೂ, ಸಾಕ್ಷರರೂ ಆದ ನಗರದ ಜನರು ಚುನಾವಣೆ ಪ್ರಕ್ರಿಯೆಯಲ್ಲಿ ಪಾಲುಗೊಳ್ಳುವಂತೆ ಮಾಡುವಲ್ಲಿ ಮಾಧ್ಯಮಗಳು ಅಂಥ ಸಾಫಲ್ಯ ಕಂಡಿಲ್ಲ ಎಂದೇ ಅನಿಸುತ್ತದೆ. ಇದು ಮಾಧ್ಯಮಗಳ ವೈಫಲ್ಯವೇ ಅಥವಾ ಪ್ರಜಾಪ್ರಭುತ್ವದ ಪ್ರಕ್ರಿಯೆಯಲ್ಲಿ ಜನರಿಗೆ ಇರುವ ನಿರಾಸಕ್ತಿಯೇ ಎಂದು ಹೇಳುವುದು ಕಷ್ಟ. ಕಲಿತವರಲ್ಲಿ ಇರುವ ನಿರಾಸಕ್ತಿಗೆ ಹೊಲಬುಗೆಟ್ಟಿರುವ, ನಿರಾಶಾದಾಯಕ ಎನಿಸುವ ರಾಜಕೀಯ ವಾತಾವರಣವೂ ಕಾರಣವಾಗಿರಬಹುದು.

ಮಾಧ್ಯಮಗಳ ಇನ್ನೊಂದು ಸಮಸ್ಯೆ ಎಂದರೆ ಅಲ್ಲಿ ಚಾಲ್ತಿಯಲ್ಲಿ ಇರುವ ಕಾಸಿಗಾಗಿ ಸುದ್ದಿಯ ಹಾವಳಿ. ಪತ್ರಿಕೆಗಳು ಹಾಗೂ ಸುದ್ದಿವಾಹಿನಿಗಳು ರಾಜಕೀಯ ಪಕ್ಷಗಳಿಂದ ಹಾಗೂ ಅಭ್ಯರ್ಥಿಗಳಿಂದ ಹಣಪಡೆದು ಅವರ ಪರವಾಗಿ ಇಂದ್ರಚಂದ್ರ ಎಂದು ಹೊಗಳುವಿಕೆಗಳ ಸುದ್ದಿ ಪ್ರಕಟಿಸುವ ಮೂಲಕ ಪ್ರಜಾಪ್ರಭುತ್ವದ ಮೂಲ ಆಶಯಗಳಿಗೆ ಧಕ್ಕೆ ತರುತ್ತಿವೆ. ಹಾಗೂ ತಮಗೆ ಸಂವಿಧಾನದಲ್ಲಿ ಲಭ್ಯವಾದ ವಾಕ್ ಸ್ವಾತಂತ್ರ್ಯಕ್ಕೆ ಅಪಚಾರ ಮಾಡುತ್ತಿವೆ. ಕಾಸಿಗಾಗಿ ಸುದ್ದಿ ಪ್ರಕಟಿಸುವ, ಪ್ರಸಾರ ಮಾಡುವ ಮಾಧ್ಯಮಗಳ ವಿರುದ್ಧ ಚುನಾವಣಾ ಆಯೋಗ ಹದ್ದಿನ ಕಣ್ಣಿಟ್ಟಿದ್ದು, ಅಂತಹ ಮಾಧ್ಯಮಗಳ ವಿರುದ್ಧ ಕ್ರಮ ಜರುಗಿಸಲಿದೆ.

ರಾಜಕೀಯ ಕ್ಷೇತ್ರದಲ್ಲಿನ ಭ್ರಷ್ಟಾಚಾರಕ್ಕೂ ಚುನಾವಣೆಗೂ ನೇರ ಸಂಬಂಧವಿದೆ. ಚುನಾವಣೆಯಿಂದ ಚುನಾವಣೆಗೆ, ವರ್ಷದಿಂದ ವರ್ಷಕ್ಕೆ ಅಭ್ಯರ್ಥಿಗಳ ಚುನಾವಣೆ ವೆಚ್ಚ ಏರುತ್ತಲೇ ಇದೆ. ಹಾಗೆ ನೋಡಿದರೆ ಚುನಾವಣೆ ಆಯೋಗ ಪ್ರತಿ ಅಭ್ಯರ್ಥಿಗೆ ನಿಗದಿ ಮಾಡಿರುವ ಚುನಾವಣಾ ವೆಚ್ಚಕ್ಕೂ ಅವರು ವಾಸ್ತವದಲ್ಲಿ ಖರ್ಚು ಮಾಡುವ ಹಣಕ್ಕೂ ಯಾವುದೇ ಸಂಬಂಧವಿಲ್ಲ ಎಂಬುದು ರಹಸ್ಯವಾದ ಸಂಗತಿಯೇನಲ್ಲ. ಕನಿಷ್ಠ ಅರ್ಹತೆಗಳು ಯಾರು ಬೇಕಾದರೂ ಚುನಾವಣೆಗೆ ನಿಲ್ಲಬಹುದು. ಆದರೆ, ಈಗ ಹಣವಿದ್ದವರು, ತೋಳ್ಬಲ ಇದ್ದವರು ಮಾತ್ರ ಚುನಾವಣೆಗೆ ಸ್ಪರ್ಧಿಸಬಹುದು ಎನ್ನುವಂತೆ ಆಗಿದೆ. ಹಣವಿದ್ದವರು, ಬಲಿಷ್ಠರು ತಮ್ಮ ಸಂಪತ್ತಿನ ಬಲದಿಂದ ಚುನಾವಣೆ ಗೆಲ್ಲುತ್ತಿದ್ದಾರೆ. ಅವರ ಪರವಾಗಿ, ಅವರಿಂದ ಹಣ ಪಡೆದು, ಸುದ್ದಿ ಪ್ರಕಟಿಸುವ ಮೂಲಕ ಮಾಧ್ಯಮಗಳೂ ಈ ಭ್ರಷ್ಟ ವರ್ತುಲದ ಪಾಲುದಾರರಾಗುತ್ತಿವೆ. ಇದು ಅಕ್ಷಮ್ಯ. ಚುನಾವಣಾ ಆಯೋಗವು ಚುನಾವಣೆ ಸಂದರ್ಭದಲ್ಲಿ ಮಾಧ್ಯಮ ಪ್ರತಿನಿಧಿಗಳು ಹೇಗೆ ಮತದಾರರಲ್ಲಿ ಜಾಗೃತಿ ಮೂಡಿಸಬೇಕು, ಹಾಗೂ ಚುನಾವಣೆ ಸಮಯದಲ್ಲಿ ಮಾಧ್ಯಮಗಳು ಪಾಲಿಸಬೇಕಾದ ವಿಷಯಗಳ ಕುರಿತು ಮಾಧ್ಯಮ ಪ್ರತಿನಿಧಿಗಳಿಗಾಗಿ ಕಾರ್ಯಾಗಾರವನ್ನು ಏರ್ಪಡಿಸಿ ಮಾಧ್ಯಮದವರಿಗೂ ಅವರ ಜವಾಬ್ದಾರಿಯ ಬಗ್ಗೆ ತಿಳುವಳಿಕೆಯನ್ನು ಮೂಡಿಸುತ್ತದೆ.

ಯಾವ ರಾಜಕೀಯ ವ್ಯವಸ್ಥೆಯೂ ಪರಿಪೂರ್ಣವಾದುದು ಅಲ್ಲ ಎಂಬುದು ನಿಜ. ಆದರೆ, ಎಲ್ಲ ರಾಜಕೀಯ ವ್ಯವಸ್ಥೆಗಳಲ್ಲಿ ಜನರು ನಿರ್ಭಯವಾಗಿ, ಯಾವುದೇ ಆಸೆ ಆಮಿಷಗಳಿಗೆ ಬಲಿಯಾಗದೇ ಪಾಲುಗೊಳ್ಳಬೇಕು ಎಂದು ಬಯಸುವ ಹಾಗೆಯೇ ಜನರಲ್ಲಿ ಅಂಥ ಮನೋಭಾವ ತುಂಬುವ ಕೆಲಸವನ್ನು ಮಾಧ್ಯಮಗಳೂ ಪ್ರಾಮಾಣಿಕವಾಗಿ ಮಾಡಬೇಕಾಗಿದೆ. ಆಗ ಜನರ ನಿರೀಕ್ಷೆಯ ಮಟ್ಟದ ಸರ್ಕಾರಗಳು ಅಧಿಕಾರಕ್ಕೆ ಬರಲು ಸಾಧ್ಯ. ಪ್ರಜಾಪ್ರಭುತ್ವ ಅರ್ಥಪೂರ್ಣವಾಗುವುದು ಆಗ. ಈ ಸಾರಿಯೂ ಹಾಗೆಯೇ ಅರ್ಥಪೂರ್ಣವಾಗಿ ಚುನಾವಣೆ ನಡೆಯುವಂತೆ ಮಾಧ್ಯಮಗಳು ಶ್ರಮಿಸ ಬೇಕಾಗಿದೆ. ತಮ್ಮ ಪಾಲಿನ ಕರ್ತವ್ಯವನ್ನು ನಿರ್ವಹಿಸಬೇಕಾಗಿದೆ. ■



downloaded from: www.kpscvaani.com


# AllToPoll




ಇಲ್ಲಿ ಎಲ್ಲರೂ ಸಮಾನರು
ಎಲ್ಲರ ಮತವೂ ಅಮೂಲ್ಯ

ಲೋಕಸಭಾ ಚುನಾವಣೆ – 2019

ಗುರುವಾರ, ೧೮ ಮತ್ತು ಮಂಗಳವಾರ ೨೩ ಏಪ್ರಿಲ್ ೨೦೧೯ | ಬೆಳಗ್ಗೆ 7 ರಿಂದ ಸಂಜೆ 6 ಗಂಟೆವರೆಗೆ

CALL TOLL FREE 1950

ceokarnataka

"ಯಾವುದೇ ಮತದಾರ
ಮತದಾನದಿಂದ ಹೊರಗುಳಿಯಬಾರದು"

ಮುಖ್ಯ ಚುನಾವಣಾಧಿಕಾರಿ, ಕರ್ನಾಟಕ
ಶೇಷಾದ್ರಿ ರಸ್ತೆ, ಬೆಂಗಳೂರು – 560 001
www.ceokarnataka.kar.nic.in



# ಮತದಾನ ಮತ್ತು ಮತದಾರನ ಪ್ರಾಮುಖ್ಯತೆ

ಮಂಜುನಾಥ್

ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳೇ ನಡೆಸುವ ಸರ್ಕಾರವನ್ನು ಪ್ರಜಾಪ್ರಭುತ್ವ ಅನ್ನುತ್ತೇವೆ. ಈ ಪ್ರಜಾಪ್ರಭುತ್ವ ಯಶಸ್ಸಿನ ಹಿಂದಿರುವ ಸೂತ್ರವೇ ಮತದಾನ. ಈ ಮತದಾನ ಅನ್ನುವುದು ದೊಡ್ಡ ಪ್ರಕ್ರಿಯೆ. ಇಡೀ ದೇಶಕ್ಕೆ ದೇಶವೇ ಇದರಲ್ಲಿ ಭಾಗವಹಿಸುತ್ತೆ, ಒಂದು ರೀತಿ ಪ್ರಜಾಪ್ರಭುತ್ವದಲ್ಲಿ ಹಬ್ಬದಂತೆ ಆಚರಿಸಲಾಗುತ್ತೆ.

ಲೋಕಸಭೆಗೆ ಚುನಾವಣೆ ಘೋಷಣೆಯಾದ ಬಳಿಕ ಮತದಾನ ಮತ್ತು ಮತದಾರ. ಎಂಬ ಈ ಎರಡು ಪದಗಳು ಬಹುವಾಗಿ ಕೇಳಿ ಬರುತ್ತಿವೆ. ಈ ಪದಗಳಿಗೆ ಅರ್ಥ ಹೇಳುವ ಹಾಗು ಆಚರಣೆಯಲ್ಲಿ ಭಾಗಿಯಾಗಬೇಕಾಗಿರುವ ಸಮಯವೂ ಕೂಡ ಈಗ ಬಂದಿದೆ.

ಇಡೀ ದೇಶಕ್ಕೆ ದೇಶವೇ ಈಗ ಚುನಾವಣಾ ಹೊಸ್ತಿಲಲ್ಲಿ ನಿಂತಿದೆ. ಇದರಲ್ಲಿ ಕರ್ನಾಟಕ ರಾಜ್ಯದಲ್ಲಿ 5.03 ಕೋಟಿ ಮತದಾರರು ತಮ್ಮ ತೀರ್ಪು ಬರೆಯೋ ಕಾಲ ಸನ್ನಿಹಿತವಾಗಿದೆ. ಎರಡು ಹಂತಗಳಲ್ಲಿ ನಡೆಯುವ ಮತದಾನದಲ್ಲಿ ತೀರ್ಪು ಬರೆಯೋಕೆ ಕರ್ನಾಟಕದ ಮತದಾರರು ಕೂಡ ಸಜ್ಜಾಗಿ ನಿಂತಿದ್ದಾರೆ.

ಮತದಾನ ಅಂದರೆ ಪ್ರಜಾಪ್ರಭುತ್ವದಲ್ಲಿ ಪ್ರಜೆಗೆ ಇರುವ ಪರಮಾಧಿಕಾರ. ಡೆಮಾಕ್ರಸಿಯ ಯಶಸ್ಸು ಅಡಗಿರೋದು ಕೂಡ ಇಲ್ಲೇ. ಮತದಾನ ಅನ್ನೋ ಒಂದೇ ಒಂದು ಪ್ರಕ್ರಿಯೆ ಇಡೀ ದೇಶದ ರಾಜಕೀಯ ಚರಿತ್ರೆಯನ್ನು ಬರೆಯುತ್ತದೆ. ಪ್ರಜಾಪ್ರಭುತ್ವದಲ್ಲಿ (ಡೆಮೋಸ್ ಅಂದ್ರೆ ಜನತೆ, ಕ್ರಟೋಸ್ ಅಂದ್ರೆ ಅಧಿಕಾರ) ಪ್ರಜೆಗಳೇ ಸಾರ್ವಭೌಮರು ಅನ್ನುವುದನ್ನು ಸಾರಿ ಸಾರಿ ಹೇಳುವುದೇ ಈ ಮತದಾನ.

**ಈ ಬಾರಿಯ ವಿಶೇಷಗಳು :**

- ಚುನಾವಣೆಗೆ ಸಂಬಂಧಪಟ್ಟ ಎಲ್ಲಾ ಮಾಹಿತಿ, ಸಲಹೆ, ದೂರುಗಳನ್ನು ನೀಡುವ ಸಲುವಾಗಿ 1950 ಟೋಲ್ ಫ್ರೀ ವೋಟರ್ ಸಹಾಯವಾಣಿಯನ್ನು ಪ್ರಾರಂಭಿಸಲಾಗಿದೆ. ಇದು ದೇಶದ ಎಲ್ಲಾ ರಾಜ್ಯಗಳು, ಜಿಲ್ಲೆಗಳಲ್ಲಿ ಸಕ್ರಿಯವಾಗಿರುತ್ತೆ.
- ಇದೇ ಪ್ರಥಮ ಬಾರಿಗೆ ಕ್ರಿಮಿನಲ್ ಹಿನ್ನೆಲೆಯುಳ್ಳ ಅಭ್ಯರ್ಥಿಗಳು ತಮ್ಮ ಕ್ರಿಮಿನಲ್ ಪ್ರಕರಣಗಳ ಬಗ್ಗೆ ಮಾಧ್ಯಮಗಳಲ್ಲಿ ಮೂರು ಜಾಹೀರಾತು ನೀಡಬೇಕು. ಆ ಪಕ್ಷವೂ ಕೂಡ ಕ್ರಿಮಿನಲ್ ಅಭ್ಯರ್ಥಿಗಳ ಬಗ್ಗೆ ಘೋಷಣೆ ಮಾಡಬೇಕು.
- ಮತದಾನಕ್ಕೆ ಮತದಾನದ ಗುರುತಿನ ಚೀಟಿ ಕಡ್ಡಾಯವಿರುವುದಿಲ್ಲ. ಅದರ ಬದಲಾಗಿ 11 ದಾಖಲೆಗಳನ್ನು ಪರ್ಯಾಯ ಗುರುತಿನ ದಾಖಲಾತಿಗಳಾಗಿ ಬಳಸಬಹುದು.
- ಮತಯಂತ್ರಗಳ ಸುರಕ್ಷತೆಯ ದೃಷ್ಟಿಯಿಂದ ಜಿಪಿಎಸ್ ಅಳವಡಿಕೆ ಮಾಡಿರುವ ವಾಹನಗಳನ್ನೇ ಮತಯಂತ್ರ ಸಾಗಾಣೆ ಮಾಡಲು ಬಳಸಲಾಗುವುದು.

ರಾಷ್ಟ್ರ ನಿರ್ಮಾಣದಲ್ಲಿ ಇಂಥ ಮತದಾನದ ಪಾತ್ರ ಏನು? ಮಹತ್ವವಾದ್ರೂ ಏನು? ಅನ್ನೋ ವಿಚಾರಕ್ಕೆ ಇಲ್ಲೊಂದು ಸಣ್ಣ ಟಿಪ್ಪಣಿ ಇದೆ ನೋಡಿ. ಮತದಾನ ಅನ್ನೋದು ಸಂವಿಧಾನ ಬದ್ಧ ಹಕ್ಕು. 18 ವರ್ಷ ತುಂಬಿದ ಭಾರತದ ಪ್ರತಿಯೊಬ್ಬ ಪ್ರಜೆಯೂ ಕೂಡ ಈ ಮತದಾನದ ಪ್ರಕ್ರಿಯೆಯಲ್ಲಿ ಪಾಲ್ಗೊಳಬಹುದಾಗಿದೆ. ಚುನಾವಣೆ ಒಂದು ಮೂರ್ತ ಸ್ವರೂಪದಲ್ಲಿರುವ ಕಲ್ಪನೆಗೆ ಜೀವ ತುಂಬುವುದೇ ಈ ಮತದಾರರ ಕೆಲಸ. ಹಾಗಾಗಿ ಇಡೀ ಪ್ರಕ್ರಿಯೆಯನ್ನು ಮತದಾನ ಎನ್ನಲಾಗುತ್ತದೆ.

ಮತದಾನ ಅಥವಾ ಚುನಾವಣೆ ಅನ್ನೋ ಪ್ರಕ್ರಿಯೆಯಲ್ಲಿ ಮತದಾರ ಭಾಗವಹಿಸಿ, ತಮ್ಮ ದೇಶ ಅಥವಾ ರಾಜ್ಯದ ರಾಜಕೀಯ ವ್ಯವಸ್ಥೆಯ ಹಣೆಬರಹ ಬರೆಯುತ್ತಾನೆ. ಪ್ರತಿ ಐದು ವರ್ಷಗಳಿಗೊಮ್ಮೆ ನಡೆಯುವ ಈ ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದರೆ, ದೇಶದ ಆಡಳಿತ ವಿಧಾನ ಸುಭದ್ರವಾಗಿರುತ್ತದೆ ಅನ್ನುವುದು ಸಂವಿಧಾನದ ಆಶಯ. ಅಲ್ಲದೇ, ಮತದಾರ ತನಗೆ ಇಷ್ಟ ಬಂದ ಅಭ್ಯರ್ಥಿಗೆ ಮತ ನೀಡುವ ಸದಾವಕಾಶ ಇದಾಗಿದೆ.

ಭಾರತದ ರಾಜಕಾರಣದ ಸಾರ್ವಭೌಮತ್ವದ ಮೂಲ ಇರುವುದು ಜನತೆಯಲ್ಲಿ. ಗಣತಂತ್ರ ರಾಷ್ಟ್ರವಾದ ಭಾರತ, ತನ್ನ ಅಧಿಕಾರಗಳನ್ನು ಪಡೆಯುವುದು ಜನ ಸಮುದಾಯದಿಂದ. ಹಾಗಾಗಿಯೇ ನಮ್ಮ ಸರ್ಕಾರ ಜನರಿಂದ, ಜನತೆಗಾಗಿ ರೂಪಗೊಳ್ಳುವ ಜನತೆಯ ಸರ್ಕಾರ. ಈ ಪ್ರಕ್ರಿಯೇ ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬರುವಂತೆ ಮಾಡುವುದೇ ಮತದಾನ.

ಪ್ರಜಾಪ್ರಭುತ್ವದಲ್ಲಿ ನಾನಾ ಹಂತದಲ್ಲಿ, ವಿವಿಧ ಸ್ತರಗಳಲ್ಲಿ ಚುನಾವಣೆಗಳು ನಡೆಯುತ್ತವೆ. ಲೋಕಸಭೆ, ವಿಧಾನಸಭೆ, ಸ್ಥಳೀಯ ಸಂಸ್ಥೆಗಳ ತನಕ ನಡೆಯುವ ಚುನಾವಣೆಗಳಲ್ಲಿ ಪ್ರಜೆಗಳು ನೇರವಾಗಿ ಭಾಗವಹಿಸಿ, ಮತ ಚಲಾಯಿಸುತ್ತಾರೆ.

ದೇಶದ ಭವಿಷ್ಯ ಅಡಗಿರುವುದೇ ಮತದಾರರನ ಕೈ ಮುಷ್ಠಿಯಲ್ಲಿ, ಅದರಲ್ಲೂ ಯುವಶಕ್ತಿಯಲ್ಲಿ ಅಡಗಿದೆ. ದೇಶ ಕಟ್ಟುವ, ಮುಂದಿನ ಪೀಳಿಗೆಗೆ ಕನಸುಗಳನ್ನು ಸಕಾರಗೊಳಿಸುವ, ದೂರದೃಷ್ಟಿಯ ಹಿನ್ನೆಲೆಯಲ್ಲಿ 18 ವರ್ಷದ ಯುವಕ, ಯುವತಿಯರಿಗೆ ಮತದಾನ ಹಕ್ಕು ನೀಡಲಾಗಿದೆ.

1982ಕ್ಕೂ ಮೊದಲು 21 ವರ್ಷಕ್ಕೆ ಮತದಾನದ ಹಕ್ಕು ನೀಡಲಾಗಿತ್ತು. ಸಂವಿಧಾನಕ್ಕೆ ತಿದ್ದುಪಡಿ ತಂದು 21 ರಿಂದ 18ಕ್ಕೆ ಇಳಿಸಲಾಯಿತು. 18 ವರ್ಷಕ್ಕೆ ಇಳಿಕೆ ಮಾಡಿದ ಹಿನ್ನಲೆಯಲ್ಲಿ ದೇಶದ ಮತ್ತಷ್ಟು ಯುವ ಶಕ್ತಿ ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತಾಯಿತು. ಜಾತಿ, ಮತ, ವರ್ಗ, ಪಂಗಡ, ಅಕ್ಷರಸ್ಥ, ಅನಕ್ಷರಸ್ಥ, ಮಹಿಳೆ, ಪುರುಷ, ತೃತೀಯ ಲಿಂಗಿಗಳು ಹೀಗೆ ಎಲ್ಲವೂ ಮೀರಿ, ಬೇಧ-ಭಾವ ಇಲ್ಲದೆ ದೇಶದ ಜನರಿಗೆ ಸಂವಿಧಾನ ಈ ಹಕ್ಕು ನೀಡಿದೆ.

ಇದೇ ಮಾದರಿಯಲ್ಲಿ ಇಂಗ್ಲೆಂಡ್ 18 ವರ್ಷ, ಸ್ಕಾಟ್‌ಲ್ಯಾಂಡ್ ದೇಶವು 16 ವರ್ಷ, ಯುಎಸ್‌ಎ, ಇರಾನ್, ಸ್ವಿಜರ್‌ಲ್ಯಾಂಡ್, ಆಸ್ಟ್ರೇಲಿಯಾ, ಚೀನಾ, ಫ್ರಾನ್ಸ್, ಜರ್ಮನಿ, ಪಾಕಿಸ್ತಾನ ದೇಶಗಳು 18 ವರ್ಷದವರಿಗೆ ಮತದಾನದ ಹಕ್ಕನ್ನು ನೀಡಿದೆ.

ಈ ಬಾರಿಯ ಚುನಾವಣೆಯಲ್ಲಿ ನಮ್ಮ ರಾಜ್ಯದಲ್ಲಿ ಬರೋಬ್ಬರಿ 5.03 ಕೋಟಿ ಮಂದಿ ಮತದಾರರು ಭಾಗವಹಿಸಲಿದ್ದಾರೆ.



ಇದರಲ್ಲಿ 2.54 ಕೋಟಿ ಪುರುಷರು, 2.48 ಕೋಟಿ ಮಹಿಳೆಯರು ಹಾಗು 4,718 ಮಂದಿ ತೃತೀಯ ಲಿಂಗಿಗಳು ಇದ್ದಾರೆ. ಎಂಟು ಲಕ್ಷ ಮಂದಿ ಹೊಸ ಮತದಾರರು ಈ ಬಾರಿ ಸೇರ್ಪಡೆಯಾಗಿದ್ದಾರೆ. ಒಟ್ಟಾರೆ ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಬರೋಬ್ಬರಿ 11 ಕೋಟಿ ಮಂದಿ ಯುವಕ, ಯುವತಿಯರು ಪ್ರಥಮ ಬಾರಿಗೆ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಲಿದ್ದಾರೆ.

### ಮತದಾರರ ದಿನಾಚರಣೆ

ಮತದಾನ ಅಥವಾ ಮತಪತ್ರ ಅನ್ನೋದು ಬಂದೂಕಿನ ನಳಿಕೆಗಿಂತ ಶಕ್ತಿಶಾಲಿಯಾದದ್ದು ಅನ್ನೋ ಮಾತು ಪ್ರಚಲಿತದಲ್ಲಿದೆ. ಚುನಾವಣೆ ಅನ್ನೋದು ಜನತೆಯ ಪರಮಾಧಿಕಾರದ ಪರಿಕಲ್ಪನೆಯನ್ನು ಸಾಕಾರಗೊಳಿಸುತ್ತದೆ. ಸಂವಿಧಾನದ 15ನೇ ಭಾಗದಲ್ಲಿ 324ರಿಂದ 329ನೇ ವಿಧಿಯವರೆಗೂ ಚುನಾವಣೆ, ಮತದಾನದ ಬಗ್ಗೆ ವಿವರಣೆ ಇದೆ.

ಪ್ರಜೆಗಳ ಶಕ್ತಿಶಾಲಿ ಅಸ್ತ್ರವನ್ನು ಇನ್ನೂ ಹೆಚ್ಚಾಗಿ ಬಳಕೆ ಮಾಡಬೇಕು ಅನ್ನೋ ದೃಷ್ಟಿಯಿಂದ, ಮತದಾರರಲ್ಲಿ ಜಾಗೃತಿ ಅಥವಾ ಅರಿವು ಮೂಡಿಸುವ ಸಲುವಾಗಿಯೇ ಮತದಾರರ ದಿನಾಚರಣೆ ಎಂದೇ ಆಚರಿಸಲಾಗುತ್ತದೆ. ಅದರಲ್ಲೂ ದೇಶದ ರಾಜಕೀಯ ಪ್ರಕ್ರಿಯೆಯಲ್ಲಿ ಯುವ ಮತದಾರರನ್ನು ಸೆಳೆಯುವ ಅಥವಾ ಪರಿಣಾಮಕಾರಿಯಾಗಿ ಮತದಾನದಲ್ಲಿ ಭಾಗವಹಿಸಬೇಕು ಅನ್ನೋ ಉದ್ದೇಶದೊಂದಿಗೆ ಮತದಾರರ ದಿನಾಚರಣೆ ಆಚರಿಸಲು ಕೇಂದ್ರ ಚುನಾವಣಾ ಆಯೋಗ ನಿರ್ಧರಿಸಿತು. ಆದರಂತೆ ಪ್ರತಿವರ್ಷ ಗಣರಾಜ್ಯೋತ್ಸವದ ಹಿಂದಿನ ದಿನವಾದ ಜನವರಿ 25 ರಂದು ಮತದಾರರ ದಿನಾಚರಣೆಯಾಗಿ ಆಚರಣೆ ಮಾಡಲಾಗುತ್ತದೆ. 2011ರಲ್ಲಿ ಮತದಾರರ ದಿನಾಚರಣೆಗೆ ಅಧಿಕೃತವಾಗಿ ಚಾಲನೆ ನೀಡಲಾಯಿತು.

ಅಖಂಡ ಪ್ರಜಾ ಧ್ವನಿಯಾಗಿರುವ ಮತದಾನದ ವ್ಯವಸ್ಥೆಗೆ ಇದೀಗ 67 ರ ವಯಸ್ಸು, ಇದರ ಯಶಸ್ಸಿನಲ್ಲಿ ಎಲ್ಲ ಅರ್ಹ ಮತದಾರರು ಭಾಗವಹಿಸಿ, ಹಕ್ಕು ಚಲಾಯಿಸಿದಾಗ ಮಾತ್ರ ಒಂದು ಉತ್ತಮ ವ್ಯವಸ್ಥೆ ಮೂಡಿ ಬರಲು ಸಾಧ್ಯವಾಗುತ್ತೆ. ದೇಶ ಕಟ್ಟುವ ಇಂಥ ವ್ಯವಸ್ಥೆಯಲ್ಲಿ ಭಾಗವಹಿಸಿ ಒಳ್ಳೆಯ ಸಮಾಜ ನಿರ್ಮಾಣದಲ್ಲಿ ಭಾಗವಹಿಸುವುದು ನಮ್ಮೆಲ್ಲರ ಕರ್ತವ್ಯವಾಗಬೇಕಿದೆ.



downloaded from: www.kpscvaani.com

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಬೆಂಗಳೂರಿನ ಕಬ್ಬನ್ ಉದ್ಯಾನದ ಬ್ಯಾಂಡ್ ಸ್ಟ್ಯಾಂಡ್‌ನಲ್ಲಿ ಮಾರ್ಚ್ 17 ರಂದು ಮತದಾರರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಆಯೋಜಿಸಿದ್ದ ಮತದಾನದ ಮಹತ್ವ ಸಾರುವಂತಹ ರೇಖಾ ಚಿತ್ರ ಬಿಡಿಸುವ ಕಾರ್ಯಕ್ರಮದ ಛಾಯಾಚಿತ್ರಗಳು.















downloaded from: www.kpscvaani.com



# ಚುನಾವಣಾ ಆಯೋಗದ ಕರ್ತವ್ಯಗಳು

ಹರತೀಸುತ

ಚುನಾವಣೆ ಎಂಬ ಪದ ಹಿಂದಿಯ ಚುನಾವ್ ಎಂಬ ಪದದಿಂದ ಬಂದಿದೆ. ಚುನಾವ್ ಎಂದರೆ ಆಯ್ಕೆ ಮಾಡು ಎಂದರ್ಥ. ಯಾವುದೇ ಚುನಾವಣೆ ವ್ಯವಸ್ಥಿತವಾಗಿ ನಡೆಸುವುದಕ್ಕೆ ಇರುವ ವ್ಯವಸ್ಥೆಯೇ ಚುನಾವಣಾ ಆಯೋಗ. ರಾಷ್ಟ್ರ ಮಟ್ಟದಲ್ಲಿ ಭಾರತ ಚುನಾವಣಾ ಆಯೋಗ ಇದ್ದರೆ, ರಾಜ್ಯ ಮಟ್ಟದಲ್ಲಿ ರಾಜ್ಯ ಚುನಾವಣಾ ಆಯೋಗ ಇದೆ. ಎರಡು ಆಯೋಗಗಳ ಕರ್ತವ್ಯಗಳು ಒಂದೇ ರೀತಿಯಲ್ಲಿದ್ದರೂ ನಿರ್ವಹಿಸುವ ಜವಾಬ್ದಾರಿ ಮಾತ್ರ ಬೇರೆ ಬೇರೆ ಆಗಿರುತ್ತದೆ.

ಭಾರತ ಚುನಾವಣಾ ಆಯೋಗ ರಾಷ್ಟ್ರಪತಿ, ಉಪ ರಾಷ್ಟ್ರಪತಿ, ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್ ಚುನಾವಣೆಗಳನ್ನು ನಡೆಸುತ್ತದೆ. ರಾಜ್ಯ ಚುನಾವಣಾ ಆಯೋಗ ಸ್ಥಳೀಯ ಸಂಸ್ಥೆಗಳ ಅಂದರೆ ಮಹಾನಗರಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ, ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್‌ಗಳ ಚುನಾವಣೆ ನಡೆಸುವ ಹೊಣೆಗಾರಿಕೆ ಹೊಂದಿದೆ. ಚುನಾವಣೆ ನಡೆಸುವುದು ಬಿಟ್ಟರೆ ಆಯೋಗಗಳಿಗೆ ಬೇರೆ ಕೆಲಸವಿಲ್ಲವೆಂಬ ಭಾವನೆ ಬಲವಾಗಿ ಬೇರೂರಿದೆ. ಆದರೆ ಆ ಚುನಾವಣೆ ನಡೆಸುವ ವ್ಯವಸ್ಥೆಯೇ ಪ್ರಮುಖ ಹಾಗೂ ಬಹಳ ಜವಾಬ್ದಾರಿಯುತವಾದದ್ದು, ವರ್ಷಪೂರ್ತಿ ಚುನಾವಣೆಗೆ ಸಂಬಂಧಿಸಿದ ಒಂದಲ್ಲ ಒಂದು ಕೆಲಸ ಇದ್ದೇ ಇರುತ್ತದೆ. ಅನೇಕ ರಾಜಕೀಯ ಸಂದಿಗ್ಧದ ಸಂದರ್ಭದಲ್ಲಿ ಆಯೋಗ ರಾತ್ರಿಯೂ ಕಾರ್ಯ ನಿರ್ವಹಣೆ ಮಾಡಿರುವುದನ್ನು ಇತ್ತೀಚೆಗೆ ನೋಡಿದ್ದೇವೆ.

**ಭಾರತ ಚುನಾವಣಾ ಆಯೋಗ**

ಸಾಂವಿಧಾನಿಕ ಮಾನ್ಯತೆ ಇರುವ ಸ್ವಾಯತ್ತ ಸಂಸ್ಥೆ ಇದು. ಸಂವಿಧಾನದ 15ನೇ ಭಾಗದಲ್ಲಿ 324ನೇ ವಿಧಿಯಿಂದ 329ನೇ ವಿಧಿಯ ತನಕ ಚುನಾವಣಾ ಆಯೋಗದ ಮಹತ್ವ ಹಾಗೂ ಕರ್ತವ್ಯಗಳ ಬಗ್ಗೆ ತಿಳಿಸಲಾಗಿದೆ. ಚುನಾವಣಾ ಆಯೋಗವು 1950ರ ಜನವರಿ 25ರಂದು ಪ್ರಾರಂಭವಾಯಿತು. 1993ರ ತನಕ ಒಬ್ಬರೇ ಆಯುಕ್ತರಿದ್ದರು. ಪಿ.ವಿ. ನರಸಿಂಹರಾವ್ ಸರ್ಕಾರ ಆಯುಕ್ತರ ಸಂಖ್ಯೆಯನ್ನು ಮೂರಕ್ಕೆ ಏರಿಕೆ ಮಾಡಿತು. ಅದರಲ್ಲಿ ಒಬ್ಬರು ಮುಖ್ಯ ಆಯುಕ್ತರು ಹಾಗೂ ಇಬ್ಬರು ಆಯುಕ್ತರು. ಅವರ ಅವಧಿ 6 ವರ್ಷಗಳು ಅಥವಾ 65 ವರ್ಷ. ಸುಪ್ರೀಂ ಕೋರ್ಟ್ ನ್ಯಾಯಾಧೀಶರ ಹುದ್ದೆಗೆ ಸಮಾನವಾದ ವೇತನ ಹಾಗೂ ಭತ್ಯೆಗಳನ್ನು ಪಡೆಯುತ್ತಾರೆ. ನ್ಯಾಯಾಧೀಶರನ್ನು ಪದಚ್ಯುತಗೊಳಿಸಲು ಬಳಸುವ ಕಾನೂನನ್ನೇ ಆಯುಕ್ತರನ್ನು ಪದಚ್ಯುತಗೊಳಿಸಲು ಬಳಸಲಾಗುತ್ತದೆ. ಈಗ ಕಾರ್ಯ ನಿರ್ವಹಿಸುತ್ತಿರುವ ಸುನಿಲ್ ಅರೋರಾ 23ನೇ ಮುಖ್ಯ ಆಯುಕ್ತರಾಗಿದ್ದಾರೆ. ಟಿ.ಎನ್. ಶೇಷನ್ ತಂದ ಸುಧಾರಣೆಗಳು ಈಗ ಮತ್ತಷ್ಟು ಹೆಚ್ಚಾಗಿ ಚುನಾವಣೆ ಪಾರದರ್ಶಕವಾಗುವಂತೆ ಮಾಡಿವೆ. ಪ್ರತಿ ರಾಜ್ಯದಲ್ಲೂ ಪ್ರಧಾನ ಕಾರ್ಯದರ್ಶಿ ಮಟ್ಟದ ಹಿರಿಯ ಐಎಎಸ್ ಅಧಿಕಾರಿ ರಾಜ್ಯದ ಮುಖ್ಯ ಚುನಾವಣಾಧಿಕಾರಿಯಾಗಿ ಆಯೋಗದ ಪ್ರತಿನಿಧಿಯಾಗಿರುತ್ತಾರೆ. ಅವರಡಿಯಲ್ಲಿ ಅಧಿಕಾರಿಗಳ ದೊಡ್ಡ ತಂಡವೇ ಕಾರ್ಯ ನಿರ್ವಹಣೆ ಮಾಡುತ್ತದೆ.

**ಆಯೋಗದ ಕರ್ತವ್ಯಗಳು**

ಚುನಾವಣಾ ಆಯೋಗದ ಕರ್ತವ್ಯಗಳು ಇಡೀ ವರ್ಷ ಮತದಾರರ ಪಟ್ಟಿ ಸಿದ್ಧಪಡಿಸುವ ಕೆಲಸ ಮಾಡುತ್ತದೆ. ಸೇರ್ಪಡೆ ಹಾಗೂ ತೆಗೆದು ಹಾಕುವುದು ಇದ್ದೇ ಇರುತ್ತದೆ. ರಾಜಕೀಯ ಪಕ್ಷಗಳಿಗೆ ಮಾನ್ಯತೆ ನೀಡುವುದು, ಸಿಬ್ಬಂದಿಗೆ ತರಬೇತಿ, ಯಾವುದೇ ಶಾಸನಸಭೆಯಲ್ಲಿ ಯಾವುದೇ ಹುದ್ದೆ ಖಾಲಿಯಾಗುತ್ತಿದ್ದಂತೆ ಚುನಾವಣೆ ನಡೆಸಬೇಕು. ದಿನಾಂಕ ನಿಗದಿ, ನೀತಿ ಸಂಹಿತೆ ಅನುಷ್ಠಾನ, ಸಿಬ್ಬಂದಿಗೆ ತರಬೇತಿ, ಮತದಾನ ಹಾಗೂ ಮತಗಳ ಎಣಿಕೆ, ವೀಕ್ಷಕರ ನೇಮಕ ಹೀಗೆ ಜವಾಬ್ದಾರಿಗಳನ್ನು ನಿರ್ವಹಿಸಬೇಕು. ನಾಮಪತ್ರ ವಾಪಾಸ್ಸಾದ ಎಷ್ಟು ದಿನಕ್ಕೆ ಚುನಾವಣೆ ನಡೆಸಬೇಕು ಎಂಬುದು ಆಯೋಗದ ನಿರ್ಧಾರವೇ ಆಗಿರುತ್ತದೆ. ಈಗ 20 ದಿನ ಇದೆ. 1997ರಲ್ಲಿ 14 ದಿನ ಇತ್ತು. ಆರನೇ ಒಂದು ಭಾಗಕ್ಕಿಂತ ಕಡಿಮೆ ಮತ ಪಡೆದವರು ಠೇವಣಿ ಕಳೆದುಕೊಳ್ಳುತ್ತಾರೆ. ಅದನ್ನು ನೋಡುವ ಜವಾಬ್ದಾರಿ ಆಯೋಗದ್ದಾಗಿರುತ್ತದೆ. ಸ್ಪರ್ಧೆ ಮಾಡಿದ ಅಭ್ಯರ್ಥಿ ಆಯೋಗಕ್ಕೆ 30 ದಿನದಲ್ಲಿ ವೆಚ್ಚದ ವಿವರ ಸಲ್ಲಿಸಬೇಕು. ನಿಗದಿ ಮಾಡಿದ್ದ ವೆಚ್ಚದಷ್ಟೇ ಇದೆಯೇ ಎಂಬ ಬಗ್ಗೆ ಆಯೋಗ ಪರಿಶೀಲನೆ ಮಾಡಬೇಕಾಗುತ್ತದೆ. ಚುನಾವಣೆ ಮುಗಿದ ನಂತರ ಬರುವ ಯಾವುದೇ ದೂರುಗಳನ್ನು ಪರಿಶೀಲನೆ ಮಾಡುವುದು ಸಹ ಆಯೋಗದ ಕರ್ತವ್ಯವಾಗಿರುತ್ತದೆ.

ಗೆದ್ದವರು ನಿಧನರಾದರೆ ಅಥವಾ ರಾಜೀನಾಮೆ ನೀಡಿದರೆ ಅಂತಹ ಕ್ಷೇತ್ರಗಳಿಗೆ ಮತ್ತೆ ಚುನಾವಣೆ ನಡೆಸಬೇಕಾಗುತ್ತದೆ. ಈ ರೀತಿ ವರ್ಷಪೂರ್ತಿ ಆಯೋಗಕ್ಕೆ ಕೆಲಸ ಇರುತ್ತದೆ. ಚುನಾವಣೆ ಸಂದರ್ಭದಲ್ಲಿ ಅಭ್ಯರ್ಥಿಗಳ ರ್‍ಯಾಲಿಗಳು, ವಾಹನಗಳು, ಮೈಕ್ ಬಳಕೆಗೆ ಅನುಮತಿ ನೀಡುವ ಕೆಲಸವನ್ನು ಆಯೋಗ ನೋಡಿಕೊಳ್ಳುತ್ತದೆ. ಚುನಾವಣೆ ಕೆಲಸಕ್ಕೆ ನಿಯೋಜನೆ ಮಾಡಿಕೊಳ್ಳುವ ಸಿಬ್ಬಂದಿಗೆ ಭತ್ಯೆ ನೀಡುವ ಕೆಲಸ ಸಹ ಆಯೋಗ ಮಾಡಬೇಕಾಗುತ್ತದೆ. ಚುನಾವಣೆ ನಿಯೋಜನೆಗೊಳ್ಳುವ ಅಧಿಕಾರಿ ತಪ್ಪು ಮಾಡಿದರೆ ಆತನನ್ನು ಕಪ್ಪುಪಟ್ಟಿಗೆ ಸೇರಿಸಿ ಮತ್ತೆ ಚುನಾವಣಾ ಕಾರ್ಯಕ್ಕೆ ತೆಗೆದುಕೊಳ್ಳುವುದಿಲ್ಲ.

**ರಾಜ್ಯ ಚುನಾವಣಾ ಆಯೋಗ:**

ರಾಜ್ಯ ಚುನಾವಣಾ ಆಯೋಗ ಸಹ ಸಾಂವಿಧಾನಿಕ ಸಂಸ್ಥೆಯಾಗಿದೆ. ಭಾರತ ಸಂವಿಧಾನದ 73 ಹಾಗೂ 74ನೇ ತಿದ್ದುಪಡಿಗಳನ್ವಯ ರಾಜ್ಯದಲ್ಲಿನ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಡೆಸುವ ಸಲುವಾಗಿ 1993ರ ಮೇ 26ಕ್ಕೆ ಅಸ್ತಿತ್ವಕ್ಕೆ ಬಂದಿರುತ್ತದೆ. ರಾಜ್ಯ ಚುನಾವಣಾ ಆಯೋಗ ಸಂವಿಧಾನದ ಅನುಚ್ಛೇದ 243 (ಕೆ) ಹಾಗೂ 243 (ಜೆಡ್‌ಎ) ಅಡಿಯಲ್ಲಿ ರಚಿಸಲಾಗಿದೆ.

ಭಾರತ ಚುನಾವಣಾ ಆಯೋಗಕ್ಕೆ ಅನುಚ್ಛೇದ 324ರಡಿ ನೀಡಿರುವ ಎಲ್ಲ ಅಧಿಕಾರಗಳು ರಾಜ್ಯ ಚುನವಣಾ ಆಯೋಗಕ್ಕೂ ನೀಡಲಾಗಿದೆ.

ರಾಜ್ಯ ಚುನಾವಣಾ ಆಯೋಗವು ಸ್ವತಂತ್ರ ಸಂಸ್ಥೆಯಾಗಿದ್ದು, ಗ್ರಾಮೀಣ ಸ್ಥಳೀಯ ಸಂಸ್ಥೆಗಳಾದ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ಮತ್ತು ನಾಲ್ಕು ಹಂತದ ನಗರ ಸ್ಥಳೀಯ ಸಂಸ್ಥೆ ಅಂದರೆ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಚುನಾವಣೆಯನ್ನು ನಡೆಸುತ್ತದೆ.

ಚುನಾವಣೆ ನಡೆಸುವುದರ ಜತೆಗೆ ರಾಜ್ಯ ಚುನಾವಣಾ ಆಯೋಗಕ್ಕೆ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಅಧಿನಿಯಮ 1987 ರನ್ವಯ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರ ಮೇಲೆ ಸಲ್ಲಿಸಿದ ದೂರುಗಳನ್ನು ವಿಚಾರಣೆ ನಡೆಸಿ, ಸೂಕ್ತವೆನಿಸಿದಲ್ಲಿ ರಾಜಕೀಯ ಪಕ್ಷಗಳ ಸದಸ್ಯರುಗಳನ್ನು ಸದಸ್ಯತ್ವದಿಂದ ಅನರ್ಹಗೊಳಿಸಿ ಆದೇಶಗಳನ್ನು ಹೊರಡಿಸುವ ಅಧಿಕಾರ ನೀಡಲಾಗಿದೆ.

ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ಅವರ ವೆಚ್ಚ ವಿವರ ಸಲ್ಲಿಸದಿದ್ದಲ್ಲಿ ಅಥವಾ ಸಲ್ಲಿಸಲು ವಿಳಂಬವಾದಲ್ಲಿ ಮುಂದಿನ ಮೂರು ವರ್ಷಗಳ ಅವಧಿಗೆ ಅನರ್ಹಗೊಳಿಸುವ ಅಧಿಕಾರವೂ ರಾಜ್ಯ ಆಯೋಗಕ್ಕೆ ಇದೆ. ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಯ ಸದಸ್ಯರುಗಳು ಅವರ ವಾರ್ಷಿಕ ಆಸ್ತಿ ಮತ್ತು ಹೊಣೆಗಾರಿಕೆ ವಿವರಗಳನ್ನು ಸಲ್ಲಿಸದಿದ್ದಲ್ಲಿ ಅಥವಾ ತಪ್ಪು ವಿವರಗಳನ್ನು ಸಲ್ಲಿಸಿದಲ್ಲಿ, ಅವರನ್ನು ಅನರ್ಹಗೊಳಿಸುವ ಅಧಿಕಾರ ಸಹ ಇದೆ. ಆಯೋಗಕ್ಕೆ ಒಬ್ಬ ಆಯುಕ್ತರಿರುತ್ತಾರೆ. ಸರ್ಕಾರದ ಪ್ರಧಾನ ಕಾರ್ಯದರ್ಶಿ ಮಟ್ಟದ ನಿವೃತ್ತ ಅಧಿಕಾರಿಗಳನ್ನು ಆಯುಕ್ತರನ್ನಾಗಿ ನೇಮಕ ಮಾಡಲಾಗುತ್ತದೆ. ಕೆಎಎಸ್ ಹಿರಿಯ ಶ್ರೇಣಿಯ ಅಧಿಕಾರಿಯನ್ನು ಕಾರ್ಯದರ್ಶಿಯಾಗಿ ನೇಮಕ ಮಾಡಿರುತ್ತಾರೆ.

ಒಟ್ಟಾರೆ ಈ ರೀತಿಯಲ್ಲಿ ಚುನಾವಣಾ ಆಯೋಗವು ಚುನಾವಣೆ ಸಂದರ್ಭದಲ್ಲಿ ಪರಮಾಧಿಕಾರವನ್ನು ಹೊಂದುವ ಮೂಲಕ ತನ್ನ ಕರ್ತವ್ಯವನ್ನು ಶಿಸ್ತು ಬದ್ಧವಾಗಿ ನಿರ್ವಹಿಸುತ್ತದೆ.



downloaded from: www.kpscvaani.com

# ಸರ್ಕಾರ ರಚನೆಯ ವಿವಿಧ ವ್ಯವಸ್ಥೆಗಳು

ಶ್ರೀನಿವಾಸ್

ಜಗತ್ತಿನ ಬೇರೆ ಬೇರೆ ರಾಷ್ಟ್ರಗಳಲ್ಲಿ ಬೇರೆ ಬೇರೆ ನಮೂನೆಯ ಸರ್ಕಾರಗಳು ಅಸ್ತಿತ್ವದಲ್ಲಿವೆ. ಏನಿಲ್ಲವೆಂದರೂ, 20ಕ್ಕೂ ಹೆಚ್ಚು ಬಗೆಯ ಆಳ್ವಿಕೆ ಪ್ರಕಾರಗಳಿದ್ದರೂ ರಾಜ್ಯಶಾಸ್ತ್ರ ತಜ್ಞರು ಐದು ರೀತಿಗಳನ್ನು ಪ್ರಮುಖವಾಗಿ ಗುರುತಿಸಿದ್ದಾರೆ. ಒಂದೇ ಬಗೆಯ ಸರ್ಕಾರದ ಮಾದರಿಯಲ್ಲೂ ರಾಷ್ಟ್ರದಿಂದ ರಾಷ್ಟ್ರಕ್ಕೆ ಒಂದಷ್ಟು ಭಿನ್ನತೆಗಳು ಕೂಡ ಇರುತ್ತವೆ. ದೇಶವೊಂದರ ಚಾರಿತ್ರಿಕ ಹಿನ್ನೆಲೆ, ಜನಸಂಖ್ಯೆ, ಸಂಸ್ಕೃತಿ, ಭೌಗೋಳಿಕ ವಿಸ್ತೀರ್ಣ ಮತ್ತಿತರ ಅಂಶಗಳು ಈ ವ್ಯತ್ಯಾಸಗಳಿಗೆ ಕಾರಣವಾಗುತ್ತವೆ.

ಪ್ರಜಾತಂತ್ರ, ಗಣರಾಜ್ಯ, ಮೊನಾರ್ಕಿ, ಕಮ್ಯುನಿಸಂ ಮತ್ತು ಡಿಕ್ಟೇಟರ್‌ಶಿಪ್ (ಸರ್ವಾಧಿಕಾರತ್ವ) ಇವು ಐದು ಪ್ರಮುಖ ಬಗೆಯ ಆಳ್ವಿಕೆ ಮಾದರಿಗಳಾಗಿವೆ.



**ಪ್ರಜಾತಾಂತ್ರಿಕ ವ್ಯವಸ್ಥೆ:**

ರಾಷ್ಟ್ರದ ಪ್ರಜೆಗಳೇ ಪರಮೋಚ್ಛ ಅಧಿಕಾರ ಹೊಂದಿದ ಸರ್ಕಾರದ ಮಾದರಿ ಇದಾಗಿದೆ. ಬಹುತೇಕ ರಾಷ್ಟ್ರಗಳಲ್ಲಿ ಜನಪ್ರತಿನಿಧಿ ವ್ಯವಸ್ಥೆ ಮೂಲಕ ಪರೋಕ್ಷವಾಗಿ ಇದನ್ನು ಚಲಾಯಿಸಲಾಗುತ್ತದೆ. ನಿಯೋಜಿತ ಅಧಿಕಾರವನ್ನು ನಿಯಮಿತ ಅವಧಿಗೆ ಪರಿಷ್ಕರಿಸಲಾಗುತ್ತದೆ.

**ಗಣರಾಜ್ಯ ವ್ಯವಸ್ಥೆ:**

ಗಣರಾಜ್ಯ ವ್ಯವಸ್ಥೆಯನ್ನು ಪ್ರಜಾತಾಂತ್ರಿಕ ವ್ಯವಸ್ಥೆಯ ಒಂದು ಪ್ರಕಾರ ಎನ್ನಬಹುದು. ಹಲವು ರಾಜ್ಯ/ ಪ್ರಾಂತ್ಯಗಳ ಒಕ್ಕೂಟವನ್ನು ಇದು ಪ್ರತಿನಿಧಿಸುತ್ತದೆ. ಇಲ್ಲಿ ಅಧಿಕಾರವು ಕೇಂದ್ರ ಮತ್ತು ರಾಜ್ಯಗಳ ನಡುವೆ ಹಂಚಿಕೆಯಾಗಿರುತ್ತದೆ. ರಾಜ್ಯಗಳು ಕೇಂದ್ರೀಯ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತವೆಯಾದರೂ ಕೆಲವು ಅಂಶಗಳಿಗೆ ಸಂಬಂಧಪಟ್ಟಂತೆ ಸ್ವತಂತ್ರವಾಗಿ ಅಧಿಕಾರ ಚಲಾಯಿಸುವ ಅವಕಾಶವನ್ನೂ ಹೊಂದಿರುತ್ತವೆ.

**ರಾಜಪ್ರಭುತ್ವ:**

ಪ್ರಾಂತ್ಯ ಅಥವಾ ಪ್ರದೇಶವನ್ನು ಆಳುವ ರಾಜನ ಬಳಿ ಪರಮಾಧಿಕಾರ ಕೇಂದ್ರೀಕೃತವಾಗಿರುತ್ತದೆ. ಇದು ಜೀವಿತಾವಧಿಯುದ್ದಕ್ಕೂ ಮುಂದುವರಿಯಲಿದ್ದು, ವಂಶಪಾರಂಪರಿಕವಾಗಿ ಹಸ್ತಾಂತರವಾಗುತ್ತದೆ. ಇದರಲ್ಲಿ ನಿರಂಕುಶ ರಾಜಪ್ರಭುತ್ವ ಅಥವಾ ಸಾಂವಿಧಾನಿಕ ಮಿತಿಗೊಳಪಟ್ಟ ಅಧಿಕಾರ ಹೊಂದಿದ ರಾಜಪ್ರಭುತ್ವ ಎಂಬ ಎರಡು ಬಗೆಗಳಿವೆ. ಯುನೈಟೆಡ್ ಕಿಂಗ್‌ಡಮ್ (ಯುಕೆ) ಸಂವಿಧಾನಿಕ ರಾಜಪ್ರಭುತ್ವ ವ್ಯವಸ್ಥೆಗೆ ಒಂದು ಉದಾಹರಣೆಯಾಗಿದೆ.

**ಕಮ್ಯುನಿಸ್ಟ್:**

ಪ್ರಭುತ್ವವೇ ಆರ್ಥಿಕತೆಯನ್ನು ಯೋಜಿಸಿ, ನಿಯಂತ್ರಿಸುವ ಆಡಳಿತ ವ್ಯವಸ್ಥೆ ಇದಾಗಿದೆ. ಸಾಮಾನ್ಯವಾಗಿ, ಅಧಿಕಾರದಲ್ಲಿರುವ ಏಕೈಕ ಪಕ್ಷದಲ್ಲೇ ಈ ಪರಮಾಧಿಕಾರ ಕೇಂದ್ರೀಕೃತವಾಗಿರುತ್ತದೆ. ಎಲ್ಲಾ ಉತ್ಪನ್ನಗಳೂ ಸಮಾಜದ ಎಲ್ಲರ ನಡುವೆ ಸಮಾನವಾಗಿ ಹಂಚಿಕೆಯಾಗಬೇಕು ಎಂಬ ತತ್ವ ಆಧರಿಸಿ ಇದು ಕೆಲಸ ಮಾಡುತ್ತದೆ. ಹೀಗಾಗಿ ಸ್ವತ್ತು ಅಥವಾ ಖಾಸಗಿ ಮಾಲೀಕತ್ವವನ್ನು ರದ್ದುಗೊಳಿಸುವ ಅಧಿಕಾರವನ್ನು ಸರ್ಕಾರ ಚಲಾಯಿಸುತ್ತದೆ. ನಮ್ಮ ನೆರೆಯ ರಾಷ್ಟ್ರವಾದ ಚೀನಾವು ಈ ಮಾದರಿಯ ಆಡಳಿತ ಅಳವಡಿಸಿಕೊಂಡಿದೆ.

**ಸರ್ವಾಧಿಕಾರತ್ವ:**

ಒಬ್ಬ ಆಡಳಿತಗಾರ ಅಥವಾ ಆಡಳಿತ ನಿರ್ವಹಿಸುವ ಒಂದು ಸಣ್ಣ ಕೂಟದಲ್ಲಿ ಪರಮಾಧಿಕಾರ ಕೇಂದ್ರೀಕೃತಗೊಂಡಿರುತ್ತದೆ. ಹೀಗೆ ಹೊಂದಿರುವ ಪರಮಾಧಿಕಾರದ ಮೇಲೆ ಸಂವಿಧಾನದ ಅಥವಾ ಕಾನೂನಿನ ಯಾವುದೇ ನಿಯಂತ್ರಣ ಇರುವುದಿಲ್ಲ.

ಪ್ರಸ್ತುತ ಭಾರತ ಸೇರಿದಂತೆ ಜಗತ್ತಿನ ಹೆಚ್ಚಿನ ರಾಷ್ಟ್ರಗಳು ಪ್ರಜಾತಾಂತ್ರಿಕ ರಾಷ್ಟ್ರಗಳಾಗಿವೆ. ಈ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಪ್ರತ್ಯಕ್ಷ ಪ್ರಜಾತಂತ್ರ (ನೇರ ಪ್ರಜಾತಂತ್ರ) ಮತ್ತು ಪ್ರಾತಿನಿಧಿಕ ಪ್ರಜಾತಂತ್ರ ಎಂಬ ಎರಡು ಬಗೆಗಳಿವೆ. ಪ್ರತ್ಯಕ್ಷ ಪ್ರಜಾತಂತ್ರ ವ್ಯವಸ್ಥೆಯಲ್ಲಿ, ಸರ್ಕಾರದ ಕಾರ್ಯನಿರ್ವಹಣೆಯಲ್ಲಿ ಪ್ರತಿಯೊಬ್ಬರೂ ಸಮಾನವಾಗಿ ಖುದ್ದು ಪಾಲ್ಗೊಳ್ಳಬಹುದು. ನಾಗರಿಕರ ಸಭೆಗಳಲ್ಲಿ ಪಾಲ್ಗೊಳ್ಳುವ ಜೊತೆಗೆ ಆಡಳಿತ ಪ್ರಕ್ರಿಯೆಯಲ್ಲಿ ಮತ್ತು ಶಾಸನ ರಚನೆಯಲ್ಲಿ ಖುದ್ದು ಭಾಗಿಯಾಗಬಹುದು. ಪ್ರಾಚೀನ ಅಥೆನ್ಸ್‌ನಲ್ಲಿ ಇಂತಹ ಆಡಳಿತ ವ್ಯವಸ್ಥೆ ಇತ್ತು.

ಈಗ ಬಹುತೇಕ ಎಲ್ಲಾ ಪ್ರಜಾತಾಂತ್ರಿಕ ರಾಷ್ಟ್ರಗಳೂ ಪ್ರಾತಿನಿಧಿಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಅಳವಡಿಸಿಕೊಂಡಿವೆ. ಈ ಮಾದರಿಯಲ್ಲಿ, ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನು ಚುನಾಯಿಸುವ ಅಧಿಕಾರ ಹೊಂದಿರುತ್ತಾರೆ. ನಂತರ, ಶಾಸನ ರಚನೆಯ ಅಧಿಕಾರ ಈ ಚುನಾಯಿತ ಪ್ರತಿನಿಧಿಗಳದ್ದಾಗಿರುತ್ತದೆ.

ಈ ಪ್ರಾತಿನಿಧಿಕ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲೂ ಎರಡು ಪ್ರಕಾರಗಳಿವೆ. ಅವುಗಳೆಂದರೆ, ಅಧ್ಯಕ್ಷೀಯ ಪ್ರಜಾತಾಂತ್ರಿಕ ವ್ಯವಸ್ಥೆ ಮತ್ತು ಸಂಸದೀಯ ಪ್ರಜಾತಾಂತ್ರಿಕ ವ್ಯವಸ್ಥೆ.

ಇದಕ್ಕೊಂದು ಉದಾಹರಣೆ ಎಂದರೆ, ಭಾರತ ಮತ್ತು ಅಮೆರಿಕಾಗಳೆರಡೂ ಪ್ರಜಾತಂತ್ರ ರಾಷ್ಟ್ರಗಳೇ. ಆದರೆ, ಭಾರತವು ಸಂಸದೀಯ ಪ್ರಜಾತಾಂತ್ರಿಕ ವ್ಯವಸ್ಥೆ ಅಳವಡಿಸಿಕೊಂಡಿದ್ದರೆ, ಅಮೆರಿಕವು ಅಧ್ಯಕ್ಷೀಯ ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ.

ಈಗ, ಇವೆರಡರ ಸಾಮ್ಯತೆ ಮತ್ತು ಭಿನ್ನತೆಗಳ ಬಗ್ಗೆ ಕೊಂಚ ಗಮನ ಹರಿಸುವುದಾದರೆ, ಈ ಎರಡೂ ದೇಶಗಳಲ್ಲಿ ಜನರು ಚುನಾವಣೆ ಮೂಲಕ ತಮ್ಮ ಪ್ರತಿನಿಧಿಗಳನ್ನು ಆರಿಸುತ್ತಾರೆ. ಭಾರತದಂತಹ ಸಂಸದೀಯ ಪ್ರಜಾತಂತ್ರ ರಾಷ್ಟ್ರದಲ್ಲಿ, ಹೀಗೆ ಚುನಾವಣೆಯಲ್ಲಿ ಬಹುಮತದಿಂದ ಆಯ್ಕೆಗೊಂಡ ಪಕ್ಷದ ಚುನಾಯಿತ ಪ್ರತಿನಿಧಿಗಳು ಸೇರಿ ಪ್ರಧಾನ ಮಂತ್ರಿಯನ್ನು ಸರ್ಕಾರದ ಪ್ರಮುಖರನ್ನಾಗಿ ಆಯ್ಕೆ ಮಾಡುತ್ತಾರೆ. ಹೀಗೆ, ಆಯ್ಕೆಗೊಂಡ ಪ್ರಧಾನಿಯು ನಂತರ ಸರ್ಕಾರದ ಸಂಪುಟವನ್ನು ರಚಿಸುತ್ತಾರೆ. ತಾತ್ವಿಕವಾಗಿ ಹೇಳಬೇಕೆಂದರೆ, ಈ ವ್ಯವಸ್ಥೆಯಲ್ಲೂ ರಾಷ್ಟ್ರಾಧ್ಯಕ್ಷರೇ ಆಡಳಿತಾಧಿಕಾರದ (ಪ್ರಭುತ್ವದ) ಮುಖ್ಯಸ್ಥ ಎಂದು ಕರೆಸಿಕೊಳ್ಳುತ್ತಾರೆ. ಆದರೆ, ಇಲ್ಲಿ ರಾಷ್ಟ್ರಾಧ್ಯಕ್ಷರು ಪ್ರಧಾನಿಯಾದವರ ಶಿಫಾರಸ್ಸು ಮತ್ತು ಸಲಹೆಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ.

ಮೊದಲೇ ಹೇಳಿದಂತೆ, ಅಮೆರಿಕದಲ್ಲಿ ಅಧ್ಯಕ್ಷೀಯ ಮಾದರಿ ವ್ಯವಸ್ಥೆ ಇದೆ. ಆದರೆ ಇಲ್ಲಿ ಕೂಡ ಅಧ್ಯಕ್ಷರನ್ನು ನೇರವಾಗಿ ಜನರೇ ಆಯ್ಕೆ ಮಾಡುವುದಿಲ್ಲ. ವಿವಿಧ ಪ್ರಾಂತ್ಯಗಳಲ್ಲಿ ಆಯ್ಕೆಗೊಂಡ ಪ್ರತಿನಿಧಿಗಳು ಮತ ಚಲಾಯಿಸುವ ಮೂಲಕ ರಾಷ್ಟ್ರಾಧ್ಯಕ್ಷರನ್ನು ಆಯ್ಕೆ ಮಾಡುತ್ತಾರೆ.

ಬಹುತೇಕ ಎಲ್ಲಾ ಪ್ರಜಾತಾಂತ್ರಿಕ ರಾಷ್ಟ್ರಗಳೂ ಪ್ರಾತಿನಿಧಿಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಅಳವಡಿಸಿಕೊಂಡಿವೆ. ಈ ಮಾದರಿಯಲ್ಲಿ, ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನು ಚುನಾಯಿಸುವ ಅಧಿಕಾರ ಹೊಂದಿರುತ್ತಾರೆ. ನಂತರ, ಶಾಸನ ರಚನೆಯ ಅಧಿಕಾರ ಈ ಚುನಾಯಿತ ಪ್ರತಿನಿಧಿಗಳದ್ದಾಗಿರುತ್ತದೆ.

ಅಧ್ಯಕ್ಷೀಯ ಮಾದರಿಯಲ್ಲಿ ಸರ್ಕಾರ ಮತ್ತು ಸಂಸತ್ತಿನ ನಡುವೆ ಸ್ಪಷ್ಟ ವ್ಯತ್ಯಾಸ ಇರುತ್ತದೆ. ಅಧ್ಯಕ್ಷರಾಗಿ ಆಯ್ಕೆಯಾದವರು ತಮ್ಮ ವಿವೇಚನಾಧಿಕಾರ ಬಳಸಿ ಸಚಿವರ ನೇಮಕಾತಿ ಮಾಡಿಕೊಳ್ಳಬಹುದು. ಹೀಗೆ ಸರ್ಕಾರದ ಸದಸ್ಯರಾಗಿ ನೇಮಕಗೊಂಡವರು ಸಂಸತ್ ಸದಸ್ಯರಾಗಿರಲೇಬೇಕು ಎಂಬ ನಿಬಂಧನೆ ಏನೂ ಇರುವುದಿಲ್ಲ. ಆದರೆ, ಸಂಸದೀಯ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಸರ್ಕಾರದ ಸದಸ್ಯರಾಗುವವರು ಸಂಸತ್ ಸದಸ್ಯರಾಗಿರಲೇಬೇಕು. ಒಂದೊಮ್ಮೆ, ಹೀಗೆ ಸದಸ್ಯರಾಗಿ ಆಯ್ಕೆಯಾಗದವರನ್ನು ಸರ್ಕಾರದ ಸದಸ್ಯರಾಗಿಸಿಕೊಂಡರೆ, ಅಂಥವರು ಆರು ತಿಂಗಳ ಅವಧಿಯೊಳಗೆ ಲೋಕಸಭೆ ಅಥವಾ ರಾಜ್ಯಸಭೆಗೆ ಆಯ್ಕೆ ಅಥವಾ ನೇಮಕ ಆಗಬೇಕಾಗುತ್ತದೆ.

ಈ ಎರಡೂ ಪ್ರಕಾರಗಳಲ್ಲಿ, ಶಾಸನ ರಚನೆ ಸಂಬಂಧ ಸಂಸತ್ತಿನಲ್ಲಿ ಚರ್ಚೆಗಳು ನಡೆಯುತ್ತವೆ. ಆದರೆ, ಅಧ್ಯಕ್ಷೀಯ ಮಾದರಿಯಲ್ಲಿ ಅಧ್ಯಕ್ಷರು ನಿರ್ಣಾಯಕ ಅಧಿಕಾರ ಹೊಂದಿರುತ್ತಾರೆ. ಅಧ್ಯಕ್ಷರು ಯಾವುದೇ ರಾಜಕೀಯ ಪಕ್ಷಗಳ ಮರ್ಜಿಗೆ ಒಳಪಡದೆ ವಿಟೋ ಹಕ್ಕು ಚಲಾಯಿಸುವ ಮೂಲಕ ಶಾಸನವನ್ನು ತಡೆಹಿಡಿಯುವ ಅಧಿಕಾರ ಹೊಂದಿರುತ್ತಾರೆ. ಸಂಸದೀಯ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ರಾಷ್ಟ್ರಾಧ್ಯಕ್ಷರಿಗೆ ಇಂತಹ ಅಧಿಕಾರ ಇರುವುದಿಲ್ಲ. ಈ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳ ಅಭಿಪ್ರಾಯಕ್ಕೆ ಹೆಚ್ಚಿನ ಬಲ ಇರುತ್ತದೆ. ಸಂಸತ್ತು ಅಂಗೀಕರಿಸಿದ ಮಸೂದೆಗಳಿಗೆ ರಾಷ್ಟ್ರಾಧ್ಯಕ್ಷರ ಅಂಕಿತ ಎಂಬುದು ಕೇವಲ ಔಪಚಾರಿಕ ವಿಧಿಯಷ್ಟೇ ಆಗಿರುತ್ತದೆ. ಆದರೆ, ಕೆಲವು ವಿಶೇಷ ಸಂದರ್ಭಗಳಲ್ಲಿ ರಾಷ್ಟ್ರಾಧ್ಯಕ್ಷರಾದವರು ತಮ್ಮ ಅಂಕಿತ ಹಾಕುವ ಮುನ್ನ ಮಸೂದೆಗಳನ್ನು ಸಂಸತ್ತಿನ ಮರು ಪರಿಶೀಲನೆಗೆ ಕಳುಹಿಸಬಹುದಾಗಿದೆ. ಹೀಗೆ ಪರಿಶೀಲನೆಗೆ ಬಂದ ಮಸೂದೆಗಳನ್ನು ಸಂಸತ್ತು ಮತ್ತೊಮ್ಮೆ ರಾಷ್ಟ್ರಾಧ್ಯಕ್ಷರಿಗೆ ಕಳುಹಿಸಿದರೆ ಅವರು ತಮ್ಮ ಅಂಕಿತ ಹಾಕಬೇಕಾಗುತ್ತದೆ (ತಿರಸ್ಕರಿಸುವ ಅಧಿಕಾರ ಇರುವುದಿಲ್ಲ).

ಉಳಿದಂತೆ, ಎರಡೂ ಪ್ರಕಾರಗಳಲ್ಲಿ, ಅಧಿಕಾರದ ಪ್ರತ್ಯೇಕೀಕರಣ (ಶಾಸಕಾಂಗ ಅಧಿಕಾರ, ಕಾರ್ಯಾಂಗ ಅಧಿಕಾರ, ನ್ಯಾಯಾಂಗ ಅಧಿಕಾರ), ಸಂವಿಧಾನ, ಚುನಾವಣೆ, ರಾಜಕೀಯ ಪಕ್ಷಗಳ ನಡುವೆ ಪೈಪೋಟಿ, ಜನಾಭಿಮತ ಸೇರಿದಂತೆ ಕೆಲವು ಸಾಮ್ಯತೆಗಳು ಇರುತ್ತವೆ. ಎರಡೂ ಮಾದರಿಗಳಲ್ಲಿ, ಯಶಸ್ವಿ ಆಡಳಿತ ನಡೆಸುತ್ತಿರುವ ರಾಷ್ಟ್ರಗಳಿಗೆ ಹಲವಾರು ಉದಾಹರಣೆಗಳನ್ನು ಕೊಡಬಹುದಾಗಿದೆ.





downloaded from: www.kpscvaani.com



# ಮತದಾನದಲ್ಲಿ ನೋಟಾದ ಪ್ರಾಮುಖ್ಯತೆ

ಸವಿಕ

**ನೋ**ಟಾ.. ಬಹುಶಃ ಈ ಶಬ್ದ ಇತ್ತೀಚಿನ ಚುನಾವಣೆಗಳಲ್ಲಿ ಹೆಚ್ಚಾಗಿ ಸದ್ದು ಮಾಡುತ್ತಿದೆ. ಒಂದು ಹಂತದಲ್ಲಿ ರಾಜಕಾರಣಿಗಳ ಸದ್ದು ಅಡಗಿಸುವ, ಗೆಲುವಿನ ಅಂತರವನ್ನು ಕಡಿಮೆ ಮಾಡುವ ಶಕ್ತಿ ಈ ಪದಕ್ಕೆ ಇದೆ. ಒಂದು ಅರ್ಥದಲ್ಲಿ ಚುನಾವಣಾ ಸುಧಾರಣೆಗೆ ಪ್ರಮುಖ ಅಸ್ತ್ರ ಅಂತಲೂ ಹೇಳಲಾಗುತ್ತದೆ.

ಮತದಾರನಿಗೆ ಆಡಳಿತ ನಡೆಸುವ ವ್ಯವಸ್ಥೆ ಅಥವಾ ತಮ್ಮನ್ನು ಪ್ರತಿನಿಧಿಸುವ ಸಲುವಾಗಿ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಯಾವೊಬ್ಬ ಅಭ್ಯರ್ಥಿಯು ಇಷ್ಟವಾಗದಿದ್ದಲ್ಲಿ ತನಗೆ ಸಂವಿಧಾನ ದತ್ತವಾಗಿ ಬಂದಿರುವ ಹಕ್ಕನ್ನು ಬಳಸಿ, ಚುನಾವಣೆ ವೇಳೆ ಈ ನೋಟ ಬಟನ್ ಒತ್ತುವ ಮೂಲಕ ಆಕ್ರೋಶ ವ್ಯಕ್ತಪಡಿಸಬಹುದು. ಅಂದರೆ ಪ್ರಜಾಪ್ರಭುತ್ವದಲ್ಲಿ ಮತದಾರ ಮತ್ತಷ್ಟು ಶಕ್ತಿಶಾಲಿ ಅನ್ನೋದು ಈ ನೋಟಾ ಬಟನ್ ತೋರಿಸುತ್ತೆ.

ಡೆಮಾಕ್ರಸಿಯಲ್ಲಿ ಮತದಾರನ ಆಯ್ಕೆಗೆ ಜಾಗ ಜಾಸ್ತಿ ಇರುತ್ತದೆ. ಮತದಾನದ ಹಕ್ಕನ್ನು ಚಲಾಯಿಸಬೇಕು. ಆದರೆ ತನಗೆ ಇಷ್ಟ ಇಲ್ಲದ ಅಥವಾ ವ್ಯವಸ್ಥೆಗೆ ಮಾರಕವಾಗುವ ಅಭ್ಯರ್ಥಿಗಳೇ ಕಣದಲ್ಲಿದ್ದಾರೆ ಎಂದು ಮತದಾನ ಮಾಡದೆ ಇರುವ ಮತದಾರರಿಗಾಗಿಯೇ ಚುನಾವಣಾ ಆಯೋಗ ಈ ನೋಟಾ ಆಯ್ಕೆಯನ್ನು ಮುಂದಿರಿಸಿದೆ.

ನೋಟಾ ಪರಿಚಯಿಸಿದ್ದು, ವ್ಯವಸ್ಥೆಯಲ್ಲಿರುವ ಪ್ರತಿಯೊಬ್ಬ ಮತದಾರನೂ ಕೂಡ ಮತ ಚಲಾಯಿಸಿ ಚುನಾವಣಾ ವ್ಯವಸ್ಥೆಯನ್ನು ಗಟ್ಟಿಗೊಳಿಸಬೇಕು. ಮತದಾನದ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು ಅನ್ನುವುದಷ್ಟೆ ಚುನಾವಣಾ ಆಯೋಗದ ಇರಾದೆ.

**ನೋಟಾ ಹುಟ್ಟು**

ನೋಟಾ ಅಂದರೆ ನನ್ ಆಫ್ ದಿ ಎಬೌ ಎಂದು ಅರ್ಥ. ಚುನಾವಣಾ ಬ್ಯಾಲೆಟ್ನಲ್ಲಿ ಕೊನೆಗೆ ಈ ನೋಟಾ ಬಟನ್ ಅಳವಡಿಸಲಾಗಿರುತ್ತೆ. ಇದಕ್ಕೆ ಮತ ನೀಡಿದರೆ ಮೇಲಿನ ಯಾವ ಅಭ್ಯರ್ಥಿಗೂ ಮತ ಕೊಡಲು ಇಷ್ಟ ಇಲ್ಲ ಅಥವಾ ಮತದಾರರ ಪಟ್ಟಿಯಲ್ಲಿರುವವರು ಯಾರೂ ನನ್ನ ಮತಕ್ಕೆ ಅರ್ಹರಲ್ಲ ಎಂದರ್ಥ.

ಯೂನಿಯನ್ ಫಾರ್ ಸಿವಿಕ್ ಲಿಬರ್ಟಿ ವರ್ಸಸ್ ಯೂನಿಯನ್ ಆಫ್ ಇಂಡಿಯಾ ಪ್ರಕರಣವನ್ನು ವಿಚಾರಣೆ ನಡೆಸಿದ ಸುಪ್ರಿಂಕೋರ್ಟ್, 2013 ಸೆ.27 ತೀರ್ಪನ್ನು ನೀಡಿ, ನೋಟಾ ವ್ಯವಸ್ಥೆಯನ್ನು ಪರಿಚಯಿಸಲು ಕಾರಣವಾಯ್ತು. ಅಲ್ಲದೇ ಭಾರತದ ಚುನಾವಣಾ ಆಯೋಗಕ್ಕೂ ಸೂಚಿಸಿ, ಮತಯಂತ್ರದ ಕೊನೆಯ ಭಾಗದಲ್ಲಿ ಅಳವಡಿಸುವಂತೆ ಸೂಚಿಸಿತು.


ನೋಟಾ, (ನನ್ ಆಫ್ ದಿ ಎಬೌ) ಇದರ ಚಿಹ್ನೆಯನ್ನು ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಡಿಸೈನ್ (ಎನ್ ಐ ಡಿ) ವಿನ್ಯಾಸಗೊಳಿಸಿದ್ದು, ಆಯ್ಕೆಯನ್ನು ಮತದಾರರ ಮುಂದೆ ಇರಿಸಿದೆ. ಕಳೆದ ಲೋಕಸಭಾ ಚುನಾವಣಾ ವೇಳೆ ನೋಟಾ ಆಯ್ಕೆಯನ್ನು ಪರಿಚಯಿಸಲಾಗಿತ್ತು.

ರಾಜಕೀಯ ಶುದ್ಧೀಕರಣ, ಚುನಾವಣೆಯಲ್ಲಿ ಸಚ್ಚಾರಿತ್ರ್ಯದ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ಅಂಥ ರಾಜಕೀಯ ಪಕ್ಷಗಳಿಗೆ ಪರೋಕ್ಷ ಎಚ್ಚರಿಕೆ ನೀಡುವುದರ ಜೊತೆಗೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾರನಿಗೆ ಆಯ್ಕೆ ಸ್ವಾತಂತ್ರ್ಯ ಇದೆ ಅನ್ನುವುದನ್ನು ಪಕ್ಷಗಳು ಮತ್ತು ರಾಜಕೀಯ ಅಭ್ಯರ್ಥಿಗಳಿಗೆ ಮನದಟ್ಟು ಮಾಡುವ ಸಲುವಾಗಿ ನೋಟಾ ಆಯ್ಕೆಯನ್ನು ತರಲಾಗಿದೆ. ಆಗಲಾದರೂ ಪಕ್ಷಗಳು ವಿದ್ಯಾವಂತ, ಸಮಾಜಿಕ ಕಳಕಳಿ ಇರುವಂತಹ ಅಭ್ಯರ್ಥಿಗಳನ್ನು ಚುನಾವಣೆಗೆ ನಿಲ್ಲಿಸಲು ಯೋಚಿಸುತ್ತಾರೆ.

ನಮ್ಮ ದೇಶದಲ್ಲಿ ಮೊದಲ ಬಾರಿಗೆ ಮುಂಬೈ ಮಹಾನಗರ ಪಾಲಿಕೆಯ ವಾರ್ಡ್ ಒಂದರ ಚುನಾವಣೆ ವೇಳೆ ನೋಟಾವನ್ನು ಬಳಕೆ ಮಾಡಲಾಯಿತು.

ವಿದ್ಯುನ್ಮಾನ ಮತಯಂತ್ರದಲ್ಲಿ ನಮೂದಾಗಿರುವ ಅಭ್ಯರ್ಥಿಗಳ ಸಾಲಿನಲ್ಲಿ ಕೊನೆ ಭಾಗದಲ್ಲಿ ಈ ನೋಟಾ ಬಟನ್ ಇರುತ್ತದೆ. ಉದಾಹರಣೆಗೆ 19 ಮಂದಿ ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದರೆ 20 ನೇ ಸಂಖ್ಯೆಯಲ್ಲಿ ನೋಟಾ ಬಟನ್ ಇರುತ್ತೆ, ಪಟ್ಟಿಯಲ್ಲಿ ಯಾವ ಅಭ್ಯರ್ಥಿಯೂ ನನ್ನ ಮತ ಪಡೆಯಲು ಅನರ್ಹ ಅನ್ನಿಸಿದಾಗ ನೋಟಾ ಬಟನ್ ಒತ್ತಿ ಮತದಾನ ಹಕ್ಕು ಚಲಾಯಿಸಬಹುದು. ಇದು ಅಧಿಕೃತವಾಗಿ ದಾಖಲಾಗುತ್ತದೆ. ಸಾಲದ್ದಕ್ಕೆ ಅನರ್ಹ ಅಭ್ಯರ್ಥಿಗಳನ್ನು ತಿರಸ್ಕರಿಸಿದ ಸಂದೇಶ ರವಾನಿಸಿದಂತಾಗುತ್ತದೆ.






downloaded from: www.kpscvaani.com



# ಚುನಾವಣಾ ಆಯೋಗದ ಕ್ರಿಯಾಶೀಲತೆಗೆ ಟಿ.ಎನ್.ಶೇಷನ್ ಕೊಡುಗೆ

ವಿರೇಶ ಮಾಕೆಟ್ಟ ನಿಡಗುಂದಿ



**ಈ**ಗ ದೇಶದ್ಯಾಂತ ಬಿರುಬೇಸಿಗೆಯಲ್ಲಿ, ಸುರಿಯುವ ಬೆವರಿನ ತೇವದಲ್ಲಿ ಲೋಕಸಭೆ ಚುನಾವಣೆಯದ್ದೇ ಹವಾ. 2019 ಏಪ್ರಿಲ್-ಮೇನಲ್ಲಿ ರಾಷ್ಟ್ರದಾದ್ಯಂತ 543 ಲೋಕಸಭಾ ಕ್ಷೇತ್ರಗಳಿಗೆ ಏಳು ಹಂತಗಳಲ್ಲಿ ಚುನಾವಣೆ ನಡೆದು 272 ಸೀಟು ಬಹುಮತ ಪಡೆಯುವ ಮೂಲಕ ಅಧಿಕಾರದ ಚುಕ್ಕಾಣಿ ಹಿಡಿಯುವ ಸಲುವಾಗಿ ಪಕ್ಷ ಮತ್ತು ಒಕ್ಕೂಟಗಳು ಸನ್ನದ್ಧವಾಗಿವೆ.

ಭಾರತದ ಚುನಾವಣಾ ಆಯೋಗ ಇನ್ನಿತರ ದೇಶಗಳಿಗೆ ಮಾದರಿಯಾಗಿದೆ. ಇಲ್ಲಿನ ಪ್ರಾಮಾಣಿಕ ಚುನಾವಣಾ ವ್ಯವಸ್ಥೆಯ ಪ್ರತೀಕವಾದ 'ಇವಿಎಮ್' ಯಂತ್ರಗಳು ಇವತ್ತಿನವರೆಗೂ ಜಗತ್ತಿನ ಶ್ರೀಮಂತಿಕೆ, ಗರಿಷ್ಠ ಸಾಕ್ಷರತೆ ಹೊಂದಿದ ದೇಶಗಳಲ್ಲಿ ಮುಂಚೂಣಿಯಲ್ಲಿರುವ ರಾಷ್ಟ್ರವಾದ ಅಮೆರಿಕಾ ಕೂಡಾ ಬ್ಯಾಲೆಟ್ ಪೇಪರ್ ಬಳಸಿ ಮತದಾನ ನಡೆಸುತ್ತಿದೆ. ಹಾಗೆ ಜಗತ್ತಿನ ಬಹುತೇಕ ದೇಶಗಳನ್ನು ಆಳಿದ ರಾಷ್ಟ್ರ ಇಂಗ್ಲೆಂಡ್ ದೇಶದಲ್ಲಿ ಮಹಿಳೆಯರು ಹಲವಾರು ವರ್ಷಗಳವರೆಗೆ ಹೋರಾಟ ಮಾಡಿದ ನಂತರ ಮತದಾನದ ಹಕ್ಕು ಲಭಿಸಿತು. ಆದರೆ ನಮ್ಮ ದೇಶದಲ್ಲಿ ಸ್ವತಂತ್ರ ಪಡೆದ ಕೂಡಲೇ ಏಕಕಾಲದಲ್ಲಿ ಮಹಿಳೆಯರಿಗೂ ಮತದಾನದ ಹಕ್ಕು ನೀಡುವುದರ ಮೂಲಕ ಸಮಾನತೆ ತಂದಂತಹ ವಿಶಿಷ್ಟ ದೇಶ ನಮ್ಮ ಭಾರತ. ಜೊತೆಗೆ ನಮ್ಮ ದೇಶದಲ್ಲಿ 18 ವರ್ಷ ತುಂಬಿದ ಕೂಡಲೇ ಚುನಾವಣೆಗೆ ಸ್ಪರ್ಧಿಸುವ ಹಾಗೂ ಮತದಾನ ಮಾಡುವ ಹಕ್ಕು ಲಭಿಸುತ್ತದೆ. ಆದರೆ ಕೆಲವು ರಾಷ್ಟ್ರಗಳಲ್ಲಿ ಯುವಕರಿಗೆ 18 ವರ್ಷವಾದರೂ ಮತದಾನದ ಹಕ್ಕನ್ನು ಹೊಂದದಿರುವುದು ಒಂದೆಡೆ ವಿಷಾದವೆನಿಸಿದರೆ, ಇನ್ನೊಂದೆಡೆ ನಮ್ಮ ದೇಶ ಯುವಕರಿಗೆ ನೀಡಿದ ಆದ್ಯತೆ ಪ್ರಶಂಸನೀಯ.

ನೇಪಾಳ ಸೇರಿದಂತೆ ಅನೇಕ ರಾಷ್ಟ್ರಗಳು 2012ರಲ್ಲಿ 'ಇವಿಎಮ್'ಯಂತ್ರಗಳನ್ನು ನಮಗೆ ಪೂರೈಸುವಂತೆ ಚುನಾವಣಾ ಆಯೋಗಕ್ಕೆ ವಿನಂತಿಸಿವೆ. ಹಾಗೆ ನೈಜೀರಿಯಾ, ಇಂಡೊನೇಶಿಯಾ, ರಷ್ಯಾ, ಭೂತಾನ, ಬೋಟ್ಸ್ವಾನಾ, ಪಪುವಾ, ನ್ಯೂಗಿನಿಯಾ, ಅಫ್ಘಾನಿಸ್ತಾನ, ನಮೀಬಿಯಾ ಸೇರಿದಂತೆ ಹಲವಾರು ರಾಷ್ಟ್ರಗಳು ನಮ್ಮ ಚುನಾವನಾ ಆಯೋಗಕ್ಕೆ ಇವಿಎಮ್‌ಗಳನ್ನು ನೀಡುವಂತೆ ಪ್ರಸ್ತಾವನೆ ಸಲ್ಲಿಸಿ ಅವುಗಳನ್ನು ಪಡೆದಿರುವುದು ನಮ್ಮ ಚುನಾವಣಾ ಆಯೋಗಕ್ಕೆ ಪಾರದರ್ಶಕದ ಕಾರ್ಯನಿರ್ವಹಣೆಗೆ ಮುಕುಟ ಲಭಿಸಿದಂತೆ ಹೌದಲ್ಲವೇ?. ಹಾಗೂ ವಿಶ್ವಸಂಸ್ಥೆಯ ಖಾಯಂ ಸದಸ್ಯರು ಹಾಗೂ ಜಗತ್ತಿನ 12 ರಾಷ್ಟ್ರಗಳ ಪ್ರತಿನಿಧಿಗಳು ಭಾರತದ ಚುನಾವಣಾ ಆಯೋಗಕ್ಕೆ ಭೇಟಿ ನೀಡಿ ಪಾರದರ್ಶಕ ಹಾಗೂ ಯಶಸ್ವಿ ಚುನಾವಣಾ ಪದ್ಧತಿಯ ಕಾರ್ಯನಿರ್ವಹಣೆಯನ್ನು ಪಡೆದು ತಮ್ಮ ತಮ್ಮ ದೇಶಗಳಲ್ಲಿಯೂ ಇದೇ ರೀತಿ ಚುನಾವಣಾ ಪ್ರಕ್ರಿಯೆ ನಡೆಸಲು ಮಾರ್ಗದರ್ಶಿ ದೇಶವಾಗಿದೆ ಎಂಬುದು ಹೆಮ್ಮೆ ಪಡುವ ವಿಷಯವಾಗಿದೆ.

ಪ್ರತಿ ಚುನಾವಣೆಯು ಸುವ್ಯವಸ್ಥಿತವಾಗಿ ನಡೆದಿರುವುದರ ಶ್ರೇಯಸ್ಸು ಹಲವಾರು ಚುನಾವಣಾ ಆಯುಕ್ತರಿಗೆ ಸಲ್ಲುತ್ತದೆ. ಆ ಪೈಕಿ ಟಿ.ಎನ್.ಶೇಷನ್ ಅವರು ಚುನಾವಣಾ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆಯನ್ನು ತರುವಲ್ಲಿ ಮುಂದಾದವರು. ಟಿ.ಎನ್ ಶೇಷನ್ ಅವರು ಹತ್ತನೇಯ ಭಾರತದ ಚುನಾವಣಾ ಆಯುಕ್ತರಾಗಿದ್ದರು. ಡಿಸೆಂಬರ್ 1990 ರಿಂದ ಡಿಸೆಂಬರ್ 1996 ವರೆಗೆ ಪಿ.ವಿ.ನರಸಿಂಹರಾವ್, ಅಟಲ್ ಬಿಹಾರಿ ವಾಜಪೇಯ್ ಹಾಗೂ ಎಚ್.ಡಿ.ದೇವೇಗೌಡ ಅವರು ಪ್ರಧಾನ ಮಂತ್ರಿಯಾಗಿದ್ದ ಅವಧಿಯಲ್ಲಿ ಆಯುಕ್ತರಾಗಿ ಸೇವೆ ಸಲ್ಲಿಸಿದ್ದಾರೆ. ವಿ.ಎಸ್ ರಮಾದೇವಿ ಅವರ ನಂತರ ಹಾಗೂ ಎಮ್. ಎಸ್. ಗಿಲ್ ಅವರ ಮುಂಚೆ ಆರು ವರ್ಷಗಳ ಕಾಲ ಭಾರತದ ಚುನಾವಣಾ ಪ್ರಕ್ರಿಯೆಯಲ್ಲಿ ಪಾರದರ್ಶಕ ಹಾಗೂ ದಕ್ಷತೆಯನ್ನು ಇಮ್ಮಡಿಗೊಳಿಸುವಲ್ಲಿ ಪರಮಪಾತ್ರವನ್ನು ವಹಿಸಿದ್ದಾರೆ. ಇವರು ಹದಿನೆಂಟನೇ ಕ್ಯಾಬಿನೆಟ್ ಸೆಕ್ರೆಟರಿಯಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಟಿ.ಎನ್.ಶೇಷನ್ ಡಿಸೆಂಬರ್ 15, 1932ರಲ್ಲಿ ಕೇರಳದ ಪಾಲಕ್ಕಾಡ್ 'ತಿರುನೆಲ್ಲೈ' ಎಂಬಲ್ಲಿ ಜನಿಸಿದರು. ಇವರು ತಮಿಳು ಮಾತನಾಡುವ ಅಯ್ಯರ್ ಕುಟುಂಬದಲ್ಲಿ ಜನಿಸಿದರು. ತಮಿಳುನಾಡಿನ ತಂಜಾವೂರು ಇವರ ಮೂಲ ಊರು ಆದರೂ, ತಿರುನೆಲ್ಲೈಯಲ್ಲಿ ವಾಸಿಸಿದರು. ಮದ್ರಾಸ್ ಕ್ರಿಶ್ಚಿಯನ್ ಕಾಲೇಜ್‌ನಲ್ಲಿ ಅಭ್ಯಾಸ ಮಾಡಿದರು. ಹಾಗೂ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಅಭ್ಯಾಸ ಮಾಡಿದರು.

### ಟಿ.ಎನ್.ಶೇಷನ್ ಅವರ ಸೇವೆ:

ಶೇಷನ್ ಭಾರತೀಯ ನಾಗರಿಕ ಸೇವೆ ಸೇರಲು ಬಯಸಿದರು. ಪ್ರಥಮವಾಗಿ ಭಾರತೀಯ ಪೊಲೀಸ್ ಸೇವೆಯನ್ನು 1953ರಲ್ಲಿ ಸೇರಿದರು. ನಂತರ ಮುಂದಿನ ವರ್ಷ 'ಭಾರತೀಯ ನಾಗರಿಕ ಸೇವೆ' ಪರೀಕ್ಷೆಗೆ ಕುಳಿತು ಆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ 1955ರಲ್ಲಿ ಐಎಎಸ್ ವೃತ್ತಿಗೆ ಸೇರಿದರು. ಇವರು ಹಲವಾರು ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದಾರೆ. ಪರಮಾಣು ಶಕ್ತಿ ಇಲಾಖೆಯ ನಿರ್ದೇಶಕರಾಗಿ, ಬಾಹ್ಯಾಕಾಶ ಇಲಾಖೆಯ ಜಂಟಿ ಕಾರ್ಯದರ್ಶಿಯಾಗಿ, ತಮಿಳುನಾಡಿನ ಕೃಷಿ ಇಲಾಖೆಯ ಕಾರ್ಯದರ್ಶಿ, ಬಾಹ್ಯಾಕಾಶ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಯಾಗಿ, ರಕ್ಷಣಾ ಇಲಾಖೆಯ ಕಾರ್ಯದರ್ಶಿಯಾಗಿ, ಆಂತರಿಕ ಸಂರಕ್ಷಣೆಯ ಕಾರ್ಯದರ್ಶಿಯಾಗಿ ವಿಭಿನ್ನ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದರು. ಕ್ಯಾಬಿನೆಟ್ ಸೆಕ್ರೆಟರಿಯಾಗಿ ಕರ್ತವ್ಯ ನಿರ್ವಹಿಸಿದರೂ ಅವರು ಕೇಂದ್ರ ಚುನಾವಣಾ ಆಯೋಗದ ಆಯುಕ್ತರಾಗಿ ಹೆಸರುವಾಸಿಯಾದರು. ಒಮ್ಮೆ 1997ರಲ್ಲಿ ಭಾರತದ ರಾಷ್ಟ್ರಪತಿ ಚುನಾವಣೆಯಲ್ಲಿ ಕೆ.ಆರ್.ನಾರಾಯಣ್ ವಿರುದ್ಧ ಸ್ಪರ್ಧಿಸಿದ್ದರು. ಆದರೆ ಪರಾಭವಗೊಂಡರು.



**ಪ್ರತಿ ಚುನಾವಣೆಯು ಸುವ್ಯವಸ್ಥಿತವಾಗಿ ನಡೆದಿರುವುದರ ಶ್ರೇಯಸ್ಸು ಹಲವಾರು ಚುನಾವಣಾ ಆಯುಕ್ತರಿಗೆ ಸಲ್ಲುತ್ತದೆ. ಆ ಪೈಕಿ ಟಿ.ಎನ್.ಶೇಷನ್ ಅವರು ಚುನಾವಣಾ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆಯನ್ನು ತರುವಲ್ಲಿ ಮುಂದಾದವರು. ಟಿ.ಎನ್ ಶೇಷನ್ ಅವರು ಹತ್ತನೇಯ ಭಾರತದ ಚುನಾವಣಾ ಆಯುಕ್ತರಾಗಿದ್ದರು. ಡಿಸೆಂಬರ್ 1990 ರಿಂದ ಡಿಸೆಂಬರ್ 1996 ವರೆಗೆ ಪಿ.ವಿ.ನರಸಿಂಹರಾವ್, ಅಟಲ್ ಬಿಹಾರಿ ವಾಜಪೇಯ್ ಹಾಗೂ ಎಚ್.ಡಿ.ದೇವೇಗೌಡ ಅವರು ಪ್ರಧಾನ ಮಂತ್ರಿಯಾಗಿದ್ದ ಅವಧಿಯಲ್ಲಿ ಆಯುಕ್ತರಾಗಿ ಸೇವೆ ಸಲ್ಲಿಸಿದ್ದಾರೆ.**





downloaded from: www.kpscvaani.com



**ಶೇಷನ್ ಅವರ ಪ್ರಧಾನ ಸಾಧನೆಗಳು:**

- ಚುನಾವಣಾ ಪ್ರಕ್ರಿಯೆಯಲ್ಲಿ ಕ್ರಾಂತಿಕಾರಕ ಕ್ರಮಗಳನ್ನು ಹಾಗೂ ಹಲವಾರು ದುಷ್ಕೃತ್ಯ ಚಟುವಟಿಕೆಗಳಿಗೆ ಮಂಗಳ ಹಾಡಿದರು. ಅವರು ಕೈಗೊಂಡ ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ್ದಾರೆ.
- ಚುನಾವಣಾ ನೀತಿ–ಸಂಹಿತೆಯ ಕಟ್ಟುನಿಟ್ಟಾದ ಅನುಷ್ಠಾನ
- ಚುನಾವಣೆ ಅಭ್ಯರ್ಥಿಗಳಿಗೆ ಚುನಾವಣೆ ವೆಚ್ಚದಲ್ಲಿ ಕಡಿವಾಣ ಹಾಗೂ ಕಡ್ಡಾಯವಾಗಿ ಲೆಕ್ಕ ನೀಡುವುದು
- ಪ್ರಗತಿದಾಯಕ ಹಾಗೂ ಪಾರದರ್ಶಕ 'ಇವಿಎಮ್'ಗಳನ್ನು ಪ್ರಥಮಬಾರಿಗೆ ಬಳಕೆ
- ಚುನಾವಣೆಯ ಸಮಯದಲ್ಲಿ ಮದ್ಯಪಾನ ನಿಷೇಧ
- ಮತದಾನದಲ್ಲಿ ಆಮಿಷಗಳಿಗೆ ಕಡಿವಾಣ
- ಚುನಾವಣಾ ಪ್ರಚಾರದಲ್ಲಿ ನಿಗದಿತ ವಾಹನಗಳ ಬಳಕೆ ಹಾಗೂ ಸರ್ಕಾರಿ ವಾಹನಗಳ ಬಳಕೆ ನಿಷೇಧ
- ಜಾತಿ ಹಾಗೂ ಧರ್ಮದ ಆಧಾರದ ಮೇಲೆ ಪಕ್ಷಪಾತಕ್ಕೆ ಅವಕಾಶವಿಲ್ಲ.
- ಯಾವುದೇ ಅನುಮತಿಯಿಲ್ಲದೆ ಧ್ವನಿವರ್ಧಕಗಳ ಬಳಕೆಗೆ ಅವಕಾಶವಿಲ್ಲ.
- ವೈಯಕ್ತಿಕ ಟೀಕೆ ನಿಷೇಧ ಹಾಗೂ ಪೂಜಾ ಸ್ಥಳಗಳ ಬಳಕೆ ನಿಷೇಧ

ಭಾರತದ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತರಾಗಿ ಸಾಕಷ್ಟು ಮತದಾನದ ಸುಧಾರಣೆಗಳನ್ನು ಹಾಗೂ ಭಾರತೀಯ ಚುನಾವಣಾ ಆಯೋಗದ ದಕ್ಷತೆ ಕರ್ತವ್ಯ ಹಾಗೂ ನಿಷ್ಠತೆಯನ್ನು ಇಮ್ಮಡಿಗೊಳಿಸಿದರು. ಮತದಾನದ ಅರಾಜಕತೆಯನ್ನು, ನಕಲಿ ಮತದಾನದ ಅವ್ಯವಸ್ಥೆಯನ್ನು ಶಮನ ಮಾಡಲಿಕ್ಕೆ ಸಿಂಹಸ್ವಪ್ನ ಪರಿಹಾರಗಳನ್ನು ತಂದು ಯಶಸ್ವಿಯಾದರು. ಅಧಿಕ ಪ್ರಮಾಣದ ಮತದಾನ ಆಗುವಂತೆ ಅನೇಕ ಪ್ರಗತಿಪರ ನಿಯಮಗಳನ್ನು ತರುವಲ್ಲಿ ಸಾಕಷ್ಟು ಆಘಾತಕಾರಿ ದ್ವೇಷದ ಪ್ರತಿಕಾರವನ್ನು ಅನುಭವಿಸಿದರು. ಅನಕ್ಷರಸ್ಥ ಜನರಲ್ಲಿ ಮತದಾನದ ಜಾಗೃತಿಯನ್ನು ಹೆಚ್ಚಿಸಿದರು. ಅವರ ಹೆಸರು ಚುನಾವಣೆ ಪಾರದರ್ಶಕ ಮತ್ತು ದಕ್ಷವಾಗಿ ನಿರ್ವಹಣೆ ಮಾಡುವಲ್ಲಿ ಏಕಸ್ವಾಮ್ಯದ ಪರಮ ಪಾತ್ರ ವಹಿಸಿದರು. ಟಿ.ಎನ್.ಶೇಷನ್ ಸ್ವಚ್ಛವಾದ, ಭ್ರಷ್ಟರಹಿತ ಹಾಗೂ ಭಯರಹಿತ ಚುನಾವಣೆಗಳನ್ನು ನಡೆಸುವುದರಲ್ಲಿ ತಮ್ಮ ಅಧಿಕಾರವನ್ನು ಪ್ರಶಂಸನೀಯವಾಗಿ ನಿರ್ವಹಿಸಿದ್ದಾರೆ.

ಡಿಸೆಂಬರ್12, 1990ರಂದು ಮುಖ್ಯ ಚುನಾವಣಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ಟಿ.ಎನ್.ಶೇಷನ್ ತಮ್ಮ ಕಾರ್ಯವೈಖರಿಯಿಂದ ಟೀಕೆಗೆ ಒಳಗಾದರು. ದಕ್ಷತೆ ಮತ್ತು ದರ್ಪಕ್ಕೆ ಹೆಸರಾಗಿದ್ದ ಇವರು ನಿರಂಕುಶ ರೀತಿಯಲ್ಲಿ ಕೆಲವು ತೀರ್ಮಾನಗಳನ್ನು ತೆಗೆದುಕೊಂಡದ್ದು ವಾದ–ವಿವಾದಗಳಿಗೆ ಒಳಗಾದವು. ಆಗಸ್ಟ್ 2, 1993ರಂದು ನಿಗಧಿಪಡಿಸಿದ ಎಲ್ಲ ಲೋಕಸಭಾ ಮತ್ತು ರಾಜ್ಯ ಶಾಸಕಾಂಗಗಳ ಉಪಚುನಾವಣೆಗಳನ್ನು ಅನಿರ್ದಿಷ್ಟ ಕಾಲ ಮುಂದೂಡಿ 324(6)ನೇ ವಿಧಿ ಅನ್ವಯ ಚುನಾವಣಾ ಸಮಯದಲ್ಲಿ ಚುನಾವಣಾ ಆಯೋಗಕ್ಕೆ ನಿಯೋಜಿಸಲ್ಪಡುವ ನಾಗರಿಕ ಮತ್ತು ಪೊಲೀಸ್ ಅಧಿಕಾರಿಗಳನ್ನು ಇದರ ನಿಯಂತ್ರಣಕ್ಕೆ ಒಳಪಡಿಸುವವರೆಗೂ ಚುನಾವಣೆಗಳನ್ನು ನಡೆಸುವುದಿಲ್ಲ ಎಂದು ಘೋಷಿಸಿದರು. ಈ ಹಿನ್ನೆಲೆಯಲ್ಲಿ ಇವರನ್ನು ಪದಚ್ಯುತಿಗೊಳಿಸುವಂತೆ ಅನೇಕ ಪಕ್ಷಗಳು 1993ರಲ್ಲಿ ಒತ್ತಾಯ ಮಾಡಿದವು. ಅಟಾರ್ನಿ ಜನರಲ್ ಮಿಲನ್ ಬ್ಯಾನರ್ಜಿ ಆಗಸ್ಟ್ 4, 1993 ರಂದು ಲೋಕಸಭೆಯಲ್ಲಿ ಸ್ಪಷ್ಟೀಕರಣ ನೀಡಿದರು. ಸರ್ಕಾರಿ ಅಧಿಕಾರಿಗಳು ಚುನಾವಣಾ ಕರ್ತವ್ಯಗಳನ್ನು ನಿರ್ವಹಿಸುವಾಗ ಅವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲು ಚುನಾವಣಾ ಆಯೋಗಕ್ಕೆ ಅಧಿಕಾರವಿಲ್ಲ ಎಂದರು.

ಭಾರತದ ಚುನಾವಣೆಯ ಆಯೋಗದಲ್ಲೇ ಅತಿ ಪಾರದರ್ಶಕವಾಗಿ ಚುನಾವಣೆ ನಡೆಸಿದ ಕೀರ್ತಿ ಟಿ.ಎನ್.ಶೇಷನ್ ಅವರಿಗೆ ಸಲ್ಲುತ್ತದೆ. ದೇಶದ ಪ್ರತಿಯೊಬ್ಬ ಮತದಾರನಿಗೆ ಗುರುತಿನ ಚೀಟಿ ಕಡ್ಡಾಯ ಎಂಬ ನಿಯಮವನ್ನು ಜಾರಿಗೆ ತಂದಿದ್ದು ಅವರೇ. ಇಂದು ಚುನಾವಣಾ ಆಯೋಗವು ಒಂದು ಪ್ರಬಲ ಸಂಸ್ಥೆಯಾಗಿ ರೂಪುಗೊಳ್ಳಲು ಪ್ರಮುಖ ಕಾರಣರೆಂದರೆ ಟಿ.ಎನ್.ಶೇಷನ್. ಈ ಚುನಾವಣಾ ಪ್ರಕ್ರಿಯೆ ಇತಿಹಾಸದಲ್ಲಿ ಸುಕುಮಾರ್ ಸೇನ್ ಪ್ರಥಮ ಮುಖ್ಯ ಚುನಾವಣಾಧಿಕಾರಿಯಾಗಿ ಸೇವೆ ಸಲ್ಲಿಸಿದ ನಂತರ ಕೆ.ವಿ.ಕೆ.ಸುಂದರಂ ಅವರು ಅತಿ ದೀರ್ಘಾವಧಿ ಆಯುಕ್ತರಾದರು. ವಿ.ಎಸ್.ರಮಾದೇವಿಯವರು ಪ್ರಥಮ ಮಹಿಳಾ ಆಯುಕ್ತರಾಗಿದ್ದರು. ಹಾಗೆ ಪ್ರಸ್ತುತ 23ನೇ ಮುಖ್ಯ ಚುನಾವಣಾ ಆಯುಕ್ತರಾಗಿ ಸುನಿಲ್ ಅರೋರಾ ಅವರು ಡಿಸೆಂಬರ್ 2 2018 ರಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ.

ಚುನಾವಣಾ ಆಯೋಗವನ್ನು 1950 ಜನವರಿ 25 ರಂದು ಸಂವಿಧಾನದ 324ನೇ ವಿಧಿಯನ್ವಯ ಸ್ಥಾಪಿಸಲಾಯಿತು. ಕೇಂದ್ರ ಚುನಾವಣಾ ಆಯೋಗವು 2010 ಜನವರಿ 25 ರಂದು ವಜ್ರಮಹೋತ್ಸವವನ್ನು ಆಚರಿಸಿಕೊಂಡಿತು. ಹೀಗೆ 2019 ಏಪ್ರಿಲ್–ಮೇ ನಲ್ಲಿ ನಡೆಯುವ ಈ ಚುನಾವಣೆ 17 ನೇ ಲೋಕಸಭಾ ಚುನಾವಣೆ. ಆದರೆ ಟಿ.ಎನ್.ಶೇಷನ್ ಅವರಂತೆ ಆಮೂಲಾಗ್ರ ಬದಲಾವಣೆಯನ್ನು ತಂದ ಆಯುಕ್ತರು ಅಪರೂಪ. ಫಿಲಿಪ್ಪೈನ್ಸ್ ದೇಶವು ಶ್ರೇಷ್ಠ ಸಾರ್ವಜನಿಕ ಸೇವೆಗೈದ ಮಹನೀಯರರಿಗೆ ನೀಡುವ 'ಮ್ಯಾಗ್ಸೆಸೆ' ಪ್ರಶಸ್ತಿಯು ಟಿ.ಎನ್ ಶೇಷನ್ ಅವರಿಗೆ ಲಭಿಸಿದೆ. ಇಂಥವರ ಸೇವೆ ಇತರರಿಗೆ ಮಾದರಿಯಾಗಲಿ, ಅನುಕರಣೀಯವಾಗಲಿ.








downloaded from: www.kpscvaani.com



# ಜನಸ್ನೇಹಿ ಮತಗಟ್ಟೆಗಳ ಸ್ಥಾಪನೆ

ಹರ್ಷಿತಾ ಶಿವಣ್ಣ

**ದೇ**ಶದಾದ್ಯಂತ 17 ನೇ ಲೋಕಸಭಾ ಚುನಾವಣೆಗೆ ಸಿದ್ಧತೆಗಳು ಭರದಿಂದ ಸಾಗಿದೆ. 2014 ರಲ್ಲಿ 81.5 ಕೋಟಿ ಇದ್ದ ಮತದಾರರ ಸಂಖ್ಯೆ 2019 ನೇ ಚುನಾವಣೆಗೆ 90 ಕೋಟಿಗೆ ಏರಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ 54,265 ಮತಗಟ್ಟೆಯನ್ನು ಸ್ಥಾಪಿಸಲಾಗಿತ್ತು, ಮತದಾರರ ಏರಿಕೆಗೆ ಅನುಗುಣವಾಗಿ ಮತಗಟ್ಟೆಯನ್ನು ಹೆಚ್ಚಿಸಲಾಗಿದ್ದು, ಪ್ರಸಕ್ತ ಚುನಾವಣೆಗೆ 58,186 ಮತಗಟ್ಟೆಯನ್ನು ಸ್ಥಾಪಿಸಲಾಗುತ್ತಿರುವುದರಿಂದ ಶೇಕಡ 7 ರಷ್ಟು ಮತಗಟ್ಟೆಗಳು ಹೆಚ್ಚಳವಾಗಲಿದೆ. ಏಳು ಹಂತಗಳಲ್ಲಿ ನಡೆಯಲಿರುವ 2019 ರ ಲೋಕಸಭಾ ಚುನಾವಣೆಗೆ ದೇಶದಾದ್ಯಂತ ಒಟ್ಟು 39.6 ಲಕ್ಷ ವಿದ್ಯುನ್ಮಾನ ಮತಯಂತ್ರಗಳನ್ನು ಹಾಗೂ 17.4 ಲಕ್ಷ ವಿ.ವಿ.ಪ್ಯಾಟ್ ಯಂತ್ರಗಳನ್ನು ಬಳಸಲಾಗುತ್ತಿದೆ.

ಚುನಾವಣೆ ಎಂದ ಮೇಲೆ ಮತದಾನ ಮಾಡುವ ಸಲುವಾಗಿ ಮತಗಟ್ಟೆಗಳು ಇರಲೇಬೇಕು. ಮತಗಟ್ಟೆಗಳನ್ನು ಸ್ಥಾಪಿಸುವುದು ಚುನಾವಣಾ ಆಯೋಗದ ಮುಖ್ಯ ಜವಾಬ್ದಾರಿಯಾಗಿರುತ್ತದೆ. ದೇಶದ ಒಟ್ಟು 543 ಲೋಕಸಭಾ ಕ್ಷೇತ್ರಗಳಿಗೆ 10.35 ಲಕ್ಷ ಮತಗಟ್ಟೆಗಳನ್ನು ತೆರೆಯಲು ಉದ್ದೇಶಿಸಲಾಗಿದ್ದು, ರಾಜ್ಯದ ಒಟ್ಟು 28 ಕ್ಷೇತ್ರಗಳಿಗೆ 58186 ಸಾವಿರ ಮತಗಟ್ಟೆಗಳನ್ನು ಸ್ಥಾಪಿಸಲಾಗುತ್ತಿದೆ.

ಸಾಮಾನ್ಯವಾಗಿ ಶಾಲಾ ಕಾಲೇಜುಗಳು, ಗ್ರಾಮಪಂಚಾಯತಿ ಕಚೇರಿಗಳು, ಸರ್ಕಾರಿ ಕಚೇರಿಗಳಲ್ಲಿ ಮತಗಟ್ಟೆಯನ್ನು ತೆರೆಯಲಾಗುತ್ತದೆ. ಹಾಗಾಗಿ ಚುನಾವಣೆಯನ್ನು ಆದಷ್ಟು ಶಾಲಾ ಕಾಲೇಜುಗಳಿಗೆ ರಜೆ ಇರುವ ಸಮಯವನ್ನೇ ನೋಡಿ ನಿಗದಿಪಡಿಸಲಾಗುತ್ತದೆ. ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯವರು ಈ ಕುರಿತು ರಾಜ್ಯ ಮುಖ್ಯ ಚುನಾವಣಾಧಿಕಾರಿಗಳಿಂದ ಮಾಹಿತಿಯನ್ನು ಪಡೆದುಕೊಳ್ಳುತ್ತಾರೆ.

ಮತಗಟ್ಟೆಗೆ ಆಯ್ಕೆಮಾಡಿಕೊಳ್ಳುವ ಕಟ್ಟಡವು ಸುಸ್ಥಿತಿಯಲ್ಲಿದ್ದು, ಅಲ್ಲಿ ಶೌಚಾಲಯ, ಕುಡಿಯುವ ನೀರು, ವಿದ್ಯುತ್, ದೂರವಾಣಿ ಸಂಪರ್ಕ, ಅಂಗವಿಕಲರು ಮತ್ತು ವೃದ್ಧರಿಗಾಗಿ ಇಳಿಜಾರು ದಾರಿ ವ್ಯವಸ್ಥೆ ಇವೇ ಮುಂತಾದ ಮೂಲಭೂತ ಸೌಕರ್ಯಗಳು ಇರುವುದನ್ನು ಖಚಿತ ಪಡಿಸಿಕೊಳ್ಳಲಾಗುತ್ತದೆ. ಚುನಾವಣಾ ಆಯೋಗದ ನಿಯಮದಂತೆ ಮತದಾರನ ಮನೆಗೆ ಕನಿಷ್ಠ 2 ಕಿಲೋ ಮೀಟರ್ ಅಂತರದೊಳಗೆ ಇರುವಂತೆ ಮತಗಟ್ಟೆಯನ್ನು ಸ್ಥಾಪಿಸಲಾಗುವುದು. ಹಿಂದೆ ಕಿಲೋ ಮೀಟರ್‌ಗಟ್ಟಲೆ ದೂರದಲ್ಲಿ ಮತಗಟ್ಟೆಯನ್ನು ಸ್ಥಾಪಿಸಲಾಗುತ್ತಿದ್ದರಿಂದ ಮತದಾರನಿಗೆ ಮತದಾನ ಮಾಡಲು ಅನಾನುಕೂಲವಾಗುತ್ತಿದ್ದುದನ್ನು ಮನಗಂಡ ಚುನಾವಣಾ ಆಯೋಗವು ಮತದಾರರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಮತದಾರನಿಗೆ ಹತ್ತಿರದಲ್ಲೇ ಮತಗಟ್ಟೆಯನ್ನು ಸ್ಥಾಪಿಸುವ ವ್ಯವಸ್ಥೆಯನ್ನು ಮಾಡಿಕೊಂಡಿತು. ಅಲ್ಲದೆ ಚುನಾವಣೆಯಿಂದ ಚುನಾವಣೆಗೆ ಸುಧಾರಣಾ ಕ್ರಮಗಳನ್ನು ಕೈಗೊಳ್ಳುತ್ತಲೇ ಇರುವ ಕೇಂದ್ರ ಚುನಾವಣಾ ಆಯೋಗವು ಮತದಾರನ ಮನೆ ಬಾಗಿಲಿಗೆ ಮತದಾನ ಪ್ರಕ್ರಿಯೆ ಹಾಗು ಇತರ ವಿವರಗಳ ಮಾರ್ಗಸೂಚಿ ಕೈಪಿಡಿಯನ್ನು ತಲುಪಿಸುತ್ತಿದೆ.

ಪ್ರತಿ ಚುನಾವಣೆಯಲ್ಲೂ ಮತಗಟ್ಟೆಯನ್ನು ಬದಲಾಯಿಸದೇ ಅದೇ ಮತಗಟ್ಟೆಯನ್ನು ಮುಂದುವರೆಸಿಕೊಂಡು ಹೋಗುತ್ತಿರುವುದರಿಂದ ಬಹುಪಾಲು ಮತದಾರರಿಗೆ ತಮ್ಮ ಮತಗಟ್ಟೆಯ ಪರಿಚಯ ಇದ್ದೇ ಇರುತ್ತದೆ. ಇದು ಕೂಡ ಮತದಾರರಿಗೆ ಮತದಾನ ಮಾಡಲು ಅನುಕೂಲವಾಗುತ್ತಿದೆ.

ಮತಗಟ್ಟೆಗಳನ್ನು ಸ್ಥಾಪಿಸಿದ ನಂತರ ಜಿಲ್ಲಾಧಿಕಾರಿಗಳು ಪೊಲೀಸ್ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ, ಸಾಮಾನ್ಯ, ಸೂಕ್ಷ್ಮ, ಅತಿಸೂಕ್ಷ್ಮ ಎಂದು ಮೂರು ವಿಭಾಗಗಳಲ್ಲಿ ಮತಗಟ್ಟೆಯನ್ನು ವರ್ಗೀಕರಿಸುತ್ತಾರೆ. ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಮತಗಟ್ಟೆಗಳಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುಂಜಾಗ್ರತಾ ಕ್ರಮವಾಗಿ ಭದ್ರತೆಗೆ ಹೆಚ್ಚಿನ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸುತ್ತಾರೆ.

ಮತಗಟ್ಟೆಯಲ್ಲಿ ಮತದಾನ ಸುಗಮವಾಗಿ ನಡೆಯಬೇಕಾದರೆ ಮತಗಟ್ಟೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯ ಪಾತ್ರ ಅತ್ಯಂತ ಪ್ರಮುಖವಾಗಿರುತ್ತದೆ. ಒಂದು ಸಣ್ಣ ಪ್ರಮಾದವಾದರೂ ಮರು ಮತದಾನಕ್ಕೆ ಕಾರಣವಾಗುತ್ತದೆ. ಆದ್ದರಿಂದ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗುತ್ತದೆ.

ಅವರು ಮತಗಟ್ಟೆಯ ಸ್ಥಳಕ್ಕೆ ಮತದಾನದ ಹಿಂದಿನ ರಾತ್ರಿಯೇ ಆಗಮಿಸಿ ಮತದಾನಕ್ಕೆ ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳುತ್ತಾರೆ. ಮತಗಟ್ಟೆಯ ಕಟ್ಟಡದಲ್ಲಿ ಯಾವುದಾದರೂ ಪಕ್ಷದ ಚಿಹ್ನೆ ಅಥವಾ ಭಾವಚಿತ್ರಗಳಿದ್ದರೆ ತೆಗೆದುಹಾಕುತ್ತಾರೆ.

ಪ್ರಿಸೈಡಿಂಗ್ ಅಧಿಕಾರಿಗಳು ಮತ ಯಂತ್ರದ ಉಸ್ತುವಾರಿಯ ಜೊತೆಗೆ ಸರಿಯಾದ ವೇಳೆಗೆ ಮತಗಟ್ಟೆಯನ್ನು ತೆರೆಯುವ ಮತ್ತು ಮುಚ್ಚುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಮತಗಟ್ಟೆಯನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವ ಜೊತೆಗೆ ಮತದಾರರು, ಅಭ್ಯರ್ಥಿಗಳು, ಏಜೆಂಟರು, ಹಾಗೂ ಮತ್ತಿತರೊಂದಿಗೆ ಸಂಯಮದಿಂದ ವರ್ತಿಸಬೇಕು. ಮತದಾನದ ದಿನದಂದು ಬೆಳಗ್ಗೆ 6 ಗಂಟೆಗೆ ಏಜೆಂಟ್ ಅವರ ಸಮ್ಮುಖದಲ್ಲಿ ಮೂರು ಬಾರಿ ಅಣುಕು ಮತದಾನವನ್ನು ಮಾಡಿ, ಅಣುಕು ಮತದಾನದ ದೃಢೀಕರಣವನ್ನು ಭರ್ತಿ ಮಾಡಿ ಹಾಜರಿರುವ ಏಜೆಂಟರ ಸಹಿ ಪಡೆದು ಸೆಕ್ಟರ್ ಅಧಿಕಾರಿಗಳಿಗೆ ನೀಡುತ್ತಾರೆ. ಆ ನಂತರವಷ್ಟೇ ಬೆಳಗ್ಗೆ 7 ಗಂಟೆಗೆ ಮತದಾನ ಪ್ರಕ್ರಿಯೆ ಪ್ರಾರಂಭಿಸಲಾಗುತ್ತದೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ದೇಶದಲ್ಲೇ ಮೊದಲ ಬಾರಿಗೆ ಮಹಿಳಾ ಮತದಾರರು ಹೆಚ್ಚಾಗಿರುವ ಮತಗಟ್ಟೆಗಳಲ್ಲಿ ಮಹಿಳಾ ಮತದಾರರನ್ನು ಮತದಾನಕ್ಕೆ ಸೆಳೆಯಲು ಸಖಿ ಪಿಂಕ್ ಮತಗಟ್ಟೆಗಳನ್ನು ಸ್ಥಾಪಿಸಲಾಗಿತ್ತು. ಅಂದುಕೊಂಡಂತೆ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಮತದಾರರನ್ನು ಮತದಾನಕ್ಕೆ ಸೆಳೆಯುವಲ್ಲಿ ಯಶಸ್ವಿಯಾಗಿತ್ತು. ಆದರೆ ತೆಲಂಗಾಣ ಮತ್ತು ಆಂಧ್ರಪ್ರದೇಶದಲ್ಲಿರುವ ಟಿಆರ್‌ಎಸ್ ಪಕ್ಷದ ಚಿಹ್ನೆಯ ಬಣ್ಣ ಪಿಂಕ್ ಇರುವುದರಿಂದ ಈ ಬಾರಿಯ ಮಹಿಳಾ ಮತಗಟ್ಟೆಗಳಿಗೆ ಪಿಂಕ್ ಬಣ್ಣವನ್ನು ಹಾಕಲಾಗುವುದಿಲ್ಲ ಎಂದು ಮುಖ್ಯ ಚುನಾವಣಾಧಿಕಾರಿಗಳು ತಿಳಿಸಿದ್ದಾರೆ. ಈ ಸಖಿ ಮತಗಟ್ಟೆಯಲ್ಲಿ ಭದ್ರತಾ ಕಾರ್ಯನಿರ್ವಹಿಸುವವರಿಂದ ಹಿಡಿದು ಅಧಿಕಾರಿ ಮತ್ತು ಸಿಬ್ಬಂದಿಗಳು ಮಹಿಳೆಯರೇ ಆಗಿರುತ್ತಾರೆ. ಒಟ್ಟಿನಲ್ಲಿ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಪಿಂಕ್ ಮತಗಟ್ಟೆಗಳು ಸಖಿ ಮತಗಟ್ಟೆಗಳಾಗಿ ಕಾರ್ಯನಿರ್ವಹಿಸಲಿವೆ.

ಇದೇ ಮೊದಲ ಬಾರಿಗೆ ಅಂಧ ಮತದಾರರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಚುನಾವಣಾ ಆಯೋಗವು ಬ್ರೈಲ್ ಮತದಾರರ ಚೀಟಿಯನ್ನು ವಿತರಿಸುವ ವ್ಯವಸ್ಥೆಯನ್ನು ಮಾಡಲಿದೆ. ಹಾಗಾಗಿ ದೃಷ್ಟಿ ಚೇತನರು ಯಂತ್ರದ ಮೇಲೆ ನಮೂದಿಸಿರುವ ಬ್ರೈಲ್ ಲಿಪಿಯ ಸಹಾಯದಿಂದ ಅಭ್ಯರ್ಥಿಗಳನ್ನು ಗುರುತಿಸಿ ಮತ ಹಾಕಬಹುದು.

ಅರಣ್ಯದಲ್ಲಿ ವಾಸಿಸುವ ಬುಡಕಟ್ಟು ಜನರು ಮತದಾನದಿಂದ ಹೊರಗುಳಿಯಬಾರದೆಂದು ಕಳೆದ ವಿಧಾನಸಭೆಯಲ್ಲಿ ಕಾಡಿನ ಅಂಚಿನಲ್ಲಿಯೂ ಮತಗಟ್ಟೆಯನ್ನು ತೆರೆಯಲಾಗಿತ್ತು. ಅದೇ ರೀತಿ ಈ ಬಾರಿಯ ಚುನಾವಣೆಗೂ ರಾಜ್ಯ ಮುಖ್ಯ ಚುನಾವಣಾ ಆಯೋಗವು ಸಿದ್ಧತೆಯನ್ನು ಮಾಡಿಕೊಂಡಿದೆ.

ಇನ್ನು ಮತದಾನದ ದಿನ ಮತಗಟ್ಟೆಯ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗುತ್ತದೆ. ಯಾರೂ ಮತಗಟ್ಟೆಯ ಆಸು ಪಾಸಿನಲ್ಲಿ ಗುಂಪು ಗುಂಪಾಗಿ ಸೇರುವಂತಿಲ್ಲ. ಆ ವ್ಯಾಪ್ತಿಯಲ್ಲಿ ವಾಹನ ಚಲಾಯಿಸುವಂತಿಲ್ಲ. ಮತದಾನ ಮಾಡಲು ಬರುವ ಮತದಾರರನ್ನು ಓಲೈಸುವಂತಿಲ್ಲ. ಸಂಜೆ 6 ಕ್ಕೆ ಮತದಾನದ ವೇಳೆ ಮುಗಿದ ನಂತರ ಪ್ರಿಸೈಡಿಂಗ್ ಆಫೀಸರ್ ಅವರು ಮತಗಟ್ಟೆಯನ್ನು ಮುಚ್ಚಿಸಿ, ಮತಯಂತ್ರಗಳನ್ನು ಪೊಲೀಸ್ ಭದ್ರತೆಯಲ್ಲಿ ಚುನಾವಣಾ ಇಲಾಖೆಯು ನಿಗದಿ ಪಡಿಸಿದ ಸ್ಥಳಕ್ಕೆ ಕೊಂಡೊಯ್ದು ಸಂಬಂಧಿಸಿದವರಿಗೆ ಯಂತ್ರಗಳನ್ನು ಒಪ್ಪಿಸುತ್ತಾರೆ. ಅಲ್ಲಿಗೆ ಮತದಾನದ ಪ್ರಕ್ರಿಯೆ ಮುಗಿಯುತ್ತದೆ.

ಈ ರೀತಿಯಲ್ಲಿ ಚುನಾವಣಾ ಆಯೋಗವು ಜನಸ್ನೇಹಿ ಮತಗಟ್ಟೆಗಳನ್ನು ಸ್ಥಾಪಿಸುವ ಮೂಲಕ ಮತದಾರರನ್ನು ಮತಗಟ್ಟೆಗೆ ಆಗಮಿಸಿ ಮತ ಚಲಾಯಿಸುವಂತೆ ಪ್ರೇರೇಪಿಸುತ್ತಿದೆ.



downloaded from: www.kpscvaani.com



# ಚುನಾವಣೆ ಮತ್ತು ನೈತಿಕತೆ

ಶ್ರೀಪುತ್ರ

ಚುನಾವಣಾ ಪ್ರಕ್ರಿಯೆಯು ಪ್ರಜಾತಾಂತ್ರಿಕ ವ್ಯವಸ್ಥೆಯ ಜೀವಾಳ. ಸಂವಿಧಾನದ 324ನೇ ವಿಧಿಯ ಅನ್ವಯ ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಸುವುದು ಕೇಂದ್ರ ಚುನಾವಣಾ ಆಯೋಗದ ಜವಾಬ್ದಾರಿಯಾಗಿದೆ. ಇದಕ್ಕೆ ಪೂರಕವಾಗಿ ನೈತಿಕ ನಡಾವಳಿಯು ನ್ಯಾಯಸಮ್ಮತ ಚುನಾವಣೆಯ ಅತ್ಯಗತ್ಯ ಭಾಗವಾಗಿದೆ. ನಾವು ಪರಿಶ್ರಮ ವಹಿಸಿ ಸಾಧಿಸಲು ಬಯಸುವ ಆದರ್ಶಗಳು ಮತ್ತು ಮತದಾರರ ವರ್ತನೆ ಹೇಗಿರಬೇಕು ಎಂಬುದನ್ನು ಇದು ಒಳಗೊಳ್ಳುತ್ತದೆ. ಆಯಾ ರಾಷ್ಟ್ರದ ಸಾಮಾಜಿಕ ಹಾಗೂ ರಾಜಕೀಯ ಸಂದರ್ಭಗಳನ್ನು ಅವಲಂಬಿಸಿ ನೈತಿಕ ನಡಾವಳಿಯ ಅಳತೆಗೋಲುಗಳು ಭಿನ್ನವಾಗುತ್ತವೆ. ಆದಾಗ್ಯೂ, ಯಾವುದೇ ಚುನಾವಣೆ ವ್ಯವಸ್ಥೆಯು ಮುಕ್ತ ಮತ್ತು ನಿಷ್ಪಕ್ಷಪಾತ ಮತ ಚಲಾವಣೆಗೆ ಅತ್ಯಗತ್ಯವಾದ ಕೆಲವು ಮೂಲಭೂತ ನೈತಿಕ ತತ್ವಗಳನ್ನು ಹೊಂದಿರುತ್ತದೆ.

ಚುನಾವಣಾ ಪ್ರಕ್ರಿಯೆಯಲ್ಲಿ ಭಾಗಿಯಾಗುವ ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು, ಪಕ್ಷಗಳ ಕಾರ್ಯಕರ್ತರು, ಆಡಳಿತಾಧಿಕಾರಿಗಳು, ಸಮೂಹ ಮಾಧ್ಯಮಗಳು, ಸಾಮಾಜಿಕ ಜಾಲತಾಣಗಳು, ಮತದಾರರು ಎಲ್ಲರಿಗೂ ಈ ನೈತಿಕ ನಡಾವಳಿ ಅನ್ವಯವಾಗುತ್ತದೆ. ಈ ಎಲ್ಲವೂ ಸಾರ್ವಜನಿಕ ಒಳಿತಿಗಾಗಿ ಕಾರ್ಯನಿರ್ವಹಿಸಬೇಕೇ ಹೊರತು ವೈಯಕ್ತಿಕ ಲಾಭಕ್ಕೆ ತಮ್ಮ ಸ್ಥಾನಮಾನ ಬಳಸಿಕೊಳ್ಳುವಂತಿಲ್ಲ.

ಭಾರತವೂ ಸೇರಿದಂತೆ ಬಹುತೇಕ ಪ್ರಜಾತಾಂತ್ರಿಕ ರಾಷ್ಟ್ರಗಳು ಈ ನೈತಿಕ ನಡಾವಳಿಯ ತತ್ವಗಳನ್ನು ಚುನಾವಣಾ ನೀತಿ ಸಂಹಿತೆಯ ಚೌಕಟ್ಟಿನ ವ್ಯಾಪ್ತಿಗೆ ಒಳಪಡಿಸಿವೆ. ರಾಜಕೀಯ ಪಕ್ಷಗಳು, ಚುನಾವಣಾ ಅಭ್ಯರ್ಥಿಗಳು, ಕಾರ್ಯಕರ್ತರು, ಏಜೆಂಟರು, ಮತದಾರರು, ಚುನಾವಣಾಧಿಕಾರಿಗಳು, ಮಾಧ್ಯಮಗಳು, ಮೆರವಣಿಗೆ, ಪ್ರಣಾಳಿಕೆ ಹೀಗೆ ಪ್ರತಿಯೊಂದಕ್ಕೂ ಅನ್ವಯವಾಗುವ ನಡಾವಳಿಗಳನ್ನು ಇದರಲ್ಲಿ ಅಳವಡಿಸಲಾಗಿದೆ. ಮತದಾರನಿಗೆ ನಗದು ರೂಪದಲ್ಲಾಗಲೀ, ಕೊಡುಗೆ ರೂಪದಲ್ಲಾಗಲೀ ಯಾವುದೇ ಪ್ರಲೋಭನೆ/ ಆಮಿಷ ಒಡ್ಡಬಾರದು ಎಂಬುದರಿಂದ ಹಿಡಿದು ಮಾಧ್ಯಮಗಳು 'ಕಾಸಿಗಾಗಿ ಸುದ್ದಿ' ಪ್ರಕಟಿಸಿ ಯಾವುದೇ ಒಬ್ಬ ಅಭ್ಯರ್ಥಿ ಅಥವಾ ಒಂದು ಪಕ್ಷಕ್ಕೆ ಅನುಕೂಲ ಮಾಡಿಕೊಡಬಾರದು ಎನ್ನುವವರೆಗೆ ಹಲವಾರು ನಿಯಮಗಳು ಇದರಲ್ಲಿ ಸೇರಿವೆ. ಯಾವುದೇ ಒಬ್ಬ ವ್ಯಕ್ತಿಯು ಹಲವು ಮತದಾರರ ಗುರುತು ಚೀಟಿಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುವುದರ ವಿರುದ್ಧವೂ ಪ್ರಕರಣ ದಾಖಲಿಸಲು ಅವಕಾಶವಿದೆ. ಅಕ್ರಮ ಸಾಧ್ಯತೆಯ ಹೊಸ ಹೊಸ ವಿಧಾನಗಳು ಕಂಡುಬರುತ್ತಿರುವಂತೆ ಅವನ್ನು ತಡೆಯಲು ಹೊಸ ನಿರ್ಬಂಧಗಳು ಕೂಡ ನೀತಿ ಸಂಹಿತೆಗೆ ಸೇರ್ಪಡೆಯಾಗುತ್ತಿವೆ. ಇದರಲ್ಲಿನ ಕೆಲವು ನಿಬಂಧನೆಗಳಿಗೂ ನೈತಿಕತೆಗೂ ಯಾವುದೇ ಸಂಬಂಧ ಇಲ್ಲ. ಅವುಗಳೇನಿದ್ದರೂ ಶಾಂತಿ–ಸುವ್ಯವಸ್ಥೆ ದೃಷ್ಟಿಯಿಂದ ಅಡಕಗೊಂಡಿರುವಂಥವು ಎಂದು ಮೇಲ್ನೋಟಕ್ಕೆ ಅನ್ನಿಸುತ್ತದೆ. ಆದರೆ, ಒಳಹೊಕ್ಕು ನೋಡಿದರೆ ಇಲ್ಲಿನ ಯಾವುದೇ ಅಂಶವನ್ನು ಉಲ್ಲಂಘಿಸಿದರೂ ಅದು ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗೆ ಭಂಗವುಂಟು ಮಾಡಿ ಯಾವುದೇ ಒಂದು ಪಕ್ಷ ಅಥವಾ ಅಭ್ಯರ್ಥಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಹೀಗಾಗಿ, ಇಲ್ಲಿರುವ ಎಲ್ಲಾ ಅಂಶಗಳು ಪ್ರತ್ಯಕ್ಷವಾಗಿಯೋ ಅಥವಾ ಪರೋಕ್ಷವಾಗಿಯೋ ನೈತಿಕತೆಯೊಂದಿಗೆ ತಳಕು ಹಾಕಿಕೊಂಡಿವೆ. ಚುನಾವಣಾ ನೀತಿ ಸಂಹಿತೆಯ ಮುಖ್ಯ ಅಂಶಗಳು ಈ ಕೆಳಕಂಡಂತಿವೆ:

**ಚುನಾವಣಾ ನೀತಿ ಸಂಹಿತೆ**

**ಸಾಮಾನ್ಯ ನಡಾವಳಿಗಳು**

- ಯಾವುದೇ ಪಕ್ಷ ಅಥವಾ ಅಭ್ಯರ್ಥಿಯು ವಿವಿಧ ಜಾತಿಗಳು, ಧಾರ್ಮಿಕ ಸಮುದಾಯಗಳು, ಭಾಷಾ ಸಮುದಾಯಗಳ ನಡುವೆ ಇರುವ ಅಂತರವನ್ನು ಹೆಚ್ಚಿಸುವ ಅಥವಾ ಅವುಗಳ ನಡುವೆ ಪರಸ್ಪರ ದ್ವೇಷ ಹೆಚ್ಚಿಸುವ ಚಟುವಟಿಕೆಗಳನ್ನು ನಡೆಸಬಾರದು.
- ಬೇರೆ ಪಕ್ಷಗಳನ್ನು ಆಯಾ ಪಕ್ಷಗಳ ನೀತಿ, ಕಾರ್ಯಕ್ರಮಗಳು, ಹಿಂದಿನ ದಾಖಲೆಗಳು ಮತ್ತು ಕೆಲಸಗಳ ಆಧಾರದ ಮೇಲೆ ಮಾತ್ರ ಟೀಕಿಸಬೇಕು. ಅಭ್ಯರ್ಥಿಗಳ ಅಥವಾ ಬೇರೆ ಪಕ್ಷಗಳ ಕಾರ್ಯಕರ್ತರ ಸಾರ್ವಜನಿಕ ಚಟುವಟಿಕೆಗಳಿಗೆ ಸಂಬಂಧಪಡದ ಖಾಸಗಿ ಬದುಕಿನ ಸಂಗತಿಗಳನ್ನು ಪ್ರಸ್ತಾಪಿಸಬಾರದು.
- ಮತಗಳನ್ನು ಗಳಿಸುವ ಸಲುವಾಗಿ ಜಾತಿ ಅಥವಾ ಕೋಮು ಆಧಾರದ ಮೇಲೆ ಮತ ಕೇಳಬಾರದು. ದೇವಸ್ಥಾನಗಳು, ಮಸೀದಿಗಳು, ಚರ್ಚ್‌ಗಳು ಸೇರಿದಂತೆ ಯಾವುದೇ ಪೂಜಾ ಸ್ಥಳವನ್ನು ಚುನಾವಣಾ ಪ್ರಚಾರ ತಾಣವಾಗಿ ಬಳಸಿಕೊಳ್ಳಬಾರದು.
- ಚುನಾವಣಾ ನಿಯಮಾವಳಿಯಡಿ ಯಾವ್ಯಾವುದು ಭ್ರಷ್ಟ ಚಟುವಟಿಕೆ ಮತ್ತು ಅಪರಾಧ ಎಂದು ಎನ್ನಿಸಿಕೊಳ್ಳುತ್ತವೆಯೋ ಅಂತಹ ಎಲ್ಲಾ ಚಟುವಟಿಕೆಗಳಿಂದ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಅತ್ಯಂತ ಪ್ರಜ್ಞಾಪೂರ್ವಕವಾಗಿ ದೂರವಿರಬೇಕು. ಮತದಾರರಿಗೆ ಆಮಿಷವೊಡ್ಡುವುದು, ಬೇರೊಬ್ಬರ ಹೆಸರಿನಲ್ಲಿ ಮತ ಹಾಕುವುದು, ಮತಗಟ್ಟೆಯಿಂದ 100 ಮೀಟರ್ ವ್ಯಾಪ್ತಿಯೊಳಗೆ ಪ್ರಚಾರ ಮಾಡುವುದು, ಮತ ಚಲಾವಣೆ ಮುಗಿಯುವ ಮುಂಚಿನ 48 ಗಂಟೆಗಳ ಅವಧಿಯೊಳಗೆ ಸಾರ್ವಜನಿಕ ಸಭೆ ನಡೆಸುವುದು, ಮತದಾರರಿಗೆ ಮತಗಟ್ಟೆಗೆ ಬಂದು ವಾಪಸ್ಸಾಗಲು ಸಾರಿಗೆ ವ್ಯವಸ್ಥೆ ಮಾಡುವುದು ಇತ್ಯಾದಿಗಳನ್ನು ಇದು ಒಳಗೊಳ್ಳುತ್ತದೆ.
- ಪ್ರತಿಯೊಬ್ಬ ವ್ಯಕ್ತಿಯೂ ಮನೆಯಲ್ಲಿ ಶಾಂತಿಯುತ ಮತ್ತು ತೊಂದರೆ ರಹಿತವಾಗಿ ಬದುಕಲು ಹಕ್ಕನ್ನು ಗೌರವಿಸಬೇಕು. ಒಬ್ಬ ವ್ಯಕ್ತಿಯ ನಿಲುವು ಅಥವಾ ಚಟುವಟಿಕೆಗಳ ಬಗ್ಗೆ ಎಷ್ಟೇ ಭಿನ್ನಾಭಿಪ್ರಾಯವಿದ್ದರೂ ಯಾವುದೇ ಸನ್ನಿವೇಶದಲ್ಲೂ ಆತನ/ ಆಕೆಯ ಮನೆಯ ಮುಂದೆ ಪ್ರತಿಭಟನೆಯ ಭಾಗವಾಗಿ ಮೆರವಣಿಗೆ ಅಥವಾ ಪಿಕೆಟಿಂಗ್ ನಡೆಸಬಾರದು.
- ಯಾವುದೇ ಪಕ್ಷ ಅಥವಾ ಅಭ್ಯರ್ಥಿಯು ಖಾಸಗಿ ವ್ಯಕ್ತಿಯ ಜಾಗದಲ್ಲಿ, ಕಟ್ಟಡದಲ್ಲಿ, ಕಾಂಪೌಂಡ್ ಮೇಲೆ ಧ್ವಜ ಕಂಬಗಳನ್ನು ಹಾಕಲು, ಬ್ಯಾನರ್‌ಗಳನ್ನು ತೂಗಿಬಿಡಲು, ನೋಟಿಸ್‌ಗಳನ್ನು ಅಂಟಿಸಲು, ಘೋಷವಾಕ್ಯಗಳನ್ನು ಬರೆಯಲು ತನ್ನ ಬೆಂಬಲಿಗರಿಗೆ ಅವಕಾಶ ಕೊಡಬಾರದು. ಒಂದೊಮ್ಮೆ ಹೀಗೆ ಮಾಡಬೇಕಿದ್ದರೆ ಅದಕ್ಕೆ ಸಂಬಂಧಿಸಿದ ಅಧಿಕಾರಿಗಳ ಪೂರ್ವಾನುಮತಿ ಅತ್ಯಗತ್ಯ.
- ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಬೇರೆ ಪಕ್ಷವು ಏರ್ಪಡಿಸುವ ಯಾವುದೇ ಸಭೆ/ ಮೆರವಣಿಗೆಗಳಿಗೆ ತೊಂದರೆ ಕೊಡಬಾರದು ಅಥವಾ ಅವು ಅರ್ಧದಲ್ಲಿ ನಿಂತುಹೋಗುವ ಪರಿಸ್ಥಿತಿ ಉಂಟು ಮಾಡಬಾರದು. ಯಾವುದೇ ಪಕ್ಷವೊಂದರ ಕಾರ್ಯಕರ್ತರು ಅಥವಾ ಪಕ್ಷದ ಪರ ಒಲವುಳ್ಳವರು ಬೇರೊಂದು ಪಕ್ಷದವರು ಏರ್ಪಡಿಸುವ ಸಾರ್ವಜನಿಕ ಸಭೆಗಳಲ್ಲಿ ಮೌಖಿಕವಾಗಿ ಅಥವಾ ಲಿಖಿತವಾಗಿ ಪ್ರಶ್ನೆ ಕೇಳುವ ಮೂಲಕ ಅಥವಾ ತಮ್ಮ ಪಕ್ಷದ ಕರಪತ್ರಗಳನ್ನು ಹಂಚುವ ಮೂಲಕ ತೊಂದರೆ ಮಾಡಬಾರದು. ಯಾವುದೇ ಪಕ್ಷವು ಬೇರೊಂದು ಪಕ್ಷವು ಸಭೆ ಏರ್ಪಡಿಸಿರುವ ಜಾಗಗಳ ಮೂಲಕ ಮೆರವಣಿಗೆಗಳನ್ನು ನಡೆಸಬಾರದು.

**ಸಭೆಗಳು**

- ಯಾವುದೇ ಪಕ್ಷ ಅಥವಾ ಅಭ್ಯರ್ಥಿಯು ಉದ್ದೇಶಿತ ಸಭೆಯ ಸ್ಥಳ ಮತ್ತು ಸಮಯವನ್ನು ಸಾಕಷ್ಟು ಮುಂಚಿತವಾಗಿಯೇ ಸಂಬಂಧಪಟ್ಟವರಿಗೆ ತಿಳಿಸುವ ಮೂಲಕ ಪೊಲೀಸರಿಗೆ ಸಂಚಾರ ದಟ್ಟಣೆ ನಿಯಂತ್ರಣ ಹಾಗೂ ಶಾಂತಿ–ಸುವ್ಯವಸ್ಥೆ ಕಾಪಾಡಲು ಅಗತ್ಯವಾದ ಸಿದ್ಧತೆ ಮಾಡಿಕೊಳ್ಳಲು ಅನುಕೂಲ ಮಾಡಿಕೊಡಬೇಕು.
- ಯಾವುದೇ ಪಕ್ಷ ಅಥವಾ ಅಭ್ಯರ್ಥಿಯು ತಾನು ಸಭೆ ನಡೆಸಲು ಉದ್ದೇಶಿಸಿರುವ ಜಾಗವು ಯಾವುದೇ ನಿಷೇಧಾಜ್ಞೆಗೆ ಒಳಪಟ್ಟಿದ್ದರೆ ಆ ಬಗ್ಗೆ ಮುಂಚಿತವಾಗಿಯೇ ತಿಳಿಸುವ ಜೊತೆಗೆ ಅದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಒಂದೊಮ್ಮೆ ಈ ನಿಷೇಧಾಜ್ಞೆಯಲ್ಲಿ ಯಾವುದೇ ವಿನಾಯಿತಿ ಬಯಸುವುದಾದರೆ ಸಾಕಷ್ಟು ಮುಂಚಿತವಾಗಿಯೇ ಅರ್ಜಿ ಸಲ್ಲಿಸಿ ಅಗತ್ಯ ಅನುಮತಿ ಪಡೆಯಬೇಕು.
- ಯಾವುದೇ ಪಕ್ಷ ಅಥವಾ ಅಭ್ಯರ್ಥಿಯು ಉದ್ದೇಶಿತ ಸಭೆಯಲ್ಲಿ ಧ್ವನಿವರ್ಧಕಗಳನ್ನು ಅಥವಾ ಬೇರೆ ಯಾವುದೇ ಸೌಲಭ್ಯ ಬಳಸಲು ಅನುಮತಿ ಅಥವಾ ಪರವಾನಗಿ ಪಡೆಯಬೇಕೆಂದರೆ ಸಾಕಷ್ಟು ಮುಂಚಿತವಾಗಿಯೇ ಅರ್ಜಿ ಸಲ್ಲಿಸಬೇಕು.



downloaded from: www.kpscvaani.com

- ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪು ಸಭೆಯಲ್ಲಿ ಗೊಂದಲ ಮೂಡಿಸಲು ಯತ್ನಿಸಿದರೆ ಸಭೆಯ ಆಯೋಜಕರು ಪೊಲೀಸರ ನೆರವು ಕೋರಬೇಕು. ಇಂತಹ ವ್ಯಕ್ತಿ/ ವ್ಯಕ್ತಿಗಳ ವಿರುದ್ಧ ಆಯೋಜಕರು ಸ್ವತಃ ತಾವೇ ಯಾವುದೇ ಕ್ರಮ ತೆಗೆದುಕೊಳ್ಳಬಾರದು.

**ಮೆರವಣಿಗೆ**

- ಯಾವುದೇ ಪಕ್ಷ ಅಥವಾ ವ್ಯಕ್ತಿಯು ಮೆರವಣಿಗೆ ನಡೆಸುವ ಉದ್ದೇಶ ಹೊಂದಿದ್ದರೆ, ಅದನ್ನು ಆರಂಭಿಸುವ ಸಮಯ ಮತ್ತು ಸ್ಥಳ, ಮೆರವಣಿಗೆ ಸಾಗುವ ಮಾರ್ಗ, ಮೆರವಣಿಗೆ ಮುಗಿಯುವ ಸಮಯ ಇವೆಲ್ಲವನ್ನೂ ಮುಂಚಿತವಾಗಿಯೇ ಯೋಜಿಸಬೇಕು. ಈ ಯೋಜನೆಯಲ್ಲಿ ಯಾವುದೇ ಬದಲಾವಣೆ ಮಾಡಬಾರದು.
- ಮೆರವಣಿಗೆ/ ಕಾರ್ಯಕ್ರಮದ ಆಯೋಜಕರು ಸಾಕಷ್ಟು ಮುಂಚಿತವಾಗಿಯೇ ಪೊಲೀಸರಿಗೆ ಮಾಹಿತಿ ಕೊಟ್ಟು, ಬೇಕಾದ ಸಿದ್ಧತೆ ಮಾಡಿಕೊಳ್ಳಲು ಅನುವು ಮಾಡಿಕೊಡಬೇಕು.
- ಮೆರವಣಿಗೆ ಸಾಗುವ ಪ್ರದೇಶಕ್ಕೆ ಅನ್ವಯವಾಗುವಂತೆ ಯಾವುದೇ ಪ್ರತಿಬಂಧಕಾಜ್ಞೆ ಇದ್ದರೆ ಅದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಒಂದೊಮ್ಮೆ ಈ ಪ್ರತಿಬಂಧಕಾಜ್ಞೆಯಲ್ಲಿ ವಿನಾಯಿತಿ ಬಯಸುವುದಾದರೆ ಸಂಬಂಧಿಸಿದ ಅಧಿಕಾರಿಗಳಿಂದ ಅಗತ್ಯ ಅನುಮತಿ ಪಡೆಯಬೇಕು. ಸಂಚಾರ ನಿಯಮಗಳಿಗೆ ಭಂಗವಾಗದಂತೆ ಎಚ್ಚರಿಕೆ ವಹಿಸಬೇಕು.
- ಮೆರವಣಿಗೆಯಿಂದಾಗಿ ಸಂಚಾರ ಸ್ಥಗಿತವಾಗದಂತೆ ಅಥವಾ ಅದಕ್ಕೆ ತೊಂದರೆಯಾಗದಂತೆ ಆಯೋಜಕರು ಮುಂಚಿತವಾಗಿಯೇ ಕ್ರಮ ತೆಗೆದುಕೊಳ್ಳಬೇಕು. ಒಂದೊಮ್ಮೆ ಮೆರವಣಿಗೆಯು ಉದ್ದವಾಗಿದ್ದರೆ ಅದನ್ನು ಸಣ್ಣ ಘಟಕಗಳಾಗಿ ವಿಭಜಿಸಬೇಕು. ವಾಹನಗಳು ಸಾಲುಗಟ್ಟಿ ನಿಲ್ಲುವಂತಾಗದೆ ಮುಂದೆ ಹೋಗಲು ಅನುವು ಮಾಡಿಕೊಡುವಂತೆ ಮೆರವಣಿಗೆಯನ್ನು ಯೋಜಿಸಬೇಕು.
- ಮೆರವಣಿಗೆಯು ಸಾಕಷ್ಟು ರಸ್ತೆಯ ಬಲ ಭಾಗದಲ್ಲೇ ಇರುವಂತೆ ನೋಡಿಕೊಳ್ಳಬೇಕು. ಈ ಸಂದರ್ಭದಲ್ಲಿ ಪೊಲೀಸರ ನಿರ್ದೇಶನ ಮತ್ತು ಸಲಹೆ ಪಡೆದು ಅದರಂತೆ ನಡೆಯಬೇಕು.
- ಒಂದೊಮ್ಮೆ ಎರಡು ಅಥವಾ ಎರಡಕ್ಕಿಂತ ಹೆಚ್ಚು ಪಕ್ಷಗಳು ಅಥವಾ ಅಭ್ಯರ್ಥಿಗಳು ಒಂದೇ ಮಾರ್ಗದಲ್ಲಿ ಮೆರವಣಿಗೆ ಮಾಡುವ ಉದ್ದೇಶ ಹೊಂದಿದ್ದರೆ ಆ ಬಗ್ಗೆ ಆಯೋಜಕರು ಸಾಕಷ್ಟು ಮುಂಚಿತವಾಗಿ ಪರಸ್ಪರ ಸಂಘರ್ಷವಾಗದಂತೆ ಅಥವಾ ಸಂಚಾರಕ್ಕೆ ಅಡಚಣೆಯಾಗದಂತೆ ಅದನ್ನು ರೂಪಿಸಬೇಕು. ಇದಕ್ಕಾಗಿ ಪೊಲೀಸರ ನೆರವು ಪಡೆಯಬೇಕು.
- ರಾಜಕೀಯ ಪಕ್ಷಗಳು ಅಥವಾ ಅಭ್ಯರ್ಥಿಗಳು ಮೆರವಣಿಗೆಯಲ್ಲಿ ಪಾಲ್ಗೊಳ್ಳುವವರು ದುರುದ್ದೇಶದಿಂದ ಬಳಸಲು ಆಸ್ಪದವಾಗುವಂತಹ ಯಾವುದೇ ವಸ್ತುಗಳನ್ನು ಕೊಂಡೊಯ್ಯದಂತೆ ಗರಿಷ್ಠ ಎಚ್ಚರಿಕೆ ವಹಿಸಬೇಕು.
- ಮೆರವಣಿಗೆಯಲ್ಲಿ ಪಾಲ್ಗೊಳ್ಳುವವರು ಬೇರೆ ರಾಜಕೀಯ ಪಕ್ಷಗಳ ಸದಸ್ಯರು ಅಥವಾ ಅವರ ನಾಯಕರನ್ನು ಪ್ರತಿನಿಧಿಸುವ ಪ್ರತಿಕೃತಿಗಳನ್ನು ಕೊಂಡೊಯ್ಯಬಾರದು. ಸಾರ್ವಜನಿಕವಾಗಿ ಇಂತಹ ಪ್ರತಿಕೃತಿಗಳನ್ನು ದಹಿಸಬಾರದು ಅಥವಾ ಇದೇ ತರಹದ ಬೇರ್‍ಯಾವುದೇ ರೀತಿಯ ಪ್ರತಿಭಟನೆ ಮಾಡಬಾರದು.

**ಚುನಾವಣಾ ದಿನದಂದು**

- ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು– ಶಾಂತಿ ಮತ್ತು ಸುವ್ಯವಸ್ಥಿತ ಮತ ಚಲಾವಣೆಗೆ ಹಾಗೂ ಮತದಾರರಿಗೆ ಯಾವುದೇ ಉಪದ್ರವ ಅಥವಾ ತೊಂದರೆ ಆಗದಂತೆ ಸಂಪೂರ್ಣ ಸ್ವಾತಂತ್ರ್ಯದೊಂದಿಗೆ ಮತ ಚಲಾಯಿಸಲು ಸಾಧ್ಯವಾಗುವ ರೀತಿಯಲ್ಲಿ ಚುನಾವಣಾ ಕರ್ತವ್ಯಕ್ಕಾಗಿ ನಿಯೋಜನೆಗೊಂಡ ಅಧಿಕಾರಿಗಳೊಂದಿಗೆ ಸಹಕರಿಸಬೇಕು.
- ತಮ್ಮ ಅಧಿಕೃತ ಕಾರ್ಯಕರ್ತರಿಗೆ ಸೂಕ್ತ ಬ್ಯಾಡ್ಜ್ ಅಥವಾ ಗುರುತು ಪತ್ರಗಳನ್ನು ಕೊಟ್ಟಿರಬೇಕು.
- ಮತದಾರರಿಗೆ ಸಾದಾ ಬಿಳಿ ಹಾಳೆಯಲ್ಲಿ ಮಾತ್ರ ಗುರುತು ಚೀಟಿಗಳನ್ನು ಕೊಡಬೇಕು. ಇದರಲ್ಲಿ ಯಾವುದೇ ಚಿಹ್ನೆ, ಅಭ್ಯರ್ಥಿಯ ಹೆಸರು ಅಥವಾ ಪಕ್ಷದ ಹೆಸರು ಇರಬಾರದು.
- ಮತ ಚಲಾವಣೆ ದಿನದಂದು ಹಾಗೂ ಮತ ಚಲಾವಣೆ ಮುಕ್ತಾಯಕ್ಕೆ ಮುಂಚಿನ 48 ಗಂಟೆಗಳ ಅವಧಿಯಲ್ಲಿ ಮದ್ಯ ಹಂಚಬಾರದು.
- ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಮತಗಟ್ಟೆಗಳ ಬಳಿ ಹಾಕುವ ಪೆಂಡಾಲ್/ಬಿಡಾರಗಳ ಬಳಿ ಜನ ಗುಂಪುಗೂಡದಂತೆ ನೋಡಿಕೊಳ್ಳಬೇಕು. ಪಕ್ಷಗಳು ಮತ್ತು ಅಭ್ಯರ್ಥಿಗಳ ಬೆಂಬಲಿಗರ ನಡುವೆ ಘರ್ಷಣೆಯಾಗದಂತೆ ನೋಡಿಕೊಳ್ಳಲು ಈ ಎಚ್ಚರಿಕೆ ವಹಿಸಬೇಕು.
- ಮತಗಟ್ಟೆ ಬಳಿ ಸ್ಥಾಪಿಸುವ ಬಿಡಾರಗಳು ಸರಳವಾಗಿರಬೇಕು. ಇಲ್ಲಿ ಯಾವುದೇ ಭಿತ್ತಿಪತ್ರಗಳು, ಧ್ವಜ, ಚಿಹ್ನೆ ಅಥವಾ ಬೇರ್‍ಯಾವುದೇ ರೀತಿಯ ಪ್ರಚಾರ ಸಾಮಗ್ರಿಯನ್ನು ಪ್ರದರ್ಶಿಸಬಾರದು. ಬಿಡಾರಗಳ ಬಳಿ ಯಾವುದೇ ತಿಂಡಿ/ಪಾನೀಯ ವಿತರಿಸಬಾರದು.
- ಮತ ಚಲಾವಣೆ ದಿನದಂದು ವಾಹನಗಳ ಓಡಾಟದ ಮೇಲೆ ಹಾಕುವ ನಿರ್ಬಂಧ ಪಾಲಿಸಲು ಅನುವಾಗುವಂತೆ ಅಧಿಕಾರಿಗಳೊಂದಿಗೆ ಸಹಕರಿಸಬೇಕು. ಸೀಮಿತ ವಾಹನಗಳ ಓಡಾಟಕ್ಕೆ ಪರವಾನಗಿ ಪಡೆದು ಅದನ್ನು ಸ್ಪಷ್ಟವಾಗಿ ಎದ್ದು ಕಾಣುವಂತೆ ವಾಹನದ ಮೇಲೆ ಅಂಟಿಸಬೇಕು.

**ಮತಗಟ್ಟೆಯಲ್ಲಿ**

ಮತದಾರರನ್ನು ಹೊರತುಪಡಿಸಿ ಚುನಾವಣಾ ಆಯೋಗದಿಂದ ಪಾಸ್ ಪಡೆಯದ ಬೇರ್‍ಯಾವುದೇ ವ್ಯಕ್ತಿಯು ಮತಗಟ್ಟೆಯನ್ನು ಪ್ರವೇಶಿಸಬಾರದು.

**ವೀಕ್ಷಕರು**

ಚುನಾವಣಾ ಆಯೋಗವು ವೀಕ್ಷಕರನ್ನು ನೇಮಕ ಮಾಡುತ್ತದೆ. ಚುನಾವಣೆಗೆ ಸಂಬಂಧಿಸಿದಂತೆ ಯಾವುದೇ ದೂರು ಅಥವಾ ತೊಂದರೆ ಕಂಡುಬಂದರೆ ಅಭ್ಯರ್ಥಿಗಳು ಅಥವಾ ಅವರ ಏಜೆಂಟರು ಅದನ್ನು ವೀಕ್ಷಕರ ಗಮನಕ್ಕೆ ತರಬೇಕು.

**ಅಧಿಕಾರದಲ್ಲಿರುವ ಪಕ್ಷ**

ಕೇಂದ್ರ ಅಥವಾ ರಾಜ್ಯದಲ್ಲಿ ಅಧಿಕಾರದಲ್ಲಿರುವ ಪಕ್ಷವು



downloaded from: www.kpscvaani.com


# AllToPoll



ಮಹಿಳೆಯರಿಗೆ ಪ್ರತ್ಯೇಕ ಸಾಲು
ನಿಶ್ಚಿಂತೆಯಿಂದ ಮತ ಚಲಾಯಿಸಿ

ಲೋಕಸಭಾ ಚುನಾವಣೆ – 2019

ಗುರುವಾರ, 18 ಮತ್ತು ಮಂಗಳವಾರ 23 ಏಪ್ರಿಲ್ 2019 | ಬೆಳಗ್ಗೆ 7 ರಿಂದ ಸಂಜೆ 6 ಗಂಟೆವರೆಗೆ

CALL TOLL FREE 1950

ceokarnataka

ಮತ ಚಲಾವಣೆ ನಿಮ್ಮ ಹಕ್ಕು, ತಪ್ಪದೇ ಮತ ಚಲಾಯಿಸಿ

ಮುಖ್ಯ ಚುನಾವಣಾಧಿಕಾರಿ, ಕರ್ನಾಟಕ
www.ceokarnataka.kar.nic.in

ಪ್ರಚಾರಕ್ಕಾಗಿ ಅಧಿಕಾರವನ್ನು ಬಳಸಿಕೊಳ್ಳಬಾರದು.
ನಿರ್ದಿಷ್ಟವಾಗಿ ಹೇಳಬೇಕೆಂದರೆ–

- ಯಾವುದೇ ಸಚಿವರು ತಮ್ಮ ಅಧಿಕೃತ ಭೇಟಿಯನ್ನು ಚುನಾವಣೆ ಕೆಲಸದೊಂದಿಗೆ ಸಂಯೋಜನೆ ಮಾಡಿಕೊಳ್ಳಬಾರದು. ಚುನಾವಣಾ ಕೆಲಸಕ್ಕಾಗಿ ಅಧಿಕಾರ ಯಂತ್ರ ಅಥವಾ ಸರ್ಕಾರಿ ಸಿಬ್ಬಂದಿಯನ್ನು ಬಳಸಿಕೊಳ್ಳಬಾರದು.
- ವಿಮಾನ ಸೇರಿದಂತೆ ಯಾವುದೇ ಬಗೆಯ ಸರ್ಕಾರಿ ವಾಹನ, ಅಧಿಕಾರ ಯಂತ್ರ ಮತ್ತು ಸರ್ಕಾರಿ ಸಿಬ್ಬಂದಿಯನ್ನು ಅಧಿಕಾರದಲ್ಲಿರುವ ಪಕ್ಷದ ಹಿತಾಸಕ್ತಿಗಾಗಿ ಬಳಸಿಕೊಳ್ಳಬಾರದು.
- ಚುನಾವಣೆ ಸಭೆಗಳನ್ನು ನಡೆಸಲು ಅಗತ್ಯವಾದ ಮೈದಾನ, ಹೆಲಿಪ್ಯಾಡ್ ಇತ್ಯಾದಿ ಸಾರ್ವಜನಿಕ ಸ್ಥಳಗಳ ಮೇಲೆ ಅಧಿಕಾರದಲ್ಲಿರುವ ಪಕ್ಷವು ಏಕಸ್ವಾಮ್ಯ ಹೊಂದಬಾರದು. ಬೇರೆ ಪಕ್ಷಗಳು ಮತ್ತು ಅಭ್ಯರ್ಥಿಗಳಿಗೂ ಇವುಗಳ ಸಮಾನ ಬಳಕೆಗೆ ಅವಕಾಶ ಮಾಡಿಕೊಡಬೇಕು.
- ಸರ್ಕಾರಿ ಅತಿಥಿ ಗೃಹಗಳು, ವಿಶ್ರಾಂತಿ ಗೃಹಗಳ ಮೇಲೆ ಅಧಿಕಾರದಲ್ಲಿರುವ ಪಕ್ಷ ಏಕಸ್ವಾಮ್ಯ ಸಾಧಿಸಬಾರದು. ಬೇರೆ ಪಕ್ಷಗಳು ಮತ್ತು ಅಭ್ಯರ್ಥಿಗಳಿಗೂ ಇವುಗಳ ಸಮಾನ ಬಳಕೆಗೆ ಅವಕಾಶ ಇರಬೇಕು. ಆದರೆ ಈ ಸ್ಥಳಗಳನ್ನು ಪ್ರಚಾರ ಕಚೇರಿಯಾಗಿ ಅಥವಾ ಸಾರ್ವಜನಿಕ ಸಭಾ ಸ್ಥಳವಾಗಿ ಬಳಸಬಾರದು.
- ದಿನಪತ್ರಿಕೆಗಳು ಮತ್ತು ಬೇರ್‍ಯಾವುದೇ ಮಾಧ್ಯಮದಲ್ಲಿ ಸರ್ಕಾರಿ ಬೊಕ್ಕಸದ ಹಣದಿಂದ ಜಾಹೀರಾತು ಪ್ರಕಟಿಸಬಾರದು. ಸರ್ಕಾರಿ ಮಾಧ್ಯಮವನ್ನು ಪಕ್ಷಪಾತದಿಂದ ಕೂಡಿದ ರಾಜಕೀಯ ಸುದ್ದಿಗಳನ್ನು ಪ್ರಕಟಿಸಲು ಮತ್ತು ಪ್ರಚಾರಕ್ಕಾಗಿ ದುರ್ಬಳಕೆ ಮಾಡಿಕೊಳ್ಳಬಾರದು.
- ಚುನಾವಣಾ ಆಯೋಗವು ಚುನಾವಣಾ ದಿನಾಂಕ ಪ್ರಕಟಿಸಿದ ನಂತರ ಯಾವುದೇ ಸಚಿವರು ಅಥವಾ ಇಲಾಖೆಗಳು ಯಾವುದೇ ಉದ್ದೇಶಕ್ಕಾಗಿಯಾಗಲೀ ವಿವೇಚನಾ ನಿಧಿಯ ಹಣವನ್ನು ಮಂಜೂರು ಮಾಡಬಾರದು.
- ಚುನಾವಣಾ ಆಯೋಗವು ಚುನಾವಣಾ ದಿನಾಂಕ ಪ್ರಕಟಿಸಿದ ನಂತರ ಯಾವುದೇ ಸಚಿವರು ಅಥವಾ ಇಲಾಖೆಗಳು ಯಾವುದೇ ಬಗೆಯ ಹಣಕಾಸು ಅನುದಾನ ಪ್ರಕಟಿಸಬಾರದು ಅಥವಾ ಅಂತಹ ಭರವಸೆ ನೀಡಬಾರದು.
- ಚುನಾವಣಾ ಆಯೋಗವು ಚುನಾವಣಾ ದಿನಾಂಕ ಪ್ರಕಟಿಸಿದ ನಂತರ ನಾಗರಿಕ ಸೇವಾ ಅಧಿಕಾರಿಗಳನ್ನು ಹೊರತುಪಡಿಸಿ ಸಚಿವರಾಗಲೀ ಅಥವಾ ಇಲಾಖೆಯಾಗಲೀ ಯೋಜನೆಗಳ ಶಂಕುಸ್ಥಾಪನೆ ಮಾಡಬಾರದು.
- ಚುನಾವಣಾ ಆಯೋಗವು ಚುನಾವಣಾ ದಿನಾಂಕ ಪ್ರಕಟಿಸಿದ ನಂತರ ಸಚಿವರಾಗಲೀ ಅಥವಾ ಇಲಾಖೆಯಾಗಲೀ ರಸ್ತೆ ನಿರ್ಮಾಣದಂತಹ, ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವಂತಹ ಮತ್ತು ಇದೇ ತರಹದ ಬೇರ್‍ಯಾವುದೇ ಭರವಸೆಯನ್ನು ನೀಡಬಾರದು.
- ಚುನಾವಣಾ ಆಯೋಗವು ಚುನಾವಣಾ ದಿನಾಂಕ ಪ್ರಕಟಿಸಿದ ನಂತರ ಸಚಿವರಾಗಲೀ ಅಥವಾ ಇಲಾಖೆಯಾಗಲೀ ಸರ್ಕಾರದಲ್ಲಿ ಅಥವಾ ಸರ್ಕಾರದ ಅಧೀನ ಸಂಸ್ಥೆಗಳಲ್ಲಿ ತಾತ್ಕಾಲಿಕ ನೇಮಕಾತಿ ಮಾಡಬಾರದು.
- ಕೇಂದ್ರ ಅಥವಾ ರಾಜ್ಯ ಸರ್ಕಾರದ ಸಚಿವರು ಒಬ್ಬ ಅಭ್ಯರ್ಥಿಯಾಗಿ, ಮತದಾರನಾಗಿ ಅಥವಾ ಅಧಿಕೃತ ಏಜೆಂಟ್ ಆಗಿ ಮತಗಟ್ಟೆ ಪ್ರವೇಶಿಸಬಹುದೇ ವಿನಾ ಬೇರ್‍ಯಾವುದೇ ಅಧಿಕಾರ ಬಲದೊಂದಿಗೆ ಅಲ್ಲಿಗೆ ಹೋಗಕೂಡದು.

**ಪ್ರಣಾಳಿಕೆ**

ಮೊದಲೇ ಹೇಳಿದಂತೆ, ಸಂವಿಧಾನದ 324ನೇ ವಿಧಿಯ ಪ್ರಕಾರ ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗಳನ್ನು ನಡೆಸುವುದು ಚುನಾವಣಾ ಆಯೋಗದ ಕರ್ತವ್ಯವಾಗಿದೆ. ಸುಪ್ರೀಂ ಕೋರ್ಟ್ ನಿರ್ದೇಶನಗಳನ್ನು ಗೌರವಿಸಿ ಹಾಗೂ ವಿವಿಧ ರಾಜಕೀಯ ಪಕ್ಷಗಳೊಂದಿಗೆ ಚರ್ಚಿಸಿದ ನಂತರ ಆಯೋಗವು ಚುನಾವಣಾ ಪ್ರಣಾಳಿಕೆಗಳಿಗೆ ಸಂಬಂಧಪಟ್ಟಂತೆಯೂ ಕೆಲವು ಸಲಹೆಗಳನ್ನು ನೀಡಿದೆ. ಅವುಗಳೆಂದರೆ:–

- ಸಂವಿಧಾನದಲ್ಲಿ ಅಡಕವಾಗಿರುವ ಆದರ್ಶಗಳು ಮತ್ತು ತತ್ವಗಳಿಗೆ ಧಕ್ಕೆ ತರುವಂತಹ ಯಾವುದೇ ಅಂಶವನ್ನು ಪ್ರಣಾಳಿಕೆ ಹೊಂದಿರಬಾರದು. ಇದರಲ್ಲಿ ಪ್ರಸ್ತಾಪಿಸುವಂತಹ ಸಂಗತಿಗಳು ಚುನಾವಣಾ ನೀತಿ ಸಂಹಿತೆಯ ನಿಬಂಧನೆಗಳಿಗೂ ಒಳಪಟ್ಟಿರಬೇಕು.
- ಚುನಾವಣಾ ಪ್ರಣಾಳಿಕೆಯಲ್ಲಿ ನಾಗರಿಕರ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳನ್ನು ಪ್ರಕಟಿಸಬಹುದು. ಆದರೆ, ಚುನಾವಣಾ ಪ್ರಕ್ರಿಯೆಯ ಪಾವಿತ್ರ್ಯ ಹಾಳುಗೆಡಹುವಂತಹ ಅಥವಾ ಮತ ಚಲಾವಣೆ ಮೇಲೆ ಪ್ರಭಾವ ಬೀರುವಂತಹ ಯಾವುದೇ ಭರವಸೆ ನೀಡಬಾರದು.
- ಚುನಾವಣಾ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಎಲ್ಲಾ ಅಭ್ಯರ್ಥಿಗಳಿಗೆ ಸಮಾನ ಅವಕಾಶ ಮತ್ತು ಭರವಸೆಗಳ ವಿಶ್ವಾಸಾರ್ಹತೆ ಕಾಪಾಡಿಕೊಳ್ಳುವುದು ಅತ್ಯಗತ್ಯ. ಹೀಗಾಗಿ, ಪ್ರಣಾಳಿಕೆಯಲ್ಲಿ ನೀಡಲಾಗುವ ಭರವಸೆಗಳ ಹಿಂದಿನ ವೈಚಾರಿಕತೆ/ ತರ್ಕವನ್ನು ಕೂಡ ಅದರಲ್ಲಿ ಪ್ರತಿಬಿಂಬಿಸಬೇಕು. ಜೊತೆಗೆ, ಯಾವುದೇ ಕಾರ್ಯಕ್ರಮ ಅನುಷ್ಠಾನಗೊಳಿಸಲು ಬೇಕಾಗುವ ಹಣಕಾಸು ಅಗತ್ಯವನ್ನು ಹೇಗೆ ಭರಿಸಿಕೊಳ್ಳಲಾಗುತ್ತದೆ ಎಂಬುದನ್ನೂ ಸ್ಥೂಲವಾಗಿ ವಿವರಿಸಬೇಕು. ಯಾವ ಭರವಸೆಗಳನ್ನು ಈಡೇರಿಸಲು ಸಾಧ್ಯವೋ ಅಂತಹ ಭರವಸೆಗಳ ಮೂಲಕ ಮಾತ್ರ ರಾಜಕೀಯ ಪಕ್ಷಗಳು ಮತದಾರರ ವಿಶ್ವಾಸವನ್ನು ನಿರೀಕ್ಷಿಸಬೇಕು.



# ವಿದ್ಯುನ್ಮಾನ ಮತಯಂತ್ರದ ಬಳಕೆ




- ಮತಗಟ್ಟೆಯ ಅಧ್ಯಕ್ಷಾಧಿಕಾರಿಯು ಮತದಾನ ಮಾಡಿ ಎಂದು ಹೇಳಿದಾಗ, ಮತದಾನ ಮಾಡುವುದಕ್ಕಾಗಿ ಯಂತ್ರ ಸಿದ್ಧವಾಗಿರುವುದನ್ನು ಸೂಚಿಸುವ ಹಸಿರು ದೀಪ ಉರಿಯುತ್ತಿದೆಯೇ ಎನ್ನುವುದನ್ನು ಖಚಿತ ಪಡಿಸಿಕೊಳ್ಳಿ.
- ಬ್ಯಾಲೆಟ್ ಯೂನಿಟ್‌ನಲ್ಲಿ ನಿಮ್ಮ ಆಯ್ಕೆಯ ಅಭ್ಯರ್ಥಿಯ ಹೆಸರು/ಚಿಹ್ನೆ/ಭಾವಚಿತ್ರದ ಎದುರು ಇರುವ ನೀಲಿ ಗುಂಡಿಯನ್ನು ಒತ್ತಿ.
- ಗುಂಡಿಯನ್ನು ಒತ್ತಿದ ನಂತರ ತಾವು ಆಯ್ಕೆ ಮಾಡಿಕೊಂಡ ಅಭ್ಯರ್ಥಿಯ ಹೆಸರು/ಚಿಹ್ನೆಯ ಎದುರು ಇರುವ ಕೆಂಪು ದೀಪ ಉರಿಯುತ್ತಿರುವುದನ್ನು ಖಚಿತಪಡಿಸಿಕೊಳ್ಳಿ.
- ಮತದಾನ ಮಾಡುತ್ತಿದ್ದಂತೆ ತಾವು ಆಯ್ಕೆ ಮಾಡಿದ ಅಭ್ಯರ್ಥಿಯ ಕ್ರಮ ಸಂಖ್ಯೆ, ಹೆಸರು ಮತ್ತು ಚಿಹ್ನೆಯನ್ನು ಒಳಗೊಂಡಿರುವ ಬ್ಯಾಲೆಟ್ ಚೀಟಿಯನ್ನು ಮುದ್ರಣ ಯಂತ್ರವು ಮುದ್ರಿಸಿಕೊಡುತ್ತದೆ. ಆದರೆ ಈ ಮುದ್ರಿತ ಪ್ರತಿಯನ್ನು ಮತದಾರರಿಗೆ ನೀಡಲಾಗುವುದಿಲ್ಲ. ಆದರೆ ಮುದ್ರಿತ ಪ್ರತಿರೂಪವನ್ನು ಗಾಜಿನ ಮೂಲಕ 7 ಸೆಕೆಂಡುಗಳ ಕಾಲ ಬಿತ್ತರಿಸಲಾಗುತ್ತದೆ. ಇದನ್ನು ನೋಡಿ ನೀವು ಆಯ್ಕೆ ಮಾಡಿರುವುದು ಸರಿಯಾಗಿದೆಯೇ ಎಂದು ಖಾತ್ರಿ ಪಡಿಸಿಕೊಳ್ಳಬಹುದು. ನಂತರ ಆ ಮುದ್ರಿತ ಪ್ರತಿ ಬಾಕ್ಸ್‌ನಲ್ಲಿ ಬೀಳುತ್ತದೆ.
- ಮತದಾನ ಮಾಡುವ ಸಮಯದಲ್ಲಿ ಬ್ಯಾಲೆಟ್ ಚೀಟಿ ಕಾಣಿಸದಿದ್ದರೆ ಮತ್ತು ಬೀಪ್ ಶಬ್ದ ಕೇಳಿಸದಿದ್ದರೆ ಮತಗಟ್ಟೆಯ ಅಧ್ಯಕ್ಷಾಧಿಕಾರಿಯವರಿಗೆ ತಿಳಿಸಬೇಕು.
- ಚುನಾವಣಾ ಆಯೋಗವು ಮತ ಚಲಾಯಿಸುವ ಕುರಿತು ಮತದಾರರ ಅನುಮಾನಗಳಿಗೆ ಉತ್ತರಿಸಲು ಟೋಲ್ ಫ್ರೀ ಸಂಖ್ಯೆಯನ್ನು ಸಹ ಹೊಂದಿದ್ದು, ಸಾರ್ವಜನಿಕರು ತಮ್ಮ ಅನುಮಾನಗಳನ್ನು 1950 ಸಂಖ್ಯೆಗೆ ದೂರವಾಣಿ ಕರೆ ಮಾಡುವ ಮೂಲಕ ಪರಿಹಾರ ಕಂಡುಕೊಳ್ಳಬಹುದಾಗಿದೆ.



downloaded from: www.kpscvaani.com



# ಜನತಂತ್ರದ ಹಬ್ಬಕ್ಕೆ ಸಿಲಿಕಾನ್ ಸಿಟಿ ಸಜ್ಜು

ರಾಜಮನ್ನಾರ್

**ಬೆಂಗಳೂರು ನಗರದಲ್ಲಿ ಶೇಕಡಾವಾರು ಮತ ಪ್ರಮಾಣವನ್ನು ಹೆಚ್ಚಿಸಲು ಆಯೋಗ ವಿಶೇಷ ಕಾರ್ಯಕ್ರಮ ರೂಪಿಸಿದೆ. ಐಟಿ ಇಲಾಖೆಯ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥರನ್ನು ಮತದಾರರ ಜಾಗೃತಿ ಸಮಿತಿಗೆ ನೇಮಿಸಿಕೊಂಡಿರುವುದು, ಕಾಸಿಯಾ, ಗಾರ್ಮೆಂಟ್ಸ್ ಮತ್ತು ಇತರೆ ಕೈಗಾರಿಕಾ ಸಂಘಗಳು ಜನತಂತ್ರದ ಹಬ್ಬವನ್ನು ಯಶಸ್ವಿಗೊಳಿಸಲು ಪೂರ್ಣ ಸಹಕಾರ ನೀಡಿರುವುದರಿಂದ ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಮತದಾನದ ಆಶಯ ಗರಿಗೆದರಿದೆ. ಚಿತ್ರ ನಟ ರಮೇಶ್ ಅರವಿಂದ್ ಅವರನ್ನು ಬೆಂಗಳೂರು ವ್ಯಾಪ್ತಿಯ ಮೂರು ಲೋಕಸಭಾ ಕ್ಷೇತ್ರಗಳಿಗೆ ಬ್ರಾಂಡ್ ಅಂಬಾಸಿಡರ್ ಆಗಿ ನೇಮಕ ಮಾಡಿಕೊಳ್ಳಲಾಗಿದೆ. ಬೆಂಗಳೂರು ಉತ್ತರ, ದಕ್ಷಿಣ ಮತ್ತು ಸೆಂಟ್ರಲ್ ಈ ಮೂರೂ ಲೋಕಸಭಾ ಕ್ಷೇತ್ರಗಳಿಗೂ ಒಬ್ಬರೇ ಚುನಾವಣಾಧಿಕಾರಿ ಇರುವುದು ದೇಶದಲ್ಲೇ ವಿನೂತನ, ಅಪರೂಪ ಎನ್ನಬಹುದು...!!**

**ಬೆಂ**ಗಳೂರು, ಸಿಲಿಕಾನ್ ಸಿಟಿ ಜನತಂತ್ರದ ದೊಡ್ಡ ಹಬ್ಬಕ್ಕೆ ಸಜ್ಜಾಗುತ್ತಿದೆ. ಹಬ್ಬ ಎಂದರೆ ಸಡಗರ, ಸಂಭ್ರಮಕ್ಕೆ ಪಾರವೇ ಇಲ್ಲ ಎಂಬುದನ್ನು ಬಿಡಿಸಿ ಹೇಳುವ ಅವಶ್ಯಕತೆ ಇಲ್ಲ. ಈ ಹಬ್ಬದಲ್ಲಿ ಒಂದು ಕೋಟಿ ಇಪ್ಪತ್ತು ಲಕ್ಷಕ್ಕೂ ಹೆಚ್ಚು ಜನರು ಭಾಗಿಯಾಗುತ್ತಿದ್ದಾರೆ. 17ನೇ ಲೋಕಸಭಾ ಚುನಾವಣೆಗೆ ರಾಜ್ಯದಲ್ಲಿ ಎರಡು ಹಂತಗಳಲ್ಲಿ ಚುನಾವಣೆ ನಡೆಯಲಿದೆ. ಮೊದಲ ಹಂತದಲ್ಲೇ ಅಂದರೆ ಏಪ್ರಿಲ್ 18 ರಂದು ಬೆಂಗಳೂರಿನ ನಾಗರಿಕರು ಮತ ಚಲಾಯಿಸುವ ಮೊದಲನೇ ಅವಕಾಶವನ್ನು ಪಡೆದಿದ್ದಾರೆ. 88 ಲಕ್ಷ ಮತದಾರರು, 42 ಸಾವಿರ ಚುನಾವಣಾ ಸಿಬ್ಬಂದಿ ಈ ಹಬ್ಬವನ್ನು ಯಶಸ್ವಿಗೊಳಿಸುವ ಗುರುತರ ಹೊಣೆಗಾರಿಕೆ ಹೊತ್ತಿದ್ದಾರೆ.

ಬೆಂಗಳೂರು ನಗರದ ವ್ಯಾಪ್ತಿಗೆ ಮೂರು ಲೋಕಸಭಾ ಕ್ಷೇತ್ರಗಳು ಬರುತ್ತಿವೆ. ವಿಶೇಷ ಎಂದರೆ ಈ ಮೂರೂ ಲೋಕಸಭಾ ಕ್ಷೇತ್ರಗಳಿಗೆ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರಾದ ಮಂಜುನಾಥ್ ಪ್ರಸಾದ್ ಅವರೇ ಚುನಾವಣಾಧಿಕಾರಿಯಾಗಿದ್ದಾರೆ. ರಾಜ್ಯದ 28 ಕ್ಷೇತ್ರಗಳಿಗೆ ಎರಡು ಹಂತದಲ್ಲಿ ಮತದಾನ ನಡೆಯುತ್ತಿದೆ. ಜಿಲ್ಲಾಧಿಕಾರಿಗಳಿಗೆ ಕೇವಲ ಆಯಾಯ ಜಿಲ್ಲೆಗಳ ಲೋಕಸಭಾ ಜವಾಬ್ದಾರಿ, ಹೊಣೆಯಷ್ಟೇ ಸೀಮಿತವಾಗಿದೆ. ಆದರೆ ಬೆಂಗಳೂರು ಬಿಬಿಎಂಪಿ ವ್ಯಾಪ್ತಿಯಲ್ಲಿ ಮೂರೂ ಕ್ಷೇತ್ರಗಳಿಗೂ ಒಬ್ಬರೇ ಚುನಾವಣಾಧಿಕಾರಿ ಇರುವುದು ಬಹಳ ವಿಶೇಷವಾಗಿದೆ. ಇದಕ್ಕೆ ಮುಖ್ಯ ಕಾರಣ ಎಂದರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿಭಜನೆಯಾಗದೇ ಇರುವುದರಿಂದ ಮೂರೂ ಲೋಕಸಭಾ ಕ್ಷೇತ್ರಗಳ ಸಮಸ್ತ ಉಸ್ತುವಾರಿಯನ್ನು ಒಬ್ಬರೇ ಅಧಿಕಾರಿ ನಿರ್ವಹಣೆ ಮಾಡುತ್ತಿರುವುದು ದೇಶದಲ್ಲೇ ವಿನೂತನ ಎಂದು ಹೇಳಬಹುದು.

ದೇಶದ ರಾಜಧಾನಿ ದೆಹಲಿ, ಮುಂಬೈ, ಕೋಲ್ಕತ್ತಾ ಹೈದರಾಬಾದ್ ನಗರಗಳಲ್ಲಿ ಸಹ ಮೂರು ಲೋಕಸಭಾ ಕ್ಷೇತ್ರಗಳ ಉಸ್ತುವಾರಿಯನ್ನು ಒಬ್ಬರೇ ನಿರ್ವಹಣೆ ಮಾಡುತ್ತಿರುವ ಉದಾಹರಣೆಗಳಿಲ್ಲ. ಬೆಂಗಳೂರು ನಗರದಲ್ಲಿ ಮತದಾರರ ಪಟ್ಟಿ ಸಿದ್ಧಪಡಿಸುವುದು, ಪರಿಷ್ಕರಣೆ ಮಾಡುವುದು ಮತ್ತು ಬೆಂಗಳೂರಿನ ಭೌಗೋಳಿಕ ಪ್ರದೇಶಗಳು ಚೆನ್ನಾಗಿ ತಿಳಿದಿರುವ ಕಾರಣಕ್ಕಾಗಿ ಈ ಮೂರೂ ಕ್ಷೇತ್ರಗಳ ಜವಾಬ್ದಾರಿಯನ್ನು ಒಬ್ಬರಿಗೇ ನೀಡಲಾಗಿದೆ.

ಬೆಂಗಳೂರು ವ್ಯಾಪ್ತಿಗೆ ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ಮತ್ತು ಬೆಂಗಳೂರು ಸೆಂಟ್ರಲ್ ಲೋಕಸಭಾ ಕ್ಷೇತ್ರಗಳು ಹಾಗೂ ಅವುಗಳ ವ್ಯಾಪ್ತಿಯಲ್ಲಿ 28 ವಿಧಾನಸಭಾ ಕ್ಷೇತ್ರಗಳು ಬಂದಿವೆಯಾದರೂ ಯಲಹಂಕ ವಿಧಾನಸಭಾ ಕ್ಷೇತ್ರ, ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೂ, ಅದೇ ರೀತಿ ರಾಜರಾಜೇಶ್ವರಿನಗರ, ಬೆಂಗಳೂರು ದಕ್ಷಿಣ ಮತ್ತು ಆನೇಕಲ್ ವಿಧಾನಸಭಾ ಕ್ಷೇತ್ರಗಳು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರುತ್ತವೆ.

ಬೆಂಗಳೂರು ಉತ್ತರ, ದಕ್ಷಿಣ ಮತ್ತು ಸೆಂಟ್ರಲ್ ಲೋಕಸಭಾ ಕ್ಷೇತ್ರಗಳಲ್ಲಿ ಒಟ್ಟಾರೆ 88 ಲಕ್ಷದ 81 ಸಾವಿರದ 66 (88,81,066) ಮತದಾರರಿದ್ದಾರೆ. ಇವರ ಪೈಕಿ 46,32,900 ಪುರುಷ ಮತದಾರರು ಹಾಗೂ 42,48,166 ಮಹಿಳಾ ಮತದಾರರು ಇದ್ದಾರೆ.

ಬೆಂಗಳೂರಿನಲ್ಲಿ ಮತದಾನದ ಪ್ರಮಾಣವನ್ನು ಹೆಚ್ಚಿಸಲು ಚುನಾವಣಾ ಆಯೋಗದ ವತಿಯಿಂದ ಹಲವಾರು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಮೂರೂ ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ 200 ಕ್ಕೂ ಹೆಚ್ಚು ವಿಶೇಷ ಶಿಬಿರಗಳನ್ನು ನಡೆಸಿ, ಮತದಾರರ ಪಟ್ಟಿಗೆ ಹೆಸರನ್ನು ಸೇರ್ಪಡೆಗೊಳಿಸುವ ಕೆಲಸವನ್ನು ಚುರುಕಿನಿಂದ ಮಾಡಲಾಗುತ್ತಿದೆ. ಸ್ಥಳೀಯ ಕಲಾವಿದರ ಸಹಕಾರದಿಂದ ಬೀದಿ ನಾಟಕಗಳ ಮೂಲಕ ಜಾಗೃತಿ ಮೂಡಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಹಗಲೂ, ಇರುಳೂ ಸಾವಿರಾರು ಸಿಬ್ಬಂದಿ ಮತದಾರರ ಪಟ್ಟಿಗೆ ಹೆಸರು ಸೇರಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಮತದಾರರ ಪಟ್ಟಿಗೆ ಹೊಸದಾಗಿ ಹೆಸರು ಸೇರ್ಪಡೆ, ತಿದ್ದುಪಡಿ, ವಿಳಾಸ, ಕ್ಷೇತ್ರ ಬದಲಾವಣೆಗೆ ಒಟ್ಟು ಒಂದು ಲಕ್ಷದ ನಲವತ್ತೆರಡು ಸಾವಿರ ಅರ್ಜಿಗಳು ಸ್ವೀಕೃತವಾಗಿದ್ದು ಅವರೆಲ್ಲರಿಗೂ ಮಾರ್ಚ್ ಅಂತ್ಯದ ವೇಳೆಗೆ ಅಂದರೆ ಚುನಾವಣಾ ಪ್ರಕ್ರಿಯೆಗಳು ವಿಧಿಬದ್ಧವಾಗಿ ಆರಂಭವಾಗುವ ಮುನ್ನವೇ ಹೊಸ ಮತದಾರರಿಗೆ ಗುರುತಿನ ಚೀಟಿ, ತಿದ್ದುಪಡಿ ಕೋರಿರುವವರಿಗೆ ಅವರ ಕೋರಿಕೆಗಳನ್ನು ಸರಿಪಡಿಸಿ ಅಂತಿಮ ಮತಪಟ್ಟಿಗೆ ಅವರ ಹೆಸರನ್ನು ಸೇರಿಸಲು ಶ್ರಮ ಹಾಕಲಾಗುತ್ತಿದೆ. ಮತದಾನ ಮಾಡಲು ಗುರುತಿನ ಮತದಾರರ ಚೀಟಿಯೇ ಕಡ್ಡಾಯವಲ್ಲ. ಬದಲಾಗಿ ಮತಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗಿರುವುದು ಬಹಳ ಮುಖ್ಯ. ಈ ನಿಟ್ಟಿನಲ್ಲಿ ನಾಗರಿಕರು ಹೆಚ್ಚಿನ ಕಾಳಜಿ ವಹಿಸಿ ತಮ್ಮ ಹೆಸರು ಪಟ್ಟಿಯಲ್ಲಿ ಸೇರಿಕೊಳ್ಳುವಂತೆ ನೋಡಿಕೊಳ್ಳಬೇಕು.

ಬೆಂಗಳೂರು ನಗರದಲ್ಲಿ ಮತದಾನ ಕಡಿಮೆಯಾಗುತ್ತಿವೆ ಎಂಬ ಆರೋಪ ಸಹಜವಾಗಿ ಕೇಳಿ ಬರುತ್ತಿದೆ. ಬೆಂಗಳೂರು ಹೇಳಿಕೇಳಿ ಕಾಸ್ಮೋಪಾಲಿಟನ್ ಸಿಟಿ. ಕನ್ನಡಿಗರ ಸಂಖ್ಯೆಗಿಂತ ಹೊರ ರಾಜ್ಯದ ನಾಗರಿಕರೇ ಹೆಚ್ಚಾಗಿ ವಾಸ ಮಾಡುತ್ತಿರುವುದು ಇದಕ್ಕೆ ಪ್ರಮುಖ ಕಾರಣ ಎಂಬುದು ಬಹಿರಂಗ ಸತ್ಯ.

ಸಾಲು ಸಾಲು ರಜೆ ಮತ್ತು ವಾರದ ಕೊನೆಯಲ್ಲಿ ರಜೆ ನಡುವೆ ಚುನಾವಣೆ ಬಂದಿರುವುದರಿಂದ ಮತದಾನದ ಪ್ರಮಾಣ ಕಡಿಮೆಯಾಗಲಿದೆ ಎಂಬ ಆತಂಕವೂ ಕಾಡುತ್ತಿದೆ. ಆದರೆ ಚುನಾವಣಾ ಅಧಿಕಾರಿಗಳು ಅದಕ್ಕೆ ಅವಕಾಶ ಕೊಡದಂತೆ ಮತದಾನ ಜಾಗೃತಿ ಸಮಿತಿಗೆ ವಿಶೇಷವಾಗಿ ಐಟಿ ಕಂಪನಿಯ ಮಾನವ ಸಂಪನ್ಮೂಲ ಅಧಿಕಾರಿಗಳನ್ನು ಸಕ್ರಿಯವಾಗಿ ನೇಮಕ ಮಾಡಿಕೊಂಡಿದ್ದಾರೆ. ಇವರು ತಮ್ಮ ತಮ್ಮ ಕಂಪನಿಯ ಸಿಬ್ಬಂದಿ ಮತದಾನ ಮಾಡಿದ ಪುರಾವೆಯಾಗಿ ತಮ್ಮ ಕೈಬೆರಳಿನ ಶಾಯಿ ಪರಿಶೀಲಿಸಿ, ಮತದಾನ ಮಾಡದೇ ಇರುವುದು ಕಂಡು ಬಂದಲ್ಲಿ ಕ್ರಮ ಕೈಗೊಳ್ಳುವ ಭರವಸೆ ನೀಡಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಹಾಗಾಗಿ ಈ ಬಾರಿ ನಗರದಲ್ಲಿ ಕೆಲಸ ಮಾಡುವ ಲಕ್ಷಾಂತರ ಐಟಿ ಉದ್ಯೋಗಿಗಳು ಸಕ್ರಿಯವಾಗಿ ಮತದಾನದಲ್ಲಿ ತೊಡಗುವ ಆಶಯ ಇಟ್ಟುಕೊಳ್ಳಲಾಗಿದೆ. ಇದರ ಜೊತೆಗೆ ಕಾಸಿಯಾ ಮತ್ತು ಗಾರ್ಮೆಂಟ್ ಕಾರ್ಖಾನೆ ಸೇರಿದಂತೆ ಕೈಗಾರಿಕಾ ಸಂಘ ಸಂಸ್ಥೆಗಳಿಗೂ ಮನವಿ ಮಾಡಲಾಗಿದ್ದು ಅವರೆಲ್ಲರಿಂದ ಮತದಾನ ಹೆಚ್ಚಳಕ್ಕೆ ಸಹಕಾರ ನೀಡುವ ಭರವಸೆ ದೊರೆತಿದೆ. ಆದ್ದರಿಂದ ಈ ಬಾರಿ ಮತದಾನದ ಪ್ರಮಾಣ ಹೆಚ್ಚಾಗಲಿದೆ ಎಂಬ ಅದಮ್ಯ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ.

ಇನ್ನು ಚಿತ್ರನಟ ರಮೇಶ್ ಅರವಿಂದ್ ಅವರನ್ನು ಚುನಾವಣಾ ಬ್ರಾಂಡ್ ಅಂಬಾಸಿಡರ್ ಆಗಿ ನೇಮಕ ಮಾಡಿಕೊಂಡಿದ್ದು ಮತದಾರರಲ್ಲಿ ಜಾಗೃತಿ ಮತ್ತು ಶೇಕಡಾವಾರು ಮತ ಪ್ರಮಾಣವನ್ನು ಹೆಚ್ಚಿಸಲು ಅವರು ನೆರವಾಗುತ್ತಾರೆ ಎಂದು ಬಿಬಿಎಂಪಿ ಆಯುಕ್ತ ಹಾಗೂ ಚುನಾವಣಾಧಿಕಾರಿಯೂ ಆಗಿರುವ ಮಂಜುನಾಥ್ ಪ್ರಸಾದ್ ಹೇಳಿದ್ದಾರೆ.

ಮಾರ್ಚ್ 10 ರಂದು ಕೇಂದ್ರ ಚುನಾವಣಾ ಆಯೋಗ ವೇಳಾಪಟ್ಟಿ ಪ್ರಕಟ ಮಾಡಿ, ಚುನಾವಣಾ ಪ್ರಕ್ರಿಯೆಗೆ ಚಾಲನೆ ಕೊಟ್ಟಿದ್ದರೂ ಕಳೆದ ಅಕ್ಟೋಬರ್ ನಲ್ಲಿಯೇ ಚುನಾವಣಾ ಸಿದ್ಧತೆಗಳನ್ನು ಆರಂಭಿಸಿದ್ದು 8,514 ಬೂತ್ ಮಟ್ಟದ ಅಧಿಕಾರಿಗಳನ್ನು ನೇಮಕ ಮಾಡಿ ಮತಪಟ್ಟಿಗೆ ಹೆಸರು ಸೇರ್ಪಡೆ ಮತ್ತು ಪರಿಷ್ಕರಣೆ ಮಾಡುವ ಕೆಲಸವನ್ನು ಆರಂಭಿಸಲಾಗಿದೆ. ಮತಪಟ್ಟಿ ಸಿದ್ಧಪಡಿಸುವುದರಿಂದ ಇವಿಎಮ್‌ಗಳಿಗೆ ಅಭ್ಯರ್ಥಿಗಳ ಹೆಸರು ಜೋಡಣೆ ಮಾಡುವವರೆಗೆ ಚುನಾವಣಾ ಕಾರ್ಯದಲ್ಲಿ ತೊಡಗುವ ಸಿಬ್ಬಂದಿಗೆ ಮೂರು ಹಂತದ ತರಬೇತಿಯನ್ನು ನೀಡಲಾಗುತ್ತಿದೆ.

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಅಭ್ಯರ್ಥಿಗಳು ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿಯಲ್ಲೂ, ಬೆಂಗಳೂರು ಸೆಂಟ್ರಲ್ ಲೋಕಸಭಾ ಕ್ಷೇತ್ರದ ಅಭ್ಯರ್ಥಿಗಳು ಅಪರ ಆಯುಕ್ತರು (ಆಡಳಿತ), ಬಿಬಿಎಂಪಿ ಕೇಂದ್ರ ಕಚೇರಿಯಲ್ಲೂ ಮತ್ತು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಅಭ್ಯರ್ಥಿಗಳು ಅಪರ ಆಯುಕ್ತರು (ದಕ್ಷಿಣ ವಲಯ) ಕಚೇರಿ, ಜಯನಗರ ಎರಡನೇ ಬ್ಲಾಕ್‌ನಲ್ಲಿ ಚುನಾವಣಾಧಿಕಾರಿಗಳಿಗೆ ನಾಮಪತ್ರ ಸಲ್ಲಿಸುವ ವ್ಯವಸ್ಥೆ ಮಾಡಲಾಗಿದೆ.

ಪ್ರತಿ 10 ರಿಂದ 12 ಮತಗಟ್ಟೆಗಳ ಮೇಲ್ವಿಚಾರಣೆಗಾಗಿ ಸೆಕ್ಟರ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಮೂರು ಫ್ಲೈಯಿಂಗ್ ಸ್ಕ್ವಾಡ್ ಮತ್ತು ಮೂರು ವಿಡಿಯೋ ತಂಡಗಳನ್ನು ರಚಿಸಲಾಗಿದ್ದು ಇವು ಮಾದರಿ ಚುನಾವಣಾ ನೀತಿ ಸಂಹಿತೆ ಕಟ್ಟುನಿಟ್ಟಾಗಿ ಜಾರಿಗೆ ತರಲು ಶ್ರಮಿಸಲಿವೆ.

ಚುನಾವಣಾ ಅಕ್ರಮ ತಡೆಗಟ್ಟಲು, ಕಾನೂನು ಸುವ್ಯವಸ್ಥೆ ಕಾಪಾಡಲು, ಮತದಾರರಲ್ಲಿ ಆತ್ಮವಿಶ್ವಾಸ ಮೂಡಿಸಲು ಮತ್ತು ಮಾದರಿ ನೀತಿ ಸಂಹಿತೆಗಳನ್ನು ಜಾರಿಗೆ ತರಲು ಮೂರು ರೀತಿಯ ಮೇಲ್ವಿಚಾರಕರನ್ನು ನೇಮಕ ಮಾಡಲಾಗಿದೆ. ಸಾಮಾನ್ಯ ವೀಕ್ಷಕರು, ಪೊಲೀಸ್ ವೀಕ್ಷಕರು ಮತ್ತು ವೆಚ್ಚ ನಿರ್ವಹಣಾ ವೀಕ್ಷಕರನ್ನು ನೇಮಕ ಮಾಡಲಾಗಿದೆ. ಇವರ ಪೈಕಿ ವೆಚ್ಚ ನಿರ್ವಹಣಾ ಮೇಲ್ವಿಚಾರಕರು ಮಾರ್ಚ್ 19 ರಿಂದಲೇ ತಮ್ಮ ಕೆಲಸ ಕಾರ್ಯಗಳನ್ನು ಆರಂಭಿಸಿ, ಚುನಾವಣೆ ಮುಗಿಯುವವರೆಗೂ ತಮ್ಮ ಕರ್ತವ್ಯ ನಿರ್ವಹಿಸಲಿದ್ದಾರೆ. ನಾಮಪತ್ರ ಸಲ್ಲಿಸಲು ಅಂತಿಮ ದಿನವಾದ ಮಾರ್ಚ್ 26 ರಿಂದ ಚುನಾವಣೆ ಪ್ರಕ್ರಿಯೆ ಮುಗಿಯುವವರೆಗೂ ಸಾಮಾನ್ಯ ಮತ್ತು ಪೊಲೀಸ್ ವೀಕ್ಷಕರು ತಮ್ಮ ಕರ್ತವ್ಯ ನಿರ್ವಹಿಸಲಿದ್ದಾರೆ.

ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಬ್ಬ ಸಹಾಯಕ ಚುನಾವಣಾಧಿಕಾರಿ ನೇಮಿಸಲಾಗಿದೆ. ಮಾದರಿ ನೀತಿ ಸಂಹಿತೆ ಪಾಲನೆ ಮತ್ತು ಚುನಾವಣಾ ಸಿದ್ಧತೆಯ ಜವಾಬ್ದಾರಿಯನ್ನು ಸಹಾಯಕ ಚುನಾವಣಾಧಿಕಾರಿಗಳು ನಿರ್ವಹಿಸಲಿದ್ದಾರೆ. ಮತಪಟ್ಟಿ ಪರಿಷ್ಕರಣೆ ಮತ್ತು ನಾಮಪತ್ರ ವಾಪಸ್ ಪಡೆದ ನಂತರ ಇವಿಎಮ್‌ಗಳಿಗೆ ಅಭ್ಯರ್ಥಿಗಳ ಹೆಸರು ಮತ್ತು ಚಿಹ್ನೆಯನ್ನು ಜೋಡಿಸಲು, ಚುನಾವಣಾ ಸಿಬ್ಬಂದಿಗೆ ಮೂರು ಹಂತದ ತರಬೇತಿ ನೀಡಲಾಗುತ್ತಿದೆ. ಇದಕ್ಕೆ ಐಟಿ ಇಲಾಖೆಯ ಸಹಾಯವನ್ನೂ ಸಹ ಪಡೆದುಕೊಳ್ಳಲಾಗಿದೆ. ಚುನಾವಣೆ ಎಂದರೆ ವ್ಯಕ್ತಿ ಇಲ್ಲವೇ ಪಕ್ಷದ ಸೋಲು, ಗೆಲುವಲ್ಲ. ಜನರಿಂದ, ಜನರಿಗಾಗಿ, ಜನರಿಗೋಸ್ಕರವಾಗಿಯೇ ನಡೆಯುವ ಸರ್ಕಾರದಲ್ಲಿ ಜನರ ಸಕ್ರಿಯ ಪಾಲ್ಗೊಳ್ಳುವಿಕೆಯೇ ಮುಖ್ಯವಾಗಿದೆ. ಬೇರೆಯವರ ಕಡೆ ಬೆಟ್ಟು ತೋರಿಸುವುದಕ್ಕೆ ಮೊದಲು ನಮ್ಮ ಪಾಲಿನ ಹೊಣೆಗಾರಿಕೆ, ಕರ್ತವ್ಯವನ್ನು ಲೋಪ ಇಲ್ಲದಂತೆ ಮಾಡಬೇಕು. ಸರ್ಕಾರ ಮತ್ತು ಜನಪ್ರತಿನಿಧಿಗಳನ್ನು ಮತದಾರರು ಪ್ರಶ್ನೆ ಮಾಡಬೇಕಾದರೆ, ಏಪ್ರಿಲ್ 18 ರಂದು ಪ್ರತಿಯೊಬ್ಬರೂ ಮತಗಟ್ಟೆಗೆ ಬರಬೇಕು, ಜನತಂತ್ರದ ಹಬ್ಬದಲ್ಲಿ ಭಾಗಿಯಾದ ಸಾಕ್ಷಿಗೆ ಕೈಬೆರಳಿನಲ್ಲಿ ಶಾಯಿಯನ್ನು ಹೆಮ್ಮೆಯಿಂದ ತೋರಿಸಬೇಕು.





downloaded from: www.kpscvaani.com

ಸ್ವೀಪ್

# ಬೀದರ ಜಿಲ್ಲೆಯಲ್ಲಿ ವಿನೂತನ ಕಾರ್ಯಕ್ರಮ

**ಗವಿಸಿದ್ದಪ್ಪ ಹೊಸಮನಿ**
ಸಹಾಯಕ ನಿರ್ದೇಶಕರು





**ಹಿಂ**ದುಳಿದ ಬೀದರ ಜಿಲ್ಲೆಯಲ್ಲಿ ಸಹಜವಾಗಿರುವ ಮಹಿಳೆಯರು, ಮಂಗಳಮುಖಿಯರು, ವಿಕಲಚೇತನರು ಮುಖ್ಯವಾಗಿ ಯುವಜನರನ್ನು ಮತದಾರರ ಪಟ್ಟಿಗೆ ತರುವಲ್ಲಿ ಜಿಲ್ಲೆಯಲ್ಲಿ ಸ್ವೀಪ್ ಸಮಿತಿಯಿಂದ ಅನೇಕ ಜಾಗೃತಿ ಕಾರ್ಯಗಳು ನಡೆದವು. ತಾಲೂಕುಮಟ್ಟದಲ್ಲಿ ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಸಮಾವೇಶ ನಡೆಸಿ, ವಿಶೇಷಚೇತನರು ಹಾಗೂ ಮಂಗಳಮುಖಿಯರು ಮತದಾರರ ಪಟ್ಟಿಯಿಂದ ಬಿಟ್ಟು ಹೋಗದಂತೆ ಜಿಲ್ಲಾ ಮಟ್ಟದಲ್ಲಿ ಅವರ ಸಮಾವೇಶ ನಡೆಸಿ ಜಾಗೃತಿ ಮೂಡಿಸಲಾಯಿತು. ಮತದಾರರ ಪಟ್ಟಿ ಪರಿಷ್ಕರಣೆ ಬಳಿಕ ಕಡಿಮೆ ಪ್ರಗತಿಯಾದ ಮತಗಟ್ಟೆಗಳನ್ನು ಗುರುತಿಸಿ, ಅಲ್ಲಿ ವಿಶೇಷವಾಗಿ ಜನಜಾಗೃತಿ ಮೂಡಿಸಲಾಗಿದೆ.

ಮೊದಲ ಹಂತದಲ್ಲಿ ಮತದಾರರ ನೋಂದಣಿ ಅಭಿಯಾನಕ್ಕೆ ಹೆಚ್ಚಿನ ಒತ್ತು ಕೊಡಲಾಗಿತ್ತು, ವ್ಯಾಪಕವಾಗಿ ಬ್ಯಾನರ್‌ಗಳನ್ನು ಅಳವಡಿಸಿ, ವಾಹನಗಳ ಮೇಲೆ ಸ್ಟಿಕರ್‌ಗಳನ್ನು ಅಂಟಿಸಿ, ಬಸ್ ಟಿಕೇಟ್‌ಗಳ ಮೂಲಕ ಜಾಗೃತಿ ಮೂಡಿಸಲಾಯಿತು. 18 ವರ್ಷ ಪೂರ್ಣಗೊಂಡವರು ಹತ್ತಿರದ ಬಿಎಲ್‌ಓಗಳನ್ನು ಸಂಪರ್ಕಿಸಿ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗೊಳಿಸುವಂತೆ ತಿಳಿಸಲಾಯಿತು. ವಿಶ್ವ ಶೌಚಾಲಯ ದಿನದಂದು ಮಾನವ ಸರಪಳಿ ರಚಿಸಿ ವಿದ್ಯಾರ್ಥಿಗಳಲ್ಲಿ ವಿಶೇಷ ಜಾಗೃತಿ ಮೂಡಿಸಲಾಯಿತು. ಮಾತೃಪೂರ್ಣ ಯೋಜನೆ ಫಲಾನುಭವಿಗಳ ಕಾರ್ಯಕ್ರಮ, ಮಾನ್ಯ ಜಿಲ್ಲಾಧಿಕಾರಿಯವರ ಗ್ರಾಮ ವಾಸ್ತವ್ಯ ಕಾರ್ಯಕ್ರಮ ಸೇರಿದಂತೆ ಜಿಲ್ಲೆಯಲ್ಲಿ ನಡೆದ ಅನೇಕ ಸಭೆ-ಸಮಾರಂಭಗಳು, ಸರ್ಕಾರದ ಎಲ್ಲಾ ಪ್ರಮುಖ ಕಾರ್ಯಕ್ರಮಗಳಲ್ಲಿ ನಾಟಕ ಪ್ರದರ್ಶನ, ಭಿತ್ತಿ ಪತ್ರಗಳ ವಿತರಣೆ ಸೇರಿದಂತೆ ಬಗೆ ಬಗೆಯ ಆಕರ್ಷಕ ಕಾರ್ಯಕ್ರಮಗಳನ್ನು ರೂಪಿಸಿ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿಗೆ ಒತ್ತು ಕೊಡುವಂತೆ ತಿಳಿಸಲಾಯಿತು. ಈ ಅಭಿಯಾನದಲ್ಲಿ ವ್ಯಾಪಕವಾಗಿ ವಿದ್ಯಾರ್ಥಿಗಳನ್ನು ತೊಡಗಿಸಲಾಗಿತ್ತು.

ಪ್ರೌಢಶಾಲಾ, ಪಿಯುಸಿ ಹಾಗೂ ಪದವಿ ಕಾಲೇಜು ಹಂತದಲ್ಲಿ ಸ್ವೀಪ್ ಸಮಿತಿಯಿಂದ ನಡೆದ ನಿಬಂಧ, ಚಿತ್ರಕಲಾ, ರಸಪ್ರಶ್ನೆ ಸ್ಪರ್ಧೆಗಳಲ್ಲಿ ಕನಿಷ್ಟ 2000 ವಿದ್ಯಾರ್ಥಿಗಳು ಸ್ಪರ್ಧಿಸಿದ್ದರು. ಇದರಿಂದಾಗಿ ಅಂದಾಜು 45,000 ಮಕ್ಕಳು ಮತದಾರರ ನೋಂದಣಿ ಅಭಿಯಾನ, ಚುನಾವಣಾ ಮಹತ್ವದ ಬಗ್ಗೆ ತಿಳಿದುಕೊಳ್ಳಲು ಪ್ರೇರಣೆ ಸಿಕ್ಕಿತು. ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ಹಾಗೂ ಪ್ರಮಾಣ ಪತ್ರ ವಿತರಿಸಿ, ಚುನಾವಣೆ, ಮತದಾನದ ಬಗ್ಗೆ ಅವರಿಗೆ ಗೌರವ ಬರುವಂತೆ ಮಾಡಲಾಯಿತು.

ಇಂತಹ ಪ್ರಯತ್ನದಿಂದಾಗಿ ಬೀದರ ಜಿಲ್ಲೆಯಲ್ಲಿ ಕಳೆದ ಚುನಾವಣೆಗೆ ಹೋಲಿಸಿದಲ್ಲಿ ಹೊಸದಾಗಿ ಸುಮಾರು 1.20





ಲಕ್ಷದಷ್ಟು ಜನ ಮತದಾರರು ಮತದಾರ ಪಟ್ಟಿಯಲ್ಲಿ ತಮ್ಮ ಹೆಸರು ನೋಂದಾಯಿಸಿರುವುದು ಮತ್ತು ಮತದಾರ ನೋಂದಣಿಯಲ್ಲಿ ಶೇ.10 ಹೆಚ್ಚಳ ಕಂಡು ಬಂದಿದ್ದು ವಿಶೇಷವಾಗಿ ಜಿಲ್ಲೆಯಲ್ಲಿ ಮಹಿಳಾ ಮತದಾರರ ಸಂಖ್ಯೆ ಹೆಚ್ಚಳವಾಗಿರುವುದು ಗಮನಾರ್ಹವಾಗಿದೆ.

**ರಾಷ್ಟ್ರೀಯ ಮತದಾರರ ದಿನಾಚರಣೆ:**

ಜಿಲ್ಲಾಡಳಿತ ಹಾಗೂ ಸ್ವೀಪ್‌ನಿಂದ ಜ.25ರಂದು ರಾಷ್ಟ್ರೀಯ ಮತದಾರರ ದಿನಾಚರಣೆಗೆ 10,000 ವಿದ್ಯಾರ್ಥಿಗಳು ಸಾಕ್ಷಿಯಾದರು. ಜಿಲ್ಲಾ ಹಾಗೂ ತಾಲೂಕು ಮತ್ತು ಮತಗಟ್ಟೆ ಮಟ್ಟದಲ್ಲಿ ಕೂಡ ವಿಭಿನ್ನವಾಗಿ ಆಚರಿಸಲಾಯಿತು. ರ‍್ಯಾಲಿಯಲ್ಲಿ 18 ವರ್ಷ ತುಂಬಿದ ಯುವ ಮತದಾರರು ಹಾಗೂ ಕಾಲೇಜು ವಿದ್ಯಾರ್ಥಿಗಳು ಸೇರಿ ಮತದಾನ ಜಾಗೃತಿ ಸಂದೇಶಕ್ಕೆ ಹೆಚ್ಚಿನ ಬಲ ತುಂಬಿದರು. ಲೋಕಸಭಾ ಚುನಾವಣೆ 2019 ಮತದಾನ ಮಹಾದಾನ, ಮತದಾನ ಎಲ್ಲರ ಕರ್ತವ್ಯ, ಪ್ರಜಾಪ್ರಭುತ್ವದ ಹಬ್ಬ ಎನ್ನುವ ಬ್ಯಾನರ್ ಹೊಂದಿ ಆಕರ್ಷಕವಾಗಿ ನಿರ್ಮಿಸಲಾಗಿದ್ದ ಸ್ತಬ್ಧಚಿತ್ರ ಜನಮನ ಸೆಳೆಯಿತು. ಈ ಕಾರ್ಯಕ್ರಮದಲ್ಲಿ ಹೊಸದಾಗಿ ನೋಂದಣಿಯಾಗಿರುವ ಮತದಾರರನ್ನು ಸನ್ಮಾನಿಸಲಾಯಿತು. ವಿಕಲಚೇತನರು ತಮ್ಮ ಗುರುತಿನ ಚೀಟಿಯನ್ನು ಗುರುತಿಸುವಂತಾಗಲು ವಿನೂತನವಾಗಿ ತಯಾರಿಸಲಾದ ಬ್ರೈಲ್ ಗುರುತಿನ ಚೀಟಿಗಳನ್ನು ಸಾಂಕೇತಿಕವಾಗಿ ಕಾರ್ಯಕ್ರಮದಲ್ಲಿ ವಿತರಿಸಲಾಯಿತು.

**ಯುವ ಮತದಾರರ ನೋಂದಣಿಗೆ ಒತ್ತು:**

ಜಿಲ್ಲೆಯಲ್ಲಿ ಯುವ ಮತದಾರರ ಹೆಸರು ನೋಂದಣಿಗೆ ಸ್ವೀಪ್ ವಿಶೇಷ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿತು. 2015-16 ಹಾಗೂ 2016-17ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಹಾಜರಾದ ಮಕ್ಕಳ ಹೆಸರು ಮತ್ತು ಮೊಬೈಲ್ ಸಂಖ್ಯೆ ಒಳಗೊಂಡಂತೆ ಅವರ ಸಂಪೂರ್ಣ ವಿಳಾಸ ಇರುವ ಪಟ್ಟಿಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ತಯಾರಿಸಿ ಆಯಾ ಶಾಲೆಗಳ ಮುಖ್ಯ ಶಿಕ್ಷಕರು ಸಂಬಂಧಿಸಿದ ಮತಗಟ್ಟೆ ಅಧಿಕಾರಿಗೆ ನೀಡಿ, ಹೆಸರು ನೋಂದಣಿಯಾಗದೇ ಇರುವ ಯುವ ವಿದ್ಯಾರ್ಥಿಗಳ ಹೆಸರನ್ನು ಮತದಾರರ ಪಟ್ಟಿ ವ್ಯಾಪ್ತಿಗೆ ತರುವ ವ್ಯವಸ್ಥೆ ಮಾಡಲಾಯಿತು. ಎಸ್ಸೆಸ್ಸೆಲ್ಸಿ ಪೂರ್ಣಗೊಳಿಸಿ ಪಿಯುಸಿಗೆ ಹಾಜರಾಗುವ ಮಕ್ಕಳ ಪಟ್ಟಿಯನ್ನು ಕೂಡ ಅವರ ಸಂಪೂರ್ಣ ವಿಳಾಸದೊಂದಿಗೆ ಸಂಬಂಧಿಸಿದ ಬಿಎಲ್‌ಓಗಳಿಗೆ ನೀಡಿ ಅವರಿಗೆ ಅರ್ಜಿ ನಮೂನೆ 6 ನೀಡಿ, ಮತದಾರರ ಪಟ್ಟಿಗೆ ಸೇರ್ಪಡೆಗೊಳ್ಳಲು ವ್ಯವಸ್ಥೆ ಮಾಡಲಾಯಿತು. ಆಯಾ ಕಾಲೇಜುಗಳ ಪ್ರಾಂಶುಪಾಲರ ಸಹಕಾರ ಪಡೆದು ಜಿಲ್ಲೆಯಲ್ಲಿರುವ ಎಲ್ಲಾ ಡಿಪ್ಲೋಮಾ, ಐಟಿಐ ಹಾಗೂ ಪದವಿ ಕಾಲೇಜುಗಳಲ್ಲಿ 1-1-2019ಕ್ಕೆ 18 ವರ್ಷ ತುಂಬುವ ಮಕ್ಕಳನ್ನು ಮತದಾರರ ಪಟ್ಟಿ ವ್ಯಾಪ್ತಿಗೆ ತರಲಾಯಿತು. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಅವರಿಂದ ಜಿಲ್ಲೆಯಲ್ಲಿ ಮಾಸಾಶನ ಪಡೆಯುವ ಯುವ ವಿಕಲಚೇತನರ ಪಟ್ಟಿ ಪಡೆದು 18 ವರ್ಷ ತುಂಬಿದವರನ್ನು ಗುರುತಿಸಿ ಅವರ ಹೆಸರನ್ನು ನೋಂದಣಿ ಮಾಡಿಸಲಾಯಿತು.

**ಚುನಾವಣಾ ಸಾಕ್ಷರತಾ ಕ್ಲಬ್:**

ಜಿಲ್ಲೆಯ ಎಲ್ಲಾ- ಕಾಲೇಜುಗಳಲ್ಲಿ ಮುಖ್ಯವಾಗಿ ಜಿಲ್ಲೆಯಲ್ಲಿನ





downloaded from: www.kpscvaani.com



ಎಲ್ಲಾ ಐಟಿಐ, ಡಿಪ್ಲೊಮಾ ಹಾಗೂ ಪಿಜಿ ಕೋರ್ಸ್ ನಡೆಸುವ ಎಲ್ಲಾ ಪದವಿ ಕಾಲೇಜುಗಳಲ್ಲಿ ಕೋರ್ಸ್ ವಿಷಯವಾರು ಚುನಾವಣಾ ಸಾಕ್ಷರತಾ ಕ್ಲಬ್‌ಗಳನ್ನು ಸ್ಥಾಪಿಸಲಾಗಿದೆ. ಜೊತೆಗೆ ಕ್ರಿಯಾಶೀಲ ಇರುವ ವಿದ್ಯಾರ್ಥಿಯನ್ನು ಕ್ಯಾಂಪಸ್ ಅಂಬಾಸಿಡರ್ ಎಂದು ಆಯ್ಕೆ ಮಾಡಿ, ಆಯಾ ಶಾಲಾ ಕಾಲೇಜುಗಳಲ್ಲಿನ ಶಿಕ್ಷಕರು– ಉಪನ್ಯಾಸಕರೊಬ್ಬರಿಗೆ ಉಸ್ತುವಾರಿ ವಹಿಸಿ, ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ, ಮತದಾನ ಮಾಡುವುದು, ಮತಯಂತ್ರಗಳ ಬಗ್ಗೆ ಚುನಾವಣಾ ಮಾಸ್ಟರ್ ತರಬೇತುದಾರರಿಂದ ಜಿಲ್ಲಾ ಹಾಗೂ ತಾಲೂಕು ಮಟ್ಟಗಳಲ್ಲಿ ತರಬೇತಿ ನಡೆದಿವೆ. ಈ ವಿಷಯದಲ್ಲಿ ಉತ್ತಮ ಪ್ರಗತಿ ಸಾಧಿಸಿದವರಿಗೆ ಸನ್ಮಾನ ಮಾಡಲಾಯಿತು.

**ಮತದಾರರ ಜಾಗೃತಿ ವೇದಿಕೆ:**

ಜಿಲ್ಲಾ, ತಾಲೂಕು, ಗ್ರಾಮಮಟ್ಟದ ಎಲ್ಲ ಸರ್ಕಾರಿ ಇಲಾಖೆಗಳಲ್ಲಿ ಮತದಾರರ ಜಾಗೃತಿ ವೇದಿಕೆ ರಚನೆಯಾಗಿದ್ದು, ಅಲ್ಲಿ ನಡೆಸುವ ಚಟುವಟಿಕೆಗಳ ಮಾಹಿತಿಯನ್ನು ಸ್ವೀಪ್ ಸಮಿತಿಗೆ ತಲುಪಿಸಲಾಗುತ್ತಿದೆ. ಜೊತೆಗೆ ಜಿಲ್ಲೆಯ ಎಲ್ಲಾ ಮತಗಟ್ಟೆಗಳಲ್ಲಿ ಯುವಕರು ಸೇರಿದಂತೆ ಹತ್ತು ಜನರನ್ನು ಒಳಗೊಂಡ ತಲಾ ಒಂದೊಂದು ಚುನಾವಣಾ ಜಾಗೃತಿ ಕ್ಲಬ್ ರಚನೆಯಾಗಿದ್ದು, ತಹಸೀಲ್ದಾರರು ಈ ಬಗ್ಗೆ ಮಾಹಿತಿ ಒದಗಿಸುತ್ತಿದ್ದಾರೆ. ಸ್ವೀಪ್ ಸಮಿತಿ ಹಾಗೂ ಮತದಾರರ ಸಾಕ್ಷರತಾ ಸಂಘದಿಂದ ಬ್ಲಾಕ್ ಹಂತದ ಮಾಸ್ಟರ್ ತರಬೇತುದಾರರಿಗೆ ತರಬೇತಿ ಕೂಡ ನಡೆಯಿತು.

**ಪ್ರಚಾರ ಫಲಕ ಹಾಗೂ ವಿಡಿಯೋ ಪ್ರದರ್ಶನ:**

ಮತದಾನ ಒಂದು ಪವಿತ್ರ ಕರ್ತವ್ಯ, ಮತದಾನ ನನ್ನ ಸಂವಿಧಾನ ಬದ್ಧ ಹಕ್ಕು ನಾನು ತಪ್ಪದೇ ಮತದಾನ ಮಾಡುತ್ತೇನೆ. ಪ್ರಜಾಪ್ರಭುತ್ವ ಬಲಗೊಳಿಸಿ ಎನ್ನುವ ಫಲಕಗಳು ಮತ್ತು ಬೃಹತ್ ಬ್ಯಾನರ್‌ಗಳೊಂದಿಗೆ ಸ್ವೀಪ್ ಕಾರ್ಯಕ್ರಮಗಳು ನಡೆದವು. ಸ್ವೀಪ್ ಕಾರ್ಯಕ್ರಮಗಳಲ್ಲಿ ಭಾಷಣಕಾರರ ಬದಲಾಗಿ ಮತದಾನದ ಮಹತ್ವ ತಿಳಿಸುವ ಕಿರುಚಿತ್ರ ಪ್ರದರ್ಶಿಸಲಾಯಿತು.

**ಮತಯಂತ್ರಗಳ ಬಗ್ಗೆ ಜಾಗೃತಿ:**

ಸ್ವೀಪ್‌ನಿಂದ ಜಿಲ್ಲೆಯಲ್ಲಿ ಇಲ್ಲಿವರೆಗೆ ಇವಿಎಂ ಹಾಗೂ ವಿವಿಪ್ಯಾಟ್ ವಿದ್ಯುನ್ಮಾನ ಮತಯಂತ್ರಗಳ ಬಗ್ಗೆ ದಾಖಲೆಯ ಪ್ರಮಾಣದಲ್ಲಿ ಜಾಗೃತಿ ಕಾರ್ಯಕ್ರಮಗಳು ಮತ್ತು ಪ್ರಾತ್ಯಕ್ಷಿಕೆ ನಡೆದಿವೆ. ಇಲ್ಲಿವರೆಗೆ 2,50,000 ರಷ್ಟು ಜನರು ಸ್ವತಃ ಮತ ಚಲಾಯಿಸಿ ಮತಯಂತ್ರಗಳ ಪಾರದರ್ಶಕತೆ ಬಗ್ಗೆ ಖಾತರಿಪಡಿಸಿಕೊಂಡಿರುತ್ತಾರೆ. ಸ್ವೀಪ್ ಸಮಿತಿಯ ಜಿಲ್ಲಾ ಸಂಯೋಜಕರು ಹಾಗೂ ಜಿಲ್ಲಾ ಚುನಾವಣಾ ಮಾಸ್ಟರ್ ಟ್ರೇನರ್‌ಗಳಾದ ಗೌತಮ ಅರಳಿ ಹಾಗೂ ರಾಜ್ಯಮಟ್ಟದ ಚುನಾವಣಾ ಮಾಸ್ಟರ್ ಟ್ರೇನರ್ ರಮೇಶ ಮಠಪತಿ ಅವರು ಅನೇಕ ಕಾರ್ಯಕ್ರಮಗಳಲ್ಲಿ ಮತದಾನ ಮಹತ್ವದ ಬಗ್ಗೆ ಮಾಹಿತಿ ನೀಡಿದರು. ಜಿಲ್ಲೆಯಲ್ಲಿ ವಿಶೇಷವಾಗಿ ಪತ್ರಕರ್ತರಿಗೆ, ವಕೀಲರಿಗೆ ಕೂಡ ಮತಯಂತ್ರಗಳ ಬಗ್ಗೆ ತರಬೇತಿ ನಡೆಯಿತು.

ಜಿಲ್ಲೆಯಲ್ಲಿ ವೇಳಾಪಟ್ಟಿಯನುಸಾರ ಸ್ವೀಪ್ ಚಟುವಟಿಕೆಗಳು ಅಚ್ಚುಕಟ್ಟಾಗಿ ನಡೆದಿವೆ. ಚುನಾವಣಾ ಆಯೋಗದ ನಿರ್ದೇಶನ ಮತ್ತು ಭಾರತ ಚುನಾವಣಾ ಆಯೋಗದ ಕಾರ್ಯನಿಮಿತ್ತ ಚುನಾವಣೆ ಪಟ್ಟ ವೀಕ್ಷಕರಾದ ಉಮಾ ಮಹಾದೇವನ್ ಅವರ ಮಾರ್ಗದರ್ಶನದಲ್ಲಿ ಸ್ವೀಪ್ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಮಾಡಲಾಗುತ್ತಿದೆ. ವಿಶೇಷವಾಗಿ ಮತದಾರರ ಪಟ್ಟಿಯಲ್ಲಿ ಯುವ ಮತದಾರರ ನೋಂದಣಿಗೆ ಮತ್ತು ವಿಶೇಷ ಚೇತನರಿಗೆ ಅಗತ್ಯ ಸೌಕರ್ಯಗಳನ್ನು ಕಲ್ಪಿಸಲು ಒತ್ತು ಕೊಡಲಾಗುತ್ತಿದೆ, ಈ ಬಾರಿಯ ಮತದಾನದಲ್ಲಿ ಶೇಕಡವಾರು ಪ್ರಮಾಣದಲ್ಲಿ ಗರಿಷ್ಠ ಮಟ್ಟಕ್ಕೆ ಕೊಂಡೊಯ್ಯಲು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಸ್ವೀಪ್ ಸಮಿತಿಯ ಅಧ್ಯಕ್ಷರಾದ ಮಹಾಂತೇಶ ಬೀಳಗಿ ಅವರು ಅತ್ಯುತ್ತಮ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ.

Published by : The Director, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Abhimaani Publications Pvt. Ltd.,, Dr Rajkumar Road, Rajajinagar, Bangalore - 560 010

downloaded from: www.kpscvaani.com